ಮಂಗಳವಾರ, ಆಗಸ್ಟ್ 24, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಜನಪದ ಕಲಾವಿದರು ಚೆನ್ನೈನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಪ್ರಭಟನೆಯಲ್ಲಿ ಕಲಾವಿದರೊಬ್ಬರು ವೇಷ ತೊಟ್ಟು ಪಾಲ್ಗೊಂಡಿದ್ದರು



ಶೇಕಡ 60ರಷ್ಟು ವಿದ್ಯಾರ್ಥಿಗಳು ಹಾಜರು • ಶಾಲಾ–ಕಾಲೇಜುಗಳಲ್ಲಿ ಸುರಕ್ಷತೆಗೆ ಆದ್ಯತೆ

ಹೊಸ ಹುರುಪಿನಲ್ಲಿ ಶಾಲೆಗೆ ಬಂದ ಮಕ್ಕಳು

ಪ್ರಜಾವಾಣಿ ವಾರ್ತೆ





ಮಲ್ಲೇಶ್ವರದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕಿಯೊಬ್ಬರು ವಿದ್ಯಾರ್ಥಿನಿಗೆ ಗುಲಾಬಿ ಹೂವು ನೀಡಿ ತರಗತಿಗೆ ಸ್ವಾಗತಿಸಿದರು (ಎಡಚಿತ್ರ) ನಗರದ ಟಿ. ದಾಸರಹಳ್ಳಿಯಲ್ಲಿರುವ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕಿಯೊಬ್ಬರು ಸೋಮವಾರ ಪಾಠ ಮಾಡಿದರು – ಪ್ರಜಾವಾಣಿ ಚಿತ್ರಗಳು

ಬೆಂಗಳೂರು: ತಳಿರು ತೋರಣ, ಬಣ್ಣ ಬಣ್ಣದ ಬಲೂನ್‌ಗಳಿಂದ ಅಲಂಕೃತಗೊಂಡ ಶಾಲೆಯ ಮುಖ್ಯದ್ವಾರಗಳು, ಆವರಣದಲ್ಲಿ ರಂಗೋಲಿಯ ಚಿತ್ತಾರ, ನಗುಮೊಗದೊಂದಿಗೆ ಹೂವು ಹಾಗೂ ಸಿಹಿ ನೀಡಿ ಆತ್ಮೀಯವಾಗಿ ವಿದ್ಯಾರ್ಥಿಗಳನ್ನು ಬರಮಾಡಿಕೊಂಡ ಶಿಕ್ಷಕರು, ಬಹಳ ದಿನಗಳ ನಂತರ ಸಿಕ್ಕ ಸಹಪಾಠಿಗಳೊಂದಿಗೆ ಸಂಭ್ರಮಿಸಿದ ಮಕ್ಕಳು..

ನಗರದಲ್ಲಿ ಸೋಮವಾರ ಬೆಳಿಗ್ಗೆ ವಿವಿಧ ಶಾಲೆ, ಕಾಲೇಜುಗಳ ಆವರಣದಲ್ಲಿ ಕಂಡು ಬಂದ ದೃಶ್ಯಗಳಿವು. ಸುಮಾರು ಒಂದೂವರೆ ವರ್ಷದ ಬಳಿಕ ಶಾಲೆ, ಕಾಲೇಜುಗಳನ್ನು ಕಂಡ ವಿದ್ಯಾರ್ಥಿಗಳಲ್ಲಿ ಹಬ್ಬದ ವಾತಾವರಣ ಇತ್ತು. ಕೆಲವು ಶಾಲೆಗಳಲ್ಲಿ ಮಕ್ಕಳಿಗೆ ಆರತಿ ಮಾಡಿ ಸ್ವಾಗತಿಸಲಾಯಿತು.

ತರಗತಿಗಳು ನಡೆಯದೆ ಪಟ್ಟ ಪಡಿಪಾಟಲು, ಅರ್ಥವಾಗದ ಆನ್‌ಲೈನ್ ತರಗತಿ, ಸಮಸ್ಯೆಗಳಿಗೆ ಸಿಗದ ಉತ್ತರ, ನೆಟ್‌ವರ್ಕ್ ಸಿಗದೆ ಅನುಭವಿಸಿದ ಸಂಕಟವನ್ನು ವಿದ್ಯಾರ್ಥಿಗಳು ಹಂಚಿಕೊಂಡು ಹಗುರವಾದರು.

'ಮನೆಯಲ್ಲಿ ಇದ್ದೂ ಇದ್ದು ಬೇಸರವಾಗಿತ್ತು. ಆನ್‌ಲೈನ್ ತರಗತಿಯಲ್ಲಿ ಕೇಳುತ್ತಿದ್ದ ಪಾಠ ಅಷ್ಟೊಂದು ಸರಿಯಾಗಿ ಅರ್ಥವಾಗುತ್ತಿರಲಿಲ್ಲ. ಎಷ್ಟೇ ಓದಿದರೂ ತಲೆಗೆ ಹೋಗುತ್ತಿರಲಿಲ್ಲ. ಶಾಲೆ ಪ್ರಾರಂಭವಾಗಿರುವುದು ಖುಷಿ ಕೊಟ್ಟಿದೆ' ಎಂದು 9ನೇ ತರಗತಿಯ ವಿದ್ಯಾರ್ಥಿನಿ ಅಂಕಿತಾ ಹೇಳಿದಳು.

ಸುರಕ್ಷತೆಗೆ ಆದ್ಯತೆ: 9ರಿಂದ 12ರ ವರೆಗಿನ ಭೌತಿಕ ತರಗತಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿರುವ ಪ್ರತ್ಯೇಕ ಮಾರ್ಗಸೂಚಿ ಅನುಸಾರವೇ ಆರಂಭಿಸಲಾಯಿತು. ಶಾಲೆಯ ಆವರಣದಲ್ಲಿಯೇ ಸ್ಯಾನಿಟೈಸರ್ ಹಾಗೂ ಮಾಸ್ಕ್ ವ್ಯವಸ್ಥೆ ಮಾಡಲಾಗಿತ್ತು. ಶಿಕ್ಷಕರು ಖುದ್ದು ಮುತುವರ್ಜಿ ವಹಿಸಿ ಕೋವಿಡ್ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದರು.

ಶಾಲೆಗಳಲ್ಲಿ ಮೊದಲ ದಿನ ಸುಮಾರು ಶೇ 55ರಷ್ಟು, ಕಾಲೇಜುಗಳಲ್ಲಿ ಶೇ 60ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭೌತಿಕ ತರಗತಿಗಳಿಗೆ ಹಾಜರಾದರು.

ಆನ್‌ಲೈನ್ ತರಗತಿಯಿಂದ ಬೇಸತ್ತಿದ್ದ ವಿದ್ಯಾರ್ಥಿಗಳು ಹೊಸ ಹುರುಪಿನಲ್ಲಿ ಭೌತಿಕ ತರಗತಿಗಳಲ್ಲಿ ಪಾಲ್ಗೊಂಡರು. ಪಠ್ಯಕ್ರಮ ಬೋಧನೆ ಬದಲು, ಪುನಶ್ಚೇತನ ತರಗತಿಗಳಿಗೆ ಆದ್ಯತೆ ನೀಡಲಾಗಿತ್ತು.

ಶಿಕ್ಷಣ ಸಚಿವರ ಭೇಟಿ: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಆರ್.ವಿ. ಬಾಲಕಿಯರ ಪ್ರೌಢಶಾಲೆಗೆ ಭೇಟಿ ನೀಡಿ, ಶಾಲೆಯಲ್ಲಿ ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳನ್ನು ಪರಿಶೀಲಿಸಿದರು. ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಂದಿಗೆ ಚರ್ಚೆ ನಡೆಸಿದರು.

'ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶಾಲಾ ತರಗತಿಗಳು ಪೂರಕವಾಗಿ ಕಾರ್ಯನಿರ್ವಹಿಸಲಿದ್ದು, ರಾಜ್ಯ ಸರ್ಕಾರವು ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಶೈಕ್ಷಣಿಕ ಅಭಿವೃದ್ಧಿಯತ್ತ ಗಮನ ಹರಿಸಲಿದೆ' ಎಂದು ನಾಗೇಶ್ ಹೇಳಿದರು.

ಸಂಸದ ತೇಜಸ್ವಿ ಸೂರ್ಯ, ಸಾರ್ವಜನಿಕ ಶಿಕ್ಷಣ ಇಲಾಖೆಯ ಹಲವು ಅಧಿಕಾರಿಗಳ ಹಾಜರಿದ್ದರು.



ಶಾಲಾ ತರಗತಿಗಳು ಆರಂಭವಾಗಿರುವುದು ಕಲಿಕಾ ಚಟುವಟಿಕೆಗೆ ಹೊಸ ಮೆರುಗು ನೀಡಲಿದೆ. ಭೌತಿಕ ತರಗತಿ ಆರಂಭಿಸಿದ ರಾಜ್ಯಸರ್ಕಾರದ ಕ್ರಮ ಶ್ಲಾಘನೀಯ

ತೇಜಸ್ವಿ ಸೂರ್ಯ, ಸಂಸದ

'ಧೈರ್ಯವಾಗಿ ಶಾಲೆಗೆ ಕಳುಹಿಸಿ'

ವಸತಿ ಸಚಿವ ವಿ.ಸೋಮಣ್ಣ ಅವರು ಗೋವಿಂದರಾಜ ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬಿಬಿಎಂಪಿ ಶಾಲೆಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಮಾತನಾಡಿದರು.

'ಒಂದೂವರೆ ವರ್ಷದ ಬಳಿಕ ಶಾಲೆಗಳು ಆರಂಭವಾಗಿವೆ. ಶಾಲೆ ಆರಂಭದ ದಿನವೇ ಉತ್ತಮ ಹಾಜರಿ ಇರುವುದನ್ನು ಕಂಡು ಖುಷಿಯಾಗಿದೆ. ಕೋವಿಡ್ ಸಂಕಷ್ಟದ ಸಮಯದಲ್ಲಿ ಮಕ್ಕಳು ಶಾಲೆಗೆ ಹಾಜರಾಗುವ ಬಗ್ಗೆ ಇದ್ದ ದುಗುಡ ದೂರವಾಗಿದೆ' ಎಂದರು.

'ಶಾಲಾ–ಕಾಲೇಜುಗಳಲ್ಲಿ ಎಲ್ಲ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪೋಷಕರು ಯಾವುದೇ ಆತಂಕವಿಲ್ಲದೆ ಮಕ್ಕಳನ್ನು ಶಾಲೆಗೆ ಕಳುಹಿಸಿ' ಎಂದೂ ಹೇಳಿದರು.

ಅಂಕಿ–ಅಂಶ

2,347 9ನೇ ತರಗತಿಗೆ ದಾಖಲಾಗಿರುವ ವಿದ್ಯಾರ್ಥಿಗಳು

1,239 ಸೋಮವಾರ ಹಾಜರಾಗಿದ್ದ ವಿದ್ಯಾರ್ಥಿಗಳು

2,392 10ನೇ ತರಗತಿಗೆ ದಾಖಲಾಗಿರುವ ವಿದ್ಯಾರ್ಥಿಗಳು

1,335 ಸೋಮವಾರ ಹಾಜರಾಗಿದ್ದ ವಿದ್ಯಾರ್ಥಿಗಳು

ಲೋಕಾಯುಕ್ತ ವರದಿ ನೋಡಲ್ ಅಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಲೋಕಾಯುಕ್ತ ಕಚೇರಿಯಿಂದ ಬಂದ ವಿಚಾರಣಾ ವರದಿಗಳ ಕುರಿತು ಕೈಗೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲು ನೋಡಲ್ ಅಧಿಕಾರಿಯನ್ನು ನೇಮಿಸಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಸೋಮವಾರ ತಿಳಿಸಿದೆ.

ಲೋಕಾಯುಕ್ತ ಕಾಯ್ದೆಯಡಿ ಸಲ್ಲಿಕೆಯಾದ 141 ವರದಿಗಳಲ್ಲಿ 128 ವರದಿಗಳಿಗೆ ಸಂಬಂಧಿಸಿದಂತೆ 14 ಇಲಾಖೆಗಳು ಕ್ರಮ ಕೈಗೊಂಡ ವರದಿಗಳನ್ನು ಸಲ್ಲಿಸಿವೆ ಎಂದು ನ್ಯಾಯಮೂರ್ತಿ ಸತೀಶ್‌ಚಂದ್ರ ಶರ್ಮಾ ಅವರಿದ್ದ ಪೀಠಕ್ಕೆ ಸರ್ಕಾರ ವಿವರಿಸಿತು.

ಸರ್ಕಾರವು ಕಾಯ್ದೆಯ ನಿಬಂಧನೆಗಳನ್ನು ಪಾಲಿಸುತ್ತಿಲ್ಲ. ಕಾಯ್ದೆಯ ಸೆಕ್ಷನ್ 12(1) ಪ್ರಕಾರ ನಿಗದಿತ ಸಮಯದಲ್ಲಿ ಸರ್ಕಾರ ಕ್ರಮ ಕೈಗೊಂಡು ವರದಿ ಸಲ್ಲಿಸಬೇಕಾಗುತ್ತದೆ. ಸರ್ಕಾರ ಅದನ್ನು ಮಾಡುತ್ತಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಸಾಯಿದತ್ತ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ದೂರಿದ್ದರು.

ಈ ಸಂಬಂಧ ಸರ್ಕಾರಕ್ಕೆ ಮೆಮೊ ಸಲ್ಲಿಸಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ(ಕಣ್ಗಾವಲು) ಜಂಟಿ ಕಾರ್ಯದರ್ಶಿ ಎಲ್. ಶಾರದಾ, ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ ಸೇರಿ 10 ಇಲಾಖೆಗಳಿಂದ ಮಾಹಿತಿ ನಿರೀಕ್ಷೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ. ಮೆಮೊ ಪರಿಶೀಲಿಸಿದ ಪೀಠ, ವಿಚಾರಣೆಯನ್ನು ಸೆ.9ಕ್ಕೆ ಮುಂದೂಡಿತು.



ಆಭರಣ ಪ್ರದರ್ಶನ

ಚಿನ್ನ ಮತ್ತು ವಜ್ರದ ಆಭರಣಗಳ ಮಾರಾಟ ಕಂಪನಿಯಾದ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ತನ್ನ 'ಬ್ರೈಡ್ಸ್ ಆಫ್ ಇಂಡಿಯಾ' ಅಭಿಯಾನದ 9ನೇ ಆವೃತ್ತಿಗೆ ಬೆಂಗಳೂರಿನ ಜಯನಗರದ ಮಳಿಗೆಯಲ್ಲಿ ಚಾಲನೆ ನೀಡಿತು. ರೂಪದರ್ಶಿಯರು ಹೊಸ ವಿನ್ಯಾಸದ, ವಿಭಿನ್ನ ಚಿನ್ನಾಭರಣಗಳನ್ನು ಪ್ರದರ್ಶಿಸಿದರು

ಅಕ್ರಮ ಮರಳು ಗಣಿಗಾರಿಕೆ ಕಾಲ ಮಿತಿಯಲ್ಲಿ ಕಡಿವಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಅಕ್ರಮ ಮರಳು ಗಣಿಗಾರಿಕೆಗೆ ಕಾಲ ಮಿತಿಯಲ್ಲಿ ಕಡಿವಾಣ ಹಾಕುತ್ತೇನೆ' ಎಂದು ಗಣಿ ಮತ್ತು ಭೂವಿಜ್ಞಾನ ಸಚಿವ ಹಾಲಪ್ಪ ಆಚಾರ್ ತಿಳಿಸಿದ್ದಾರೆ.

ಇಲಾಖೆಯ ಪ್ರಗತಿ ಪರಿಶೀಲನೆಯ ಬಳಿಕ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮರಳು ನೀತಿಗೆ ಕಾಯಕಲ್ಪ ನೀಡುವುದಾಗಿಯೂ ಹೇಳಿದರು.

ರಾಜ್ಯದಲ್ಲಿ ಸುಮಾರು 4.5 ಕೋಟಿ ಮೆಟ್ರಿಕ್ ಟನ್ ಮರಳಿಗೆ ಬೇಡಿಕೆ ಇದೆ. ಈಗ 3.7 ಕೋಟಿ ಮೆಟ್ರಿಕ್ ಟನ್ ಮರಳು ಪೂರೈಕೆ ಆಗುತ್ತಿದೆ. ಸುಮಾರು 80 ಲಕ್ಷ ಟನ್ ಮರಳು ಕೊರತೆ ಇದೆ. ಅಗತ್ಯ ಇರುವ ಎಲ್ಲರಿಗೂ ಮರಳು ಸುಲಭವಾಗಿ ಸಿಗುವಂತೆ ಮಾಡಲಾಗುವುದು. ಈ ಸಂಬಂಧ ರಚಿಸಿರುವ ತಜ್ಞರ ಸಮಿತಿ, ತೆಲಂಗಾಣ ಮಾದರಿಯಲ್ಲಿ ಮರಳು ಗಣಿಗಾರಿಕೆಗೆ ಶಿಫಾರಸು ಮಾಡಿದೆ ಎಂದು ಹಾಲಪ್ಪ ಆಚಾರ್ ತಿಳಿಸಿದರು.

ಈ ಸಾಲಿನಲ್ಲಿ ₹4 ಸಾವಿರ ಕೋಟಿ ರಾಜಸ್ವ ಸಂಗ್ರಹದ ಗುರಿ ನಿಗದಿ ಮಾಡಲಾಗಿದೆ. ಕಳೆದ ಜೂನ್ ಕೊನೆಯ ವೇಳೆಗೆ ₹1,387.55 ಕೋಟಿ ರಾಜಸ್ವ ಸಂಗ್ರಹವಾಗಿದೆ ಎಂದರು.

ರಾಜ್ಯದ ಗಣಿ ಬಾಧಿತ ಪ್ರದೇಶಗಳ ಅಭಿವೃದ್ಧಿಗಾಗಿ ₹3,645 ಕೋಟಿ ಮೊತ್ತದಷ್ಟು ಕ್ರಿಯಾ ಯೋಜನೆ ತಯಾರಿಸಿದ್ದು, ಈವರೆಗೆ 2,130 ಕ್ರಿಯಾ ಯೋಜನೆ ಅನುಷ್ಠಾನಗೊಳಿಸಲಾಗಿದೆ. ಇದಕ್ಕಾಗಿ ₹837.40 ಕೋಟಿ ಖರ್ಚು ಮಾಡಲಾಗಿದೆ. ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್‌ನಲ್ಲಿ ಜೂನ್ ಕೊನೆಯವರೆಗೆ ₹2,712 ಕೋಟಿ ಸಂಗ್ರಹವಾಗಿದೆ ಎಂದರು.

ಮಂಡ್ಯ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಯ ಸತ್ಯಾಸತ್ಯತೆ ಪರಿಶೀಲನೆಗೆ ಕಾರ್ಯಪಡೆ ರಚಿಸಲಾಗಿದ್ದು, ಈಗ ಅಕ್ರಮ ಗಣಿಗಾರಿಕೆ ನಡೆಯುತ್ತಿಲ್ಲ ಎಂದರು.

ರೈತ, ನೇಕಾರ, ಮೀನುಗಾರರ ಆದಾಯ ವೃದ್ಧಿಗೆ ಅಮೃತ ಯೋಜನೆ

ಬೆಂಗಳೂರು: ರೈತ, ನೇಕಾರ, ಮೀನುಗಾರರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಡಲು 750 ಅಮೃತ ಉತ್ಪಾದನಾ ಸಂಸ್ಥೆಗಳ ಸ್ಥಾಪನೆ ಸಂಬಂಧ ಸರ್ಕಾರ ಆದೇಶ ಹೊರಡಿಸಿದೆ.

ಮುಂದಿನ ಮೂರು ವರ್ಷಗಳಲ್ಲಿ ಇವುಗಳ ಸ್ಥಾಪನೆ ಆಗಲಿದ್ದು, ಇದಕ್ಕಾಗಿ ಸರ್ಕಾರ ₹225 ಕೋಟಿ ಖರ್ಚು ಮಾಡಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ಈ ಘೋಷಣೆ ಮಾಡಿದ್ದರು. ಕಳೆದ ವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಯೋಜನೆ ಜಾರಿಗೆ ಅನುದಾನ ನೀಡಲು ತೀರ್ಮಾನ ತೆಗೆದುಕೊಳ್ಳಲಾಗಿತ್ತು.

ಮರಣ ಪ್ರಮಾಣ ಅಲ್ಪ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಡುವವರ ಸಂಖ್ಯೆ ಸ್ವಲ್ಪ ತಗ್ಗಿದ್ದು, ಸೋಮವಾರ 10 ಮಂದಿ ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 0.86ಕ್ಕೆ ಇಳಿದಿದೆ.

ಹಿಂದಿನ 24 ಗಂಟೆಗಳಲ್ಲಿ 1,151 ಮಂದಿಗೆ ಹೊಸದಾಗಿ ಸೋಂಕು ತಗುಲಿದೆ. ಇದರೊಂದಿಗೆ ಸೋಂಕಿತರ ಒಟ್ಟು ಸಂಖ್ಯೆ 29.39 ಲಕ್ಷಕ್ಕೆ ಏರಿದೆ. ಕೋವಿಡ್ ದೃಢ ಪ್ರಮಾಣವು ಶೇ 1.08ರಷ್ಟಿದೆ.

ಒಂದು ದಿನದಲ್ಲಿ 1,442 ಜನರಿಗೆ ಕಾಯಿಲೆ ವಾಸಿಯಾಗಿದ್ದು, ಗುಣಮುಖರ ಸಂಖ್ಯೆ 28.82 ಲಕ್ಷಕ್ಕೆ ಹೆಚ್ಚಿದೆ. ಸದ್ಯ 20,255 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಬೆಂಗಳೂರಿನಲ್ಲಿ ಸೋಮವಾರ 270 ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆ ದಕ್ಷಿಣ ಕನ್ನಡದಲ್ಲಿ 236 ಜನ ಸೋಂಕಿತರಾಗಿದ್ದಾರೆ. ಕೊಡಗು ಹಾಗೂ ಮೈಸೂರಿನಲ್ಲಿ ಕ್ರಮವಾಗಿ 54 ಹಾಗೂ 76 ಮಂದಿ ಕೋವಿಡ್ ಪೀಡಿತರಾಗಿರುವುದು ಖಚಿತವಾಗಿದೆ. ಹಾಸನ (115) ಹಾಗೂ ಉಡುಪಿಯಲ್ಲಿ (137) ನೂರಕ್ಕಿಂತ ಅಧಿಕ ಪ್ರಕರಣಗಳು ದಾಖಲಾಗಿವೆ.

ಬಾಗಲಕೋಟೆ, ಬೀದರ್, ಧಾರವಾಡ ಹಾಗೂ ರಾಯಚೂರಿನಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. 12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಒಂದಂಕಿಯಷ್ಟಿವೆ.

ಕೋವಿಡ್ ಪೀಡಿತರ ಪೈಕಿ ದಕ್ಷಿಣ ಕನ್ನಡದಲ್ಲಿ ಮೂವರು ಹಾಗೂ ಹಾಸನದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಬೆಳಗಾವಿ, ಕೊಡಗು, ಮೈಸೂರು, ತುಮಕೂರು, ಉಡುಪಿಯಲ್ಲಿ ತಲಾ ಒಬ್ಬರು ಅಸುನೀಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಮರಣ ಪ್ರಕರಣಗಳು ದಾಖಲಾಗಿಲ್ಲ. ರಾಜ್ಯದಲ್ಲಿ ಈವರೆಗೆ 37,155 ಜನ ಸಾವಿಗೀಡಾಗಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿವೆ. ಸೋಮವಾರ 1.06 ಲಕ್ಷ ಮಂದಿಯ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರು ನಗರದ ಕೋವಿಡ್ ಅಂಕಿ–ಅಂಶ

12,35,306 ಒಟ್ಟು ಸೋಂಕಿತರು (12,35,036 ನಿನ್ನೆಯ ವಿವರ)

7,669	12,11,677	15,959
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	270
ಗುಣಮುಖ	363
ಸಾವು	0

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಮವಾರ ಕುಮಾರಕೃಪಾ ಅತಿಥಿ ಗೃಹದಲ್ಲಿ ರಾಜ್ಯದ ನ್ಯಾಯಾಂಗ ವಿಷಯಗಳ ಕುರಿತು ನ್ಯಾಯಮೂರ್ತಿಗಳ ಜೊತೆ ಸಮಾಲೋಚನೆ ನಡೆಸಿದರು. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ, ನ್ಯಾಯಮೂರ್ತಿಗಳಾದ ಸತೀಶ ಚಂದ್ರ ಶರ್ಮಾ, ಬಿ.ವಿ. ನಾಗರತ್ನಾ, ಅರವಿಂದ ಕುಮಾರ್, ಅಲೋಕ್ ಆರಾಧ್ಯ, ರಿಜಿಸ್ಟ್ರಾರ್ ಜನರಲ್ ಟಿ. ಜಿ. ಶಿವಶಂಕರ ಗೌಡ, ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ಸಭೆಯಲ್ಲಿ ಇದ್ದರು.

ರಾಜಧಾನಿಯಲ್ಲಿ ಶೂನ್ಯಕ್ಕಿಳಿದ ಸಾವಿನ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹಳ ದಿನಗಳ ನಂತರ ಬೆಂಗಳೂರು ನಗರದಲ್ಲಿ ಕೋವಿಡ್‌ನಿಂದ ಸತ್ತವರ ಸಂಖ್ಯೆ ಸೋಮವಾರ ಶೂನ್ಯಕ್ಕೆ ಇಳಿದಿದೆ. ಕೋವಿಡ್‌ನಿಂದ ಸಾವಿನ ದರವೂ ಶೇ 0.83ಕ್ಕೆ ಇಳಿಕೆಯಾಗಿದೆ.

2021ರ ಏಪ್ರಿಲ್ ಆರಂಭದಲ್ಲಿ ಕೋವಿಡ್‌ನಿಂದ ಸತ್ತವರ ದರವು ಶೇ 0.37ಕ್ಕೆ ಇಳಿಕೆಯಾಗಿತ್ತು. ಆದರೆ, ಎರಡನೇ ಅಲೆಯಲ್ಲಿ ಈ ರೋಗದಿಂದ ಸಾಯುತ್ತಿರುವವರ ಪ್ರಮಾಣ ಗಣನೀಯವಾಗಿ ಹೆಚ್ಚಾಗಿತ್ತು. ಜೂನ್ ತಿಂಗಳ ಆರಂಭದಲ್ಲಂತೂ ಪ್ರತಿ 100 ಮಂದಿ ಸೋಂಕಿತರಲ್ಲಿ ಏಳಕ್ಕೂ ಅಧಿಕ ಮಂದಿ ಸತ್ತಿದ್ದರು. ಕೋವಿಡ್ ಸಾವಿನ ದರ ಶೇ 7.41ಕ್ಕೆ ಏರಿಕೆಯಾಗಿತ್ತು.

ಕ್ರಮೇಣ ಕೊರೊನಾ ಸೋಂಕು ಪತ್ತೆ ಪ್ರಮಾಣ ಕಡಿಮೆಯಾಗಿದ್ದು, ಪ್ರಸ್ತುತ 0.52ಕ್ಕೆ ಇಳಿಕೆ ಆಗಿದೆ. ಕೋವಿಡ್‌ನಿಂದ ಸಾವಿನ ದರವೂ ಕಡಿಮೆಯಾಗಿದೆ. ನಗರದಲ್ಲಿ ಇದುವರೆಗೆ ಒಟ್ಟು 15,960 ಮಂದಿ ಈ ರೋಗಕ್ಕೆ ಬಲಿಯಾಗಿದ್ದಾರೆ. ರೋಗದಿಂದ ಚೇತರಿಸಿಕೊಳ್ಳುವವರ ಪ್ರಮಾಣ ಶೇ 98.09ಕ್ಕೆ ಏರಿಕೆಯಾಗಿದೆ ಎಂದು ಬಿಬಿಎಂಪಿ ಬಿಡುಗಡೆ ಮಾಡಿರುವ ಅಂಕಿ ಅಂಶಗಳು ಹೇಳುತ್ತಿವೆ.

ಹಾಸಿಗೆಗಳು ಖಾಲಿ ಖಾಲಿ: ಆಸ್ಪತ್ರೆಗಳಲ್ಲಿ ಸರ್ಕಾರಿ ಕೋಟಾದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕೋವಿಡ್ ರೋಗಿಗಳ ಸಂಖ್ಯೆ 190ಕ್ಕೆ ಇಳಿಕೆಯಾಗಿದೆ. ಪ್ರಸ್ತುತ ಆಸ್ಪತ್ರೆಗಳ ತೀವ್ರ ನಿಗಾ ಘಟಕಗಳಲ್ಲಿ (ಐಸಿಯು) 16 ಹಾಗೂ ವೆಂಟಿಲೇಟರ್ ಸೌಲಭ್ಯವಿರುವ ಐಸಿಯುಗಳಲ್ಲಿ 16 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸರ್ಕಾರಿ ಕೋಟಾದ ಚಿಕಿತ್ಸೆಗೆ ಈಗಲೂ 2,086 ಹಾಸಿಗೆಗಳನ್ನು ಬಿಬಿಎಂಪಿ ಹೊಂದಿದೆ. ಅವುಗಳಲ್ಲಿ 1896 ಹಾಸಿಗೆಗಳು ಖಾಲಿ ಇವೆ. ಸಾಮಾನ್ಯ ಐಸಿಯುಗಳಲ್ಲಿ 102 ಹಾಗೂ ವೆಂಟಿಲೇಟರ್ ಸೌಲಭ್ಯ ಹೊಂದಿರುವ ಐಸಿಯುಗಳಲ್ಲಿ 187 ಹಾಸಿಗೆಗಳು ಖಾಲಿ ಇವೆ.

'ಉಳ್ಳವರ ಪರವಾದ ನೂತನ ಶಿಕ್ಷಣ ನೀತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಜಾರಿಗೆ ತಂದಿರುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು (ಎನ್‌ಇಪಿ) ಸಮಾನ ಶಿಕ್ಷಣಕ್ಕೆ ಪೂರಕವಾಗಿಲ್ಲ. ಉಳ್ಳವರ ಪರವಾಗಿರುವ ಇಂತಹ ನೀತಿಯಿಂದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಲಿದೆ' ಎಂದು ಸಮಾನ ಶಿಕ್ಷಣ ಜನಾಂದೋಲನದ ಬಿ. ಶ್ರೀಪಾದ್ ಭಟ್ ಅಭಿಪ್ರಾಯಪಟ್ಟರು.

ಸಮುದಾಯ ಕರ್ನಾಟಕ ಸಂಸ್ಥೆ ವತಿಯಿಂದ 'ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಸಮಾನ ಅವಕಾಶ' ಕುರಿತು ಸೋಮವಾರ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ಚರ್ಚೆಯಲ್ಲಿ ಅವರು ಮಾತನಾಡಿದರು.

'ಒಂದು ವರ್ಷ ಓದಿದರೆ ಸರ್ಟಿಫಿಕೇಟ್, ಎರಡು ವರ್ಷ ಓದಿದರೆ ಡಿಪ್ಲೊಮಾ ಸರ್ಟಿಫಿಕೇಟ್ ನೀಡುವುದಾಗಿ ಹೇಳುತ್ತಿದ್ದಾರೆ. ಇದರಿಂದ ಅರ್ಧದಲ್ಲಿಯೇ ಶಿಕ್ಷಣ ತೊರೆಯುವವರ ಸಂಖ್ಯೆ ಹೆಚ್ಚಲಿದೆ. ಅಂದರೆ, ಒಂದು ವರ್ಷದ ಸರ್ಟಿಫಿಕೇಟ್ ತೆಗೆದುಕೊಂಡು ಕೆಲಸಕ್ಕೆ ಹೋಗುವವರೇ ಅನೇಕ. ಹೀಗೆ ಕೆಲಸದ ಅನಿವಾರ್ಯತೆ ಇರುವವರು ತಳಸಮುದಾಯದವರು ಮತ್ತು ಆರ್ಥಿಕವಾಗಿ ಹಿಂದುಳಿದವರು' ಎಂದರು.

'ವಿದೇಶದಲ್ಲಿ ನಾಲ್ಕು ವರ್ಷದ ಪದವಿಯ ಪಡೆದವರನ್ನು ಮಾತ್ರ ಪರಿಗಣಿಸುವುದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸರ್ಕಾರ ಹೇಳುತ್ತಿದೆ. ನಾಲ್ಕು ವರ್ಷದ ಪದವಿ ಮತ್ತು ಯಾವ ವಿಷಯವನ್ನಾದರೂ ತೆಗೆದುಕೊಳ್ಳಬಹುದು ಎಂಬುದೂ ನೀತಿಯಲ್ಲಿದೆ. ಬೇರೆ ಬೇರೆ ವಿಷಯ ತೆಗೆದುಕೊಳ್ಳುತ್ತಿದ್ದರೆ ಕಲಿಕೆಯೇ ಅರೆ-ಬರೆಯಾಗುತ್ತದೆ. ಯಾವ ವಿಷಯದಲ್ಲಿಯೂ ವಿದ್ಯಾರ್ಥಿಗಳು ಪರಿಪೂರ್ಣ ಕೌಶಲ ಪಡೆಯುವುದಿಲ್ಲ' ಎಂದರು.

'ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆ. ಶಿಕ್ಷಕರು ಬೇರೆ-ಬೇರೆ ಶಾಲೆಗಳಿಗೆ ಹೋಗಿ ಪಾಠ ಮಾಡಬೇಕು ಎಂದು ಹೇಳುತ್ತಾರೆ. ಇದನ್ನು ಜಾರಿಗೆ ತರಲು ಸಾಧ್ಯವೇ ? ಶಿಕ್ಷಕರು ಶಾಲೆಯಿಂದ ಶಾಲೆಗೆ ಓಡಾಡಲು ಆಗುತ್ತದೆಯೇ ಅಥವಾ ಇದು ಅಗತ್ಯವೇ' ಎಂದು ಪ್ರಶ್ನಿಸಿದರು.

'ಎನ್‌ಇಪಿಯು ಖಾಸಗಿ ಸಂಸ್ಥೆಗಳಿಗೆ ಮಣೆ ಹಾಕಲಿದೆ. ಹೀಗಾದಾಗ, ಆರ್ಥಿಕವಾಗಿ ಹಿಂದುಳಿದವರು ಶಿಕ್ಷಣದಿಂದ ವಂಚಿತರಾಗಬೇಕಾಗುತ್ತದೆ' ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಸಮುದಾಯ ಕರ್ನಾಟಕ ಸಹ ಕಾರ್ಯದರ್ಶಿ ಕೆ.ಎಸ್. ವಿಮಲಾ ಕಾರ್ಯಕ್ರಮ ನಿರ್ವಹಿಸಿದರು.

ಶಾಸಕ ಅಖಂಡ ಸಲ್ಲಿಸಿದ್ದ ಅರ್ಜಿ ವಜಾ

ನವದೆಹಲಿ: ಕಳೆದ ವರ್ಷದ ಆಗಸ್ಟ್‌ನಲ್ಲಿ ಬೆಂಗಳೂರಿನ ಪೂರ್ವ ಭಾಗದಲ್ಲಿ ನಡೆದ ಗಲಭೆಯ ಸಂಚಿನ ಹಿಂದೆ ಇದ್ದಾರೆ ಎಂಬ ಆರೋಪ ಎದುರಿಸುತ್ತಿರುವ ಮಾಜಿ ಮೇಯರ್ ಸಂಪತ್ ರಾಜ್ ಮತ್ತು ಇತರ ಆರೋಪಿಗಳಿಗೆ ನೀಡಿರುವ ಜಾಮೀನು ರದ್ದುಗೊಳಿಸಬೇಕು ಎಂದು ಕೋರಿ ಪುಲಿಕೇಶಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಆರ್. ಅಖಂಡ ಶ್ರೀನಿವಾಸಮೂರ್ತಿ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಹೃಷಿಕೇಶ್ ರಾಯ್ ಅವರಿದ್ದ ನ್ಯಾಯಪೀಠವು, ಯಾಸಿರ್ ಮಹಮ್ಮದ್ ಹಮೀದ್ ಮತ್ತು ಅವರ ಸಹೋದರ, ಪಾಲಿಕೆ ಮಾಜಿ ಸದಸ್ಯ ಅಬ್ದುಲ್ ರಕೀಬ್ ಜಾಕೀರ್ ಮತ್ತು ಮಾಜಿ ಮೇಯರ್ ಸಂಪತ್ ರಾಜ್ ಅವರ ಜಾಮೀನು ರದ್ದುಗೊಳಸಬೇಕು ಎಂದು ಶ್ರೀನಿವಾಸಮೂರ್ತಿ ಸಲ್ಲಿಸಿದ್ದ ಪ್ರತ್ಯೇಕ ಅರ್ಜಿಗಳನ್ನು ತಿರಸ್ಕರಿಸಿತು.

ಮಂತ್ರಾಲಯ: ವಿಡಿಯೊ ಧ್ವನಿ ಸುರುಳಿ ಬಿಡುಗಡೆ

ಪ್ರಜಾವಾಣಿ ವಾರ್ತೆ



ಮಂತ್ರಾಲಯದ ಯೋಗೀಂದ್ರ ಮಂಟಪದಲ್ಲಿ ಸೋಮವಾರ ಏರ್ಪಡಿಸಿದ್ದ 'ಅಭಿನಂದನ–ಅಭಿವಂದನ' ಕಾರ್ಯಕ್ರಮದಲ್ಲಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಸಾಹಿತಿ ದಿ.ಬೆಳಗೆರೆ ಮಹಾಲಕ್ಷ್ಮಮ್ಮ ಅವರು ರಚಿಸಿದ, ಸಂಗೀತ ವಿದ್ವಾನ್ ಜಗದೀಶ ಆಚಾರ್ಯ ಪುತ್ತೂರು ಗಾಯನ ಮಾಡಿರುವ 'ಆರಾಧನೆ ಭಕ್ತಿ ಆರಾಧನೆ' ವಿಡಿಯೊ ಧ್ವನಿ ಸುರುಳಿಯನ್ನು ಬಿಡುಗಡೆಗೊಳಿಸಿದರು

ರಾಯಚೂರು: ಬೆಂಗಳೂರಿನ ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನದಿಂದ ನಿರ್ಮಿಸಿರುವ ಸಾಹಿತಿ ದಿ.ಬೆಳಗೆರೆ ಮಹಾಲಕ್ಷ್ಮಮ್ಮ ಅವರು ರಚಿಸಿದ 'ಆರಾಧನೆ ಭಕ್ತಿ ಆರಾಧನೆ' ವಿಡಿಯೊ ಧ್ವನಿ ಸುರುಳಿಯನ್ನು ಮಂತ್ರಾಲಯದಲ್ಲಿ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಸೋಮವಾರ ಬಿಡುಗಡೆ ಮಾಡಿದರು.

ಸಂಗೀತ ವಿದ್ವಾನ್ ಜಗದೀಶ ಆಚಾರ್ಯ ಪುತ್ತೂರು ಅವರು ಸಂಗೀತಗಾಯನ ಮತ್ತು ನಿರ್ದೇಶನ ಮಾಡಿದ್ದು, ಶ್ರೀರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ಅಧ್ಯಕ್ಷೆ ಗೌರಿ ನಾಗರಾಜ ನಿರ್ಮಾಣ ಮಾಡಿದ್ದಾರೆ.

ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಮಾತನಾಡಿ 'ಈ ಹಿಂದೆ ವಿದ್ವಾನ್ ಜಗದೀಶ ಅವರು ಮಂತ್ರಾಕ್ಷತೆ ಅರ್ಥ ಹೇಳುವ ಸಂಗೀತ ವಿಡಿಯೊ ಬಿಡುಗಡೆ ಮಾಡಿದ್ದರು. ಅವರ ಕಂಠಸಿರಿಯಲ್ಲಿ ಇನ್ನಷ್ಟು ಹಾಡುಗಳು ಬರಲಿ. ಅವರ ಸಂಗೀತ ಸಾಧನೆ ಅದ್ಭುತವಾಗಿದೆ' ಎಂದರು.

'ದಿ.ಬೆಳಗೆರೆ ಮಹಾಲಕ್ಷ್ಮಮ್ಮ ಅವರು ರಾಯರ ಕುರಿತು ಒಳ್ಳೆಯ ಹಾಡುಗಳನ್ನು ಬರೆದಿದ್ದಾರೆ. ಸುಶ್ರಾವ್ಯ ಕಂಠಸಿರಿಯಲ್ಲಿ ಹಾಡಿದ, ನಿರ್ಮಾಣ ಮಾಡಿರುವ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಮೂಲ ರಾಮದೇವರಲ್ಲಿ ಪ್ರಾರ್ಥಿಸುತ್ತೇನೆ' ಎಂದರು.

'ಪ್ರತಿಷ್ಠಾನವು ವರ್ಷವಿಡೀ ಸಂಗೀತ, ಸಾಹಿತ್ಯ ಹಾಗೂ ಸಂಸ್ಕೃತಿ ಉಳಿಸಿ ಬೆಳೆಸುವ ಕೆಲಸ ಮಾಡುತ್ತಿದೆ. ಜಗದೀಶ ಅವರು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲಿ' ಎಂದು ಶುಭ ಹಾರೈಸಿದರು.

ಸಂಸ್ಕೃತವಿದ್ಯಾಪೀಠದ ಪ್ರಾಚಾರ್ಯ ಎನ್. ವಾದಿರಾಜಾಚಾರ್ಯ, ಪ್ರತಿಷ್ಠಾನದ ಅಧ್ಯಕ್ಷೆ ಗೌರಿ ನಾಗರಾಜ, ಕಾರ್ಯದರ್ಶಿ ನಾಗರಾಜ, ಶಿಕ್ಷಕಿ ಗೀತಾ ಶಾಸ್ತ್ರೀ ಇದ್ದರು.

ಇದೇ ಸಂದರ್ಭದಲ್ಲಿ ಪ್ರತಿಷ್ಠಾನದಿಂದ ಮಠದ ಪೀಠಾಧಿಪತಿಗಳಿಗೆ 'ಗುರುವಂದನಾ' ಸಲ್ಲಿಸಲಾಯಿತು.

ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ 350ನೇ ಆರಾಧನಾ ಮಹೋತ್ಸವದ ನಿಮಿತ್ತ ಸಪ್ತರಾತ್ರೋತ್ಸವ ಕಾರ್ಯಕ್ರಮಗಳು ಸಂಭ್ರಮದಿಂದ ನಡೆಯುತ್ತಿದ್ದು, ಮೂರನೇ ದಿನ ಸೋಮವಾರ ಪೂರ್ವಾರಾಧನೆಯನ್ನು ವಿಧಿವತ್ತಾಗಿ ನೆರವೇರಿಸಲಾಯಿತು.

ಸುದ್ದಿ 2 ನಿಮಿಷ

ಹುಚ್ಚರು ಕಾಂಗ್ರೆಸ್ ನಾಯಕರ ಬಗ್ಗೆ ಮಾತನಾಡುತ್ತಾರೆ: ಡಿಕೆಶಿ ಕಿಡಿ

ಬೆಂಗಳೂರು: 'ನಿತ್ಯ ಸುದ್ದಿಯಲ್ಲಿರಬೇಕು ಎಂಬ ಕಾರಣಕ್ಕೆ ಹುಚ್ಚರು, ಕಾಂಗ್ರೆಸ್ ನಾಯಕರ ಬಗ್ಗೆ ಮಾತನಾಡುತ್ತಿರುತ್ತಾರೆ. ಜನರ ಗಮನ ಬೇರೆಡೆ ಸೆಳೆಯಲು ಇಂಥ ಕುತಂತ್ರ ಅನುಸರಿಸುತ್ತಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕಿಡಿಕಾರಿದರು.

ತಮ್ಮ ನಿವಾಸದಲ್ಲಿ ಪಕ್ಷದ ಮುಖಂಡ ವಿನಯ್ ಕುಲಕರ್ಣಿ ಹಾಗೂ ಅಫ್ಗಾನಿಸ್ತಾನದ ವಿದ್ಯಾರ್ಥಿಗಳ ನಿಯೋಗದ ಜತೆ ಸೋಮವಾರ ಪ್ರತ್ಯೇಕವಾಗಿ ಮಾತುಕತೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರು ಅವಹೇಳನಕಾರಿಯಾಗಿ ಮಾತನಾಡಿರುವ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಕಾಂಗ್ರೆಸ್ ನಾಯಕರ ವಿರುದ್ಧ ಇಂಥ ಹೇಳಿಕೆ ನೀಡಿ ದಾರಿ ತಪ್ಪಿಸುತ್ತಿದ್ದಾರೆ' ಎಂದರು.

ವಿನಯ್ ಕುಲಕರ್ಣಿ ಜತೆ ಕಾಂಗ್ರೆಸ್: 'ವಿನಯ್ ಕುಲಕರ್ಣಿ ಪಕ್ಷದ ನಾಯಕ. ಮಂತ್ರಿಗಳಾಗಿ ಜೊತೆಗೆ ಕೆಲಸ ಮಾಡಿದ್ದೇವೆ. ದ್ವೇಷ ರಾಜಕೀಯದಿಂದ ಅವರಿಗೆ ನೋವಾಗಿದೆ. ಜೈಲಿನಲ್ಲಿ ಹಾಗೂ ಹೊರಗೆ ಅನುಭವಿಸಿದ ನೋವು ಹಂಚಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಿದ್ದಾರೆ. ಕಾರ್ಯಕರ್ತರು, ಪಕ್ಷ ಅವರ ಬೆನ್ನಿಗೆ ನಿಲ್ಲಲಿದೆ. ಕಾನೂನಿನಡಿ ಅವರಿಗೆ ನ್ಯಾಯ ಸಿಗುವ ವಿಶ್ವಾಸವಿದೆ' ಎಂದರು.



ಅಫ್ಗಾನ್ ವಿದ್ಯಾರ್ಥಿಗಳಿಗೆ ಧೈರ್ಯ: 'ಬೆಂಗಳೂರು ವಿ.ವಿ.ಯಲ್ಲಿ ಓದುತ್ತಿರುವ ಅಫ್ಗಾನಿಸ್ತಾನ ವಿದ್ಯಾರ್ಥಿಗಳು ನನ್ನನ್ನು ಭೇಟಿ ಮಾಡಿದ್ದರು. ಅಫ್ಗಾನಿಸ್ತಾನದಲ್ಲಿನ ಸದ್ಯದ ಘಟನೆಯಿಂದ ಅವರು ಮಾನಸಿಕವಾಗಿ ಕುಗ್ಗಿದ್ದಾರೆ. ನಮ್ಮ ರಾಜ್ಯದಲ್ಲಿ ಅವರಿಗೆ ಧೈರ್ಯ ನೀಡಬೇಕು. ಅವರ ದೇಹ ಮಾತ್ರ ಇಲ್ಲಿದ್ದು, ಮನಸ್ಸು ಅಲ್ಲಿರುವ ಪೋಷಕರ ಮೇಲಿದೆ' ಎಂದರು.

ಮೆಟ್ರೊ: ಮೈಸೂರು ರಸ್ತೆ–ಕೆಂಗೇರಿ ಹದಿನೈದೇ ನಿಮಿಷದ ಪ್ರಯಾಣ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿನ ಮೈಸೂರು ರಸ್ತೆ–ಕೆಂಗೇರಿ ವಿಸ್ತರಿತ ಮಾರ್ಗವು ಇದೇ 29ರ ಬೆಳಿಗ್ಗೆ 10.30ಕ್ಕೆ ಉದ್ಘಾಟನೆಗೊಳ್ಳಲಿದೆ. 30ರ ಬೆಳಿಗ್ಗೆಯಿಂದ ವಾಣಿಜ್ಯ ಸೇವೆ ಆರಂಭಗೊಳ್ಳಲಿದೆ.

ಮೈಸೂರು ರಸ್ತೆಯಿಂದ ಕೆಂಗೇರಿಯನ್ನು ಮೆಟ್ರೊ ರೈಲು ಹದಿನೈದೇ ನಿಮಿಷದಲ್ಲಿ ತಲುಪಲಿದೆ. ಪ್ರತಿ 10 ನಿಮಿಷಕ್ಕೊಂದು ರೈಲು ಈ ಮಾರ್ಗದಲ್ಲಿ ಸಂಚರಿಸಲಿದೆ. ಪ್ರಯಾಣಿಕರ ದಟ್ಟಣೆ ಆಧರಿಸಿ ಈ ಸಮಯದಲ್ಲಿ ವ್ಯತ್ಯಾಸವಾಗಲಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವ ಹರದೀಪ್‌ಸಿಂಗ್ ಪುರಿ ಅವರು ನಾಯಂಡಹಳ್ಳಿ ಮೆಟ್ರೊ ನಿಲ್ದಾಣದಲ್ಲಿ ಹಸಿರು ನಿಶಾನೆ ತೋರುವ ಮೂಲಕ ಮಾರ್ಗಕ್ಕೆ ಚಾಲನೆ ನೀಡುವರು. ನಂತರ ಕೆಂಗೇರಿ ಬಸ್ ಟರ್ಮಿನಲ್‌ನಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.29 ಕೋಟಿ	3.24 ಕೋಟಿ
ಸಕ್ರಿಯ ಪ್ರಕರಣ	1.78 ಕೋಟಿ	3.21 ಲಕ್ಷ
ಗುಣಮುಖ	19.06 ಕೋಟಿ	3.16 ಕೋಟಿ
ಸಾವು	44.49 ಲಕ್ಷ	4.35 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.57 ಲಕ್ಷ	11,359
ಗುಣಮುಖ	4.22 ಲಕ್ಷ	17,483
ಸಾವು	8,411	266

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಇರಾನ್	ಬ್ರಿಟನ್	ಅಮೆರಿಕ
36,419	32,124	30,810

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಬ್ರೆಜಿಲ್
74.27	13.04	6.42

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

ಮಹಾರಾಷ್ಟ್ರ	1.36 ಲಕ್ಷ
ತಮಿಳುನಾಡು	34,734
ದೆಹಲಿ	25,079

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.28
ಕೇರಳ	38.14
ತಮಿಳುನಾಡು	26.02

ಪ್ರಜಾವಾಣಿ ಗ್ರಾಫಿಕ್ಸ್

ಮಂಗಳವಾರ, ಆಗಸ್ಟ್ 24, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 236 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನೀರು ಕೂಡ ಒಂದು ದ್ರವಾಹಾರ. ಇದು ಶರೀರಕ್ಕೆ ನೀಡುವ ಶಕ್ತಿ-ಶೂನ್ಯಕ್ಯಾಲೊರಿ. ಶಕ್ತಿದಾಯಕ ಆಹಾರವಲ್ಲದಿದ್ದರೂ ಘನಾಹಾರಗಳ ಪರಿಪೂರ್ಣ ಪಚನಕ್ಕೆ ದ್ರವಾಹಾರವು ಜೊತೆಗಿರಲೇಬೇಕು.



ಆಳ-ಅಗಲ
ಪ್ಯಾರಾಲಿಂಪಿಕ್ಸ್ ಇಲ್ಲಿ ಎಲ್ಲರೂ ವಿಜೇತರೇ!

ಇತಿಹಾಸ ವಿರೂಪಗೊಳಿಸಿದ ಪಿಯು ಇಲಾಖೆ! 4

ಬಾಯ್ಲರ್ ಸ್ಫೋಟ: ಇಬ್ಬರು ಸಜೀವ ದಹನ 3

ಸೆನ್ಸೆಕ್ಸ್	ನಿಫ್ಟಿ	₹/$
55,555 ▲	16,496 ▲	74.22 ▲

ಮೂಲಸೌಕರ್ಯ ಯೋಜನೆಗಳಿಗೆ ಆರ್ಥಿಕವಾಗಿ ನೆರವಾಗುವ ಉದ್ದೇಶ

ಆಸ್ತಿ ನಗದೀಕರಣಕ್ಕೆ ಮುನ್ನುಡಿ


ಪ್ರಜಾವಾಣಿ ವಾರ್ತೆ


ನಿರ್ಮಲಾ ಸೀತಾರಾಮನ್

ನವದೆಹಲಿ: ದೇಶದ ಮೂಲಸೌಕರ್ಯ ಯೋಜನೆಗಳಿಗೆ ಸುಸ್ಥಿರವಾಗಿ ಅನುದಾನ ಒದಗಿಸಲು ಕೇಂದ್ರ ಸರ್ಕಾರವು ₹ 6 ಲಕ್ಷ ಕೋಟಿ ಮೊತ್ತದ ರಾಷ್ಟ್ರೀಯ ಆಸ್ತಿ ನಗದೀಕರಣ ಯೋಜನೆಯನ್ನು (ಎನ್‌ಎಂಪಿ) ಸೋಮವಾರ ಅನಾವರಣಗೊಳಿಸಿದೆ.

ಈ ಯೋಜನೆಯ ಅಡಿಯಲ್ಲಿ ರೈಲು ನಿಲ್ದಾಣಗಳು, ರಸ್ತೆಗಳು, ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆ ಕೊಳವೆಮಾರ್ಗ, ವಿದ್ಯುತ್ ವಲಯದ ಯೋಜನೆಗಳನ್ನು ಖಾಸಗಿ ವಲಯದ ಕಂಪನಿಗಳಿಗೆ ಲೀಸ್ ಆಧಾರದಲ್ಲಿ ವರ್ಗಾಯಿಸುವ ಉದ್ದೇಶವನ್ನು ಕೇಂದ್ರ ಸರ್ಕಾರವು ಹೊಂದಿದೆ. ಹಾಲಿ ಆರ್ಥಿಕ ವರ್ಷದಿಂದ ಅನ್ವಯವಾಗುವಂತೆ ನಾಲ್ಕು ವರ್ಷಗಳ ಅವಧಿಯ ಯೋಜನೆ ಇದು.

ವಲಯವಾರು ಆಸ್ತಿ ನಗದೀಕರಣ



ಪ್ರಜಾವಾಣಿ ಗ್ರಾಫಿಕ್ಸ್

ಈಗಾಗಲೇ ಹೂಡಿಕೆ ಮಾಡಿ ಆಗಿರುವ ಆಸ್ತಿಗಳನ್ನು ವರ್ಗಾಯಿಸುವ ಉದ್ದೇಶ ಯೋಜನೆಗೆ ಇದೆ. ಇದರ ಅಡಿಯಲ್ಲಿ ಆಸ್ತಿಯ ಮಾಲೀಕತ್ವವು ಕೇಂದ್ರ ಸರ್ಕಾರದ ಬಳಿಯಲ್ಲೇ ಇರುತ್ತದೆ. 'ಖಾಸಗಿ ವಲಯದ ಪಾಲುದಾರರು ಆಸ್ತಿಯನ್ನು ನಿರ್ದಿಷ್ಟ ಸಮಯದ ನಂತರ ಕೇಂದ್ರಕ್ಕೆ ವಾಪಸ್ ಕೊಡಬೇಕಾಗುತ್ತದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಯೋಜನೆಯನ್ನು ಅನಾವರಣಗೊಳಿಸಿದ ನಂತರ ಸ್ಪಷ್ಟಪಡಿಸಿದರು. ಕೇಂದ್ರವು ಇದರ ಅಡಿಯಲ್ಲಿ ಜಮೀನು ಮಾರಾಟ ಮಾಡುವುದಿಲ್ಲ.

'ಎನ್‌ಎಂಪಿ ಯೋಜನೆಯು ಈಗಾಗಲೇ ಹೂಡಿಕೆ ಮಾಡಿರುವ ಆಸ್ತಿಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬಳಸಿಕೊಳ್ಳುವ ಬಗ್ಗೆ, ಅದರಿಂದ ಹೆಚ್ಚು ಆದಾಯ ಬರುವಂತೆ ಮಾಡುವ ಬಗ್ಗೆ ಗಮನ ನೀಡುತ್ತದೆ. ಖಾಸಗಿ ಕಂಪನಿಗಳನ್ನು ಭಾಗೀದಾರರಾಗುವಂತೆ ಮಾಡಿ, ಆಸ್ತಿಗಳಿಂದ ಹೆಚ್ಚು ಆದಾಯ ಲಭ್ಯವಾಗುವಂತೆ ಮಾಡಬಹುದು. ಆದಾಯವನ್ನು ಬಳಸಿಕೊಂಡು ಇನ್ನಷ್ಟು ಮೂಲ ಸೌಕರ್ಯ ಸೃಷ್ಟಿಸಲು ಮುಂದಾಗಬಹುದು' ಎಂದು ನಿರ್ಮಲಾ ಅವರು ವಿವರಿಸಿದರು. ಈ ಯೋಜನೆಯು ಆರ್ಥಿಕ ಬೆಳವಣಿಗೆಗೆ ಇಂಬು ಕೊಡುತ್ತದೆ ಎಂದರು.

> **ಎನ್‌ಎಂಪಿ ಜನವಿರೋಧಿ. ಇದನ್ನು ತಕ್ಷಣ ಹಿಂದಕ್ಕೆ ಪಡೆಯಬೇಕು. ಎನ್‌ಎಂಪಿ ಹೆಸರಿನ ಇದು ಖಾಸಗೀಕರಣ ಯೋಜನೆ**
> **ಸುಖೇಂದು ಶೇಖರ್ ರೇ,** ರಾಜ್ಯಸಭೆಯಲ್ಲಿ ಟಿಎಂಸಿಯ ಮುಖ್ಯ ಸಚೇತಕ

ಒಟ್ಟು ₹ 6 ಲಕ್ಷ ಕೋಟಿಯ ಪೈಕಿ ₹ 88 ಸಾವಿರ ಕೋಟಿ ಮೌಲ್ಯದ ಆಸ್ತಿಗಳನ್ನು ಈ ವರ್ಷವೇ ನಗದೀಕರಿಸಿಕೊಳ್ಳುವ ಉದ್ದೇಶ ಕೇಂದ್ರದ್ದು ಎಂದು ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಅಮಿತಾಭ್ ಕಾಂತ್ ತಿಳಿಸಿದರು.

ಮೂಲಸೌಕರ್ಯ ಕಾರ್ಯಕ್ರಮಗಳಿಗೆ ಸುಸ್ಥಿರ ರೀತಿಯಲ್ಲಿ ಹಣಕಾಸಿನ ನೆರವು ಒದಗಿಸಲು ಆಸ್ತಿ ನಗದೀಕರಣವು ಮುಖ್ಯ ಹೆಜ್ಜೆ ಎಂದು ಈ ವರ್ಷದ ಬಜೆಟ್‌ನಲ್ಲಿ ಹೇಳಲಾಗಿದೆ.


ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಸೋಮವಾರ ಕಲಬುರ್ಗಿಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಶಿಕ್ಷಕರು ವಿದ್ಯಾರ್ಥಿನಿಯರಿಗೆ ಹೂವು ಎರಚಿ ಸ್ವಾಗತಿಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮಕ್ಕಳಿಗೆ ಮತ್ತೆ ಸ್ವಾತಂತ್ರ್ಯ ಸಿಕ್ಕಂತಾಗಿದೆ– ಬೊಮ್ಮಾಯಿ


ತರಗತಿ ಆರಂಭ: ಮಕ್ಕಳ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣಕ್ಕೆ ಒಂದೂವರೆ ವರ್ಷದಿಂದ ಬಾಗಿಲು ಮುಚ್ಚಿದ್ದ ಪ್ರೌಢಶಾಲೆ-ಪದವಿಪೂರ್ವ ಕಾಲೇಜುಗಳ ಪುನರಾರಂಭಕ್ಕೆ ಸೋಮವಾರ ಗಳಿಗೆ ಕೂಡಿಬಂದಿದ್ದು, ಜ್ಞಾನ ದೇಗುಲಗಳಲ್ಲಿ ಹಬ್ಬದ ವಾತಾವರಣ ಮೂಡಿತ್ತು.

9ರಿಂದ 12ರವರೆಗಿನ ಭೌತಿಕ ತರಗತಿಗಳು ಆರಂಭವಾಗಿದ್ದು, ವಿದ್ಯಾರ್ಥಿಗಳು-ಶಿಕ್ಷಕರ ಜತೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಅವರ ಸಂಪುಟದ ಸಚಿವರು, ಶಾಸಕರು ರಾಜ್ಯದ ವಿವಿಧೆಡೆ ಈ ಸಂಭ್ರಮಕ್ಕೆ ಸಾಕ್ಷಿಯಾದರು.

ರಾಜ್ಯದಾದ್ಯಂತ ಕೋವಿಡ್ ದೃಢ ಪ್ರಮಾಣ ಶೇ 2ಕ್ಕಿಂತ ಹೆಚ್ಚು ಇರುವ ದಕ್ಷಿಣ ಕನ್ನಡ, ಕೊಡಗು, ಉಡುಪಿ, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳನ್ನು ಹೊರತುಪಡಿಸಿ, ಉಳಿದೆಡೆ ತರಗತಿಗಳು ಆರಂಭಗೊಂಡಿವೆ. ತರಗತಿಗಳಿಗೆ ಹಾಜರಾತಿ ಕಡ್ಡಾಯವಲ್ಲ. ಹೀಗಾಗಿ, ವಿದ್ಯಾರ್ಥಿಗಳ ಸಂಖ್ಯೆ ತೀರಾ ಕಡಿಮೆ ಇತ್ತು.



> **ಪ್ರಾಥಮಿಕ ಶಾಲೆಗಳನ್ನು ಯಾವ ರೀತಿ ತೆರೆಯಬೇಕು ಎಂಬ ಬಗ್ಗೆ ತಜ್ಞರ ಸಮಿತಿ ವರದಿ ಕೊಡಲಿದೆ. ಮಾಸಾಂತ್ಯದಲ್ಲಿ ಕೋವಿಡ್ ಸ್ಥಿತಿಗತಿ ಪರಿಶೀಲಿಸಿ, ಈ ಬಗ್ಗೆ ತೀರ್ಮಾನಿಸಲಾಗುವುದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ನಿರ್ಮಲರಾಣಿ ಪ್ರೌಢ ಶಾಲೆಗೆ ಮುಖ್ಯಮಂತ್ರಿ ಬೊಮ್ಮಾಯಿ ಭೇಟಿ ನೀಡಿ, ಮಕ್ಕಳ ಜತೆಗೆ ಸಂಭ್ರಮಿಸಿದರು. 'ಶಾಲೆ-ಕಾಲೇಜು ಮತ್ತೆ ಆರಂಭಗೊಂಡಿದ್ದರಿಂದ, ಕೋವಿಡ್‌ನಿಂದ ಮಕ್ಕಳಿಗೆ ಸ್ವಾತಂತ್ರ್ಯ ಸಿಕ್ಕಂತಾಗಿದೆ' ಎಂದೂ ಅಭಿಪ್ರಾಯಪಟ್ಟರು.

ರಾಜ್ಯದ ಪ್ರೌಢಶಾಲೆಗಳಲ್ಲಿ ಹಾಜರಾತಿ

ತರಗತಿ	ಒಟ್ಟು ಮಕ್ಕಳು	ಹಾಜರಿ	ಶೇ
9	9,61,748	1,88,077	19.56
10	9,66,481	2,03,777	21.08

ಕೋವಿಡ್ ಸೋಂಕು ಹರಡಲು ಅವಕಾಶ ಆಗಬಾರದೆಂಬ ಕಾರಣಕ್ಕೆ ಹೊರಡಿಸಿರುವ ಪ್ರಮಾಣಿತ ಕಾರ್ಯಾಚರಣಾ ವಿಧಾನ (ಎಸ್‌ಒಪಿ) ಪಾಲನೆ ಮತ್ತು ಶಾಲಾರಂಭಕ್ಕೆ ಕೈಗೊಂಡಿರುವ ಸಿದ್ಧತೆಗಳನ್ನು ಮುಖ್ಯಮಂತ್ರಿ ಪರಿಶೀಲಿಸಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಜತೆಗಿದ್ದರು.

ರಾಜ್ಯದ ವಿವಿಧೆಡೆ ವಿದ್ಯಾರ್ಥಿಗಳಿಗೆ ಶಿಕ್ಷಕರು ಆರತಿ ಬೆಳಗಿ, ಗುಲಾಬಿ ಹೂವು, ಪುಸ್ತಕ, ಪೆನ್ನು, ಮಾಸ್ಕ್ ನೀಡಿ ಸ್ವಾಗತಿಸಿದರು.

6ನೇ ಪುಟ ನೋಡಿ

ರಾಜ್ಯದಲ್ಲಿ ಇನ್ನು 'ರಾಷ್ಟ್ರೀಯ ಶಿಕ್ಷಣ ನೀತಿ'

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ-2020' ಜಾರಿಗೆ ತರುವ ಮೂಲಕ, ಇಡೀ ದೇಶದಲ್ಲಿ ಈ ನೀತಿ ಜಾರಿಗೊಳಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ. ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ, ದೆಹಲಿಯಿಂದಲೇ ವರ್ಚುವಲ್ ಮೂಲಕ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೀತಿ ಜಾರಿಗೆ ಹಸಿರು ನಿಶಾನೆ ತೋರಿಸಿದರು. 4

ಅಮೆರಿಕ, ಬ್ರಿಟನ್‌ಗೆ ತಾಲಿಬಾನ್ ತೀಕ್ಷ್ಣ ಪ್ರತಿಕ್ರಿಯೆ

ತೆರವು: ಗಡುವು ಮೀರಿದರೆ ಎಚ್ಚರ

ಲಂಡನ್ (ಪಿಟಿಐ): 'ಅಫ್ಗಾನಿಸ್ತಾನ ತೊರೆಯಲು ಮುಂದಾಗಿರುವ ವಿದೇಶಿಯರನ್ನು ತೆರವು ಮಾಡುವ ಕಾರ್ಯಾಚರಣೆಯನ್ನು ಇದೇ 31ರ ನಂತರವೂ ವಿಸ್ತರಿಸಲು ಮುಂದಾದರೆ ಪರಿಣಾಮ ಚೆನ್ನಾಗಿರುವುದಿಲ್ಲ. ವಿಸ್ತರಣೆಗೆ ಮನವಿ ಬಂದರೆ ಅದಕ್ಕೆ ತಕ್ಕ ಪ್ರತಿಕ್ರಿಯೆ ನೀಡಬೇಕಾಗುತ್ತದೆ' ಎಂದು ತಾಲಿಬಾನ್ ಎಚ್ಚರಿಕೆ ನೀಡಿದೆ.

'ಅಫ್ಗಾನಿಸ್ತಾನದಲ್ಲಿರುವ ಅಮೆರಿಕನ್ನರನ್ನು ಇದೇ 31ರ ಒಳಗೆ ತೆರವು ಮಾಡಲಾಗುತ್ತದೆ. ಬಳಿಕ ತೆರವು ಕಾರ್ಯಾಚರಣೆ ಸ್ಥಗಿತಗೊಳಿಸಲಾಗುವುದು' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದರು. ಆದರೆ ತೆರವು ಕಾರ್ಯಾಚರಣೆಯನ್ನು ಆಗಸ್ಟ್ 31ರ ಒಳಗೆ ಪೂರ್ಣಗೊಳಿಸಲು ಸಾಧ್ಯವಿಲ್ಲ ಎಂದು ಅಮೆರಿಕದ ರಕ್ಷಣಾ ಸಚಿವಾಲಯ ಹೇಳಿತ್ತು.

ಇದರ ಬೆನ್ನಲ್ಲೇ ತೆರವು ಕಾರ್ಯಾಚರಣೆಯನ್ನು ಮುಂದುವರಿಸಬೇಕು ಎಂದು ಅಮೆರಿಕ ಹೇಳಿತ್ತು. ಬ್ರಿಟನ್ ಮತ್ತು ಫ್ರಾನ್ಸ್ ಸಹ ಭಾನುವಾರ ಇದೇ ಮಾತು ಹೇಳಿದ್ದವು. ಅಫ್ಗಾನಿಸ್ತಾನದಲ್ಲಿನ ಪರಿಸ್ಥಿತಿ ಮತ್ತು ತೆರವು ಕಾರ್ಯಾಚರಣೆಯ ಪ್ರಗತಿಯ ಬಗ್ಗೆ ಚರ್ಚಿಸಲು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಜಿ7 ರಾಷ್ಟ್ರಗಳ ತುರ್ತುಸಭೆ ಕರೆದಿದ್ದಾರೆ. ಮಂಗಳವಾರ ಸಭೆ ನಡೆಯಲಿದೆ.


ಅಫ್ಗಾನಿಸ್ತಾನದ ಜನರು ಚಮನ್ ಗಡಿ ಮೂಲಕ ಪಾಕಿಸ್ತಾನಕ್ಕೆ ಸೋಮವಾರ ತಲುಪಿದರು –ಎಎಫ್‌ಪಿ ಚಿತ್ರ

ಇನ್ನಷ್ಟು ಸುದ್ದಿಗಳು 5

ಅಂಕಿ-ಅಂಶ

15,000 ಅಫ್ಗಾನಿಸ್ತಾನದಲ್ಲಿ ಇನ್ನೂ ಉಳಿದಿರುವ ಅಮೆರಿಕನ್ನರು

60,000 ಅಫ್ಗಾನಿಸ್ತಾನದಲ್ಲಿ ಇನ್ನೂ ಉಳಿದಿರುವ ಅಮೆರಿಕದ ಮಿತ್ರರಾಷ್ಟ್ರಗಳ ಪ್ರಜೆಗಳು

ಒಳ ಪುಟ

ಪ್ರಾದೇಶಿಕವಾರು ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ 4

ರಾಜ್ಯ ಕೋವಿಡ್ ಅಂಕಿ–ಅಂಶ

29,39,767 ▲ ಒಟ್ಟು ಸೋಂಕಿತರು (29,38,616 ನಿನ್ನೆಯ ವಿವರ)

20,255 ▲ ಸಕ್ರಿಯ ಪ್ರಕರಣಗಳು

28,82,331 ▲ ಗುಣಮುಖರಾದವರು

37,155 ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	1,151 ▼
ಗುಣಮುಖ	1,442 ▼
ಸಾವು	10 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್


ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಕೋವಿಡ್ 3ನೇ ಅಲೆ: ಎಚ್ಚರಿಕೆ

ನವದೆಹಲಿ(ಪಿಟಿಐ): ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಮಧ್ಯದ ಯಾವುದೇ ಸಮಯದಲ್ಲಿ ಕೋವಿಡ್–19 ಮೂರನೇ ಅಲೆ ದೇಶದಲ್ಲಿ ಆರಂಭವಾಗಬಹುದು ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ.



ಕೇಂದ್ರ ಗೃಹ ವ್ಯವಹಾರಗಳ ಸಚಿವಾಲಯದ ರಾಷ್ಟ್ರೀಯ ವಿಪತ್ತು ನಿರ್ವಹಣೆ ಸಂಸ್ಥೆಯು (ಎನ್‌ಐಡಿಎಂ) ರಚಿಸಿದ್ದ ತಜ್ಞರ ಸಮಿತಿಯು ಈ ಬಗ್ಗೆ ಪ್ರಧಾನಮಂತ್ರಿ ಕಚೇರಿಗೆ ವರದಿಯನ್ನು ಸಲ್ಲಿಸಿದೆ.

ವಯಸ್ಕರ ರೀತಿಯಲ್ಲೇ ಮಕ್ಕಳು ಸಹ ಅಪಾಯಕ್ಕೆ ಒಳಗಾಗಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಸೋಂಕಿಗೆ ಒಳಗಾದರೆ ವೈದ್ಯರು ಮತ್ತು ವೆಂಟಿಲೇಟರ್‌ಗಳು, ಆ್ಯಂಬುಲೆನ್ಸ್‌ಗಳು, ಇತ್ಯಾದಿ ಸೌಲಭ್ಯಗಳ ಕೊರತೆಯಾಗುವ ಸಾಧ್ಯತೆಗಳಿವೆ. ಹೀಗಾಗಿ, ಎಲ್ಲ ರೀತಿಯ ಸಿದ್ಧತೆಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಲಾಗಿದೆ.

ದೇಶದಲ್ಲಿ ಲಸಿಕಾ ಅಭಿಯಾನವನ್ನು ತ್ವರಿತಗೊಳಿಸಬೇಕಾಗಿದೆ. ಇದುವರೆಗೆ ಕೇವಲ ಶೇಕಡ 7.6ರಷ್ಟು ಮಂದಿಗೆ (10.4 ಕೋಟಿ) ಸಂಪೂರ್ಣ ಲಸಿಕೆ ಹಾಕಲಾಗಿದೆ. ಲಸಿಕೆ ಹಾಕುವುದನ್ನು ಹೆಚ್ಚಿಸದಿದ್ದರೆ ಮುಂದಿನ ಅಲೆಯ ಸಂದರ್ಭದಲ್ಲಿ ಪ್ರತಿ ದಿನ ಆರು ಲಕ್ಷ ಮಂದಿ ಸೋಂಕಿಗೆ ಒಳಗಾಗಬಹುದು ಎಂದು ತಜ್ಞರ ಸಮಿತಿಯು ಎಚ್ಚರಿಕೆ ನೀಡಿದೆ.

ಕೋವಿಡ್‌ಗೆ ಸಂಬಂಧಿಸಿದ ನಿರ್ಬಂಧಗಳನ್ನು ಸಡಿಲಗೊಳಿಸಿರುವ ಆಧಾರದ ಮೇಲೆ ಮೂರು ರೀತಿಯ ಸನ್ನಿವೇಶಗಳು ಮೂರನೇ ಅಲೆಯ ಸಂದರ್ಭದಲ್ಲಿ ದೇಶದಲ್ಲಿ ಸೃಷ್ಟಿಯಾಗಬಹುದು ಎಂದು ಐಐಟಿ ಕಾನ್ಪುರ ತಜ್ಞರು ನಿರೀಕ್ಷಿಸಿರುವುದನ್ನು ಸಮಿತಿಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮೊದಲನೇ ಸನ್ನಿವೇಶದಲ್ಲಿ ಕೋವಿಡ್ ಮೂರನೇ ಅಲೆಯು ಅಕ್ಟೋಬರ್ ತಿಂಗಳಲ್ಲಿ ತೀವ್ರವಾಗಲಿದ್ದು, ಪ್ರತಿ ದಿನ 3.2 ಲಕ್ಷ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಬಹುದು.

ಎರಡನೇ ಸನ್ನಿವೇಶದಲ್ಲಿ, ವೈರಸ್‌ನ ಹೊಸ ಮತ್ತು ತೀವ್ರ ಅಪಾಯಕಾರಿ ರೂಪಾಂತರ ತಳಿಗಳು ಕಾಣಿಸಿಕೊಂಡಿರುವುದರಿಂದ ಸೆಪ್ಟೆಂಬರ್ ತಿಂಗಳಲ್ಲೇ ಮೂರನೇ ಅಲೆ ಆರಂಭವಾಗಬಹುದು ಮತ್ತು ಪ್ರತಿ ದಿನ ಐದು ಲಕ್ಷ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಬಹುದು. ಮೂರನೇ ಸನ್ನಿವೇಶದ ಅನ್ವಯ, ಅಕ್ಟೋಬರ್ ತಿಂಗಳಲ್ಲಿ ಮೂರನೇ ಅಲೆ ಕಾಣಿಸಿಕೊಳ್ಳಲಿದ್ದು, ಪ್ರತಿ ದಿನ ಎರಡು ಲಕ್ಷ ಪಾಸಿಟಿವ್ ಪ್ರಕರಣಗಳು ಪತ್ತೆಯಾಗಲಿವೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಸೋಂಕಿನಿಂದ ರೋಗನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳುವವರೆಗೆ ಅಥವಾ ಲಸಿಕೆ ಹಾಕಿಸಿಕೊಳ್ಳುವವರೆಗೆ ಈ ರೀತಿಯ ಸರಣಿ ಅಲೆಗಳ ಸಾಧ್ಯತೆಗಳು ಹೆಚ್ಚಾಗಿವೆ ಎನ್ನುವುದನ್ನು ಸಾಂಕ್ರಾಮಿಕ ರೋಗಗಳ ತಜ್ಞರು ಅಭಿಪ್ರಾಯಪಟ್ಟಿದ್ದಾರೆ ಎಂದು ವಿವರಿಸಲಾಗಿದೆ.

ಬಿಜೆಪಿಗೆ ಅಗ್ರಸ್ಥಾನ, ನಂತರದ ಸ್ಥಾನದಲ್ಲಿ ಕಾಂಗ್ರೆಸ್

350ಕ್ಕೂ ಹೆಚ್ಚು ಜನಪ್ರತಿನಿಧಿಗಳಿಗೆ ಕ್ರಿಮಿನಲ್ ಹಿನ್ನೆಲೆ

ನವದೆಹಲಿ (ಪಿಟಿಐ): ಸಂಸದರು, ಶಾಸಕರು ಸೇರಿದಂತೆ 363 ಜನಪ್ರತಿನಿಧಿಗಳ ವಿರುದ್ಧ ಅಪರಾಧ ಪ್ರಕರಣಗಳಿವೆ. ಅಪರಾಧವು ಸಾಬೀತಾದರೆ ಇವರೆಲ್ಲರೂ ಜನಪ್ರಾತಿನಿಧ್ಯ ಕಾಯ್ದೆ ಪ್ರಕಾರ ಅನರ್ಹಗೊಳ್ಳಲಿದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಅಧ್ಯಯನವು ಹೇಳಿದೆ.

ಕೇಂದ್ರ ಮತ್ತು ರಾಜ್ಯಗಳ 39 ಸಚಿವರ ವಿರುದ್ಧವೂ ಅಪರಾಧ ಪ್ರಕರಣಗಳು ಇವೆ. ಇವೆಲ್ಲವೂ ಜನಪ್ರಾತಿನಿಧ್ಯ ಕಾಯ್ದೆ ಅಡಿಯಲ್ಲಿ ಅನರ್ಹತೆಗೆ ಕಾರಣ ಆಗಬಹುದಾದ ಅಪರಾಧಗಳೇ ಆಗಿವೆ ಎಂದು ಎಡಿಆರ್ ವರದಿಯು ಹೇಳಿದೆ.

ಕಾಯ್ದೆಯ 8ನೇ ಸೆಕ್ಷನ್‌ನ 1,2, ಮತ್ತು 3ನೇ ಉಪ ಸೆಕ್ಷನ್ ಅಡಿಯಲ್ಲಿ ಪಟ್ಟಿ ಮಾಡಲಾದ ಅಪರಾಧ ಕೃತ್ಯಗಳನ್ನು ಎಸಗಿದ್ದು ಸಾಬೀತಾದರೆ ಅಂತಹ ಜನಪ್ರತಿನಿಧಿಗಳು ತೀರ್ಪಿನ ದಿನಾಂಕದಿಂದ ಆರು ವರ್ಷಗಳ ವರೆಗೆ ಅನರ್ಹಗೊಳ್ಳುತ್ತಾರೆ. ಈ ಸಚಿವರ ವಿರುದ್ಧ ಈ ಉಪ ಸೆಕ್ಷನ್ ಅಡಿಯಲ್ಲಿ ಪಟ್ಟಿ ಮಾಡಲಾದ ಅಪರಾಧ ಕೃತ್ಯಗಳೇ ದಾಖಲಾಗಿವೆ.

ಅಂಕಿ-ಅಂಶಗಳು

363 ಅಪರಾಧ ಪ್ರಕರಣಗಳಿರುವ ಜನಪ್ರತಿನಿಧಿಗಳು

67 ಅಪರಾಧ ಪ್ರಕರಣಗಳಿರುವ ಸಂಸದರು

296 ಅಪರಾಧ ಪ್ರಕರಣಗಳಿರುವ ಶಾಸಕರು

39 ಅಪರಾಧ ಪ್ರಕರಣಗಳಿರುವ ಕೇಂದ್ರ ಮತ್ತು ರಾಜ್ಯಗಳ ಸಚಿವರು

ಅಪರಾಧ ಹಿನ್ನೆಲೆಯ ಜನಪ್ರತಿನಿಧಿಗಳ ಪಟ್ಟಿಯಲ್ಲಿ ಬಿಜೆಪಿ ಅಗ್ರಸ್ಥಾನದಲ್ಲಿದ್ದು, ಪಕ್ಷದ 83 ಮಂದಿ ಇದ್ದಾರೆ.

ಅಪರಾಧ ಹಿನ್ನೆಲೆ ಇರುವವರಲ್ಲಿ 24 ಸಂಸದರು ಮತ್ತು 111 ಶಾಸಕರ ವಿರುದ್ಧ ಇನ್ನೂ ದಾವೆಗಳು ಚಾಲ್ತಿಯಲ್ಲಿದ್ದು, ಇವು ಸುಮಾರು 10 ವರ್ಷಗಳ ಹಿಂದೆ ದಾಖಲಾದ ಪ್ರಕರಣಗಳಾಗಿವೆ ಎಂದು ಅಧ್ಯಯನವು ತಿಳಿಸಿದೆ.

ಒಟ್ಟಾರೆ 542 ಸಂಸದರು, 1,953 ಶಾಸಕರು ಸಲ್ಲಿಸಿದ ಚುನಾವಣಾ ಪ್ರಮಾಣಪತ್ರಗಳನ್ನು ವಿಶ್ಲೇಷಿಸಿರುವ ಎಡಿಆರ್, 67 ಸಂಸದರು, 296 ಶಾಸಕರ ವಿರುದ್ಧ ಪ್ರಕರಣಗಳಿವೆ ಎಂದು ವಿವರ ನೀಡಿದೆ.

ಸಂಸದರ ವಿರುದ್ಧ ಸರಾಸರಿ ಆರು ವರ್ಷಗಳು ಹಾಗೂ ಶಾಸಕರ ವಿರುದ್ಧ ಸರಾಸರಿ ಏಳು ವರ್ಷಗಳಿಂದ ಈ ಪ್ರಕರಣಗಳು ಬಾಕಿ ಉಳಿದಿವೆ. ಒಟ್ಟು 9 ಮಂದಿ ಜನಪ್ರತಿನಿಧಿಗಳ ವಿರುದ್ಧ ಸುಮಾರು 25 ವರ್ಷದ ಹಿಂದೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂಬ ಮಾಹಿತಿಯನ್ನೂ ಈ ಸಮೀಕ್ಷೆ ಹೊರಹಾಕಿದೆ.

ಬಿಜೆಪಿ ಶಾಸಕ, ಬಿಹಾರದ ರಾಮನಾರಾಯಣ ಮಂಡಲ್ ವಿರುದ್ಧ 31 ವರ್ಷದಿಂದ ಪ್ರಕರಣ ಬಾಕಿ ಇದೆ. 1989ರಲ್ಲಿ ಪ್ರಕರಣ ದಾಖಲಾಗಿದೆ. ಅಕ್ಟೋಬರ್ 2010ರಲ್ಲಿ ನಿಯಮ ಮೀರಿ ಜನರ ಗುಂಪುಗೂಡಿಸುವಿಕೆ, ಮಾರಕಾಸ್ತ್ರಗಳ ಸಾಗಣೆ, ಹಲ್ಲೆ, ಸಂಚು ಸಂಬಂಧಿತ ಆರೋಪಗಳನ್ನು ದಾಖಲಿಸಲಾಗಿದೆ.

6ನೇ ಪುಟ ನೋಡಿ

ಮಂಗಳವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ಅಲ್ಲಲ್ಲಿ ಸಾಧಾರಣ ಮಳೆ ಸಾಧ್ಯತೆ

ಮುನ್ಸೂಚನೆ

ಬುಧವಾರ	ಗುರುವಾರ	ಶುಕ್ರವಾರ
28° 20°	29° 19°	29° 19°

‘ಹೊಸ ಅನ್ವೇಷಣೆಗಳೇ ದೇಶದ ಭವಿಷ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೊಸ ಅನ್ವೇಷಣೆಗಳೇ ದೇಶದ ಭವಿಷ್ಯವನ್ನು ನಿರ್ಧರಿಸಲಿವೆ. ಇಂತಹ ಅನ್ವೇಷಣಾ ಮನೋಭಾವದ ನವೋದ್ಯಮಗಳನ್ನು ಉತ್ತೇಜಿಸುವ ಕಾರ್ಯವನ್ನು ಎಂ.ಎಸ್. ರಾಮಯ್ಯ ವಿಶ್ವವಿದ್ಯಾಲಯವು ವಿಕಸನ ಕೇಂದ್ರದ (ಎವಲ್ಯೂಟ್) ಮೂಲಕ ಮಾಡುತ್ತಿದೆ’ ಎಂದು ಎಂ.ಎಸ್. ರಾಮಯ್ಯ ಸಮೂಹ ಸಂಸ್ಥೆಗಳ ಅಧ್ಯಕ್ಷ ಎಂ.ಆರ್. ಜಯರಾಂ ಹೇಳಿದರು.

ನಗರದ ಎಂ.ಎಸ್. ರಾಮಯ್ಯ ತಾಂತ್ರಿಕ ಸಂಸ್ಥೆಯ ಆವರಣದಲ್ಲಿ ಸೋಮವಾರ 24 ನವೋದ್ಯಮಗಳಿಗೆ ‘ಸ್ಟಾರ್ ಸ್ಟಾರ್ಟ್‌ಅಪ್’ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಕಲಿಕೆ ಮತ್ತು ಅನ್ವೇಷಣೆ ಒಂದಕ್ಕೊಂದು ಪೂರಕವಾಗಿರುತ್ತವೆ. ಹೊಸ ಅನ್ವೇಷಣೆಗಳು ಕಾರ್ಯರೂಪಕ್ಕೆ ಬರಬೇಕೆಂದರೆ ಹಲವು ಸಂಸ್ಥೆಗಳು ಅಥವಾ ವಿಭಾಗಗಳು ಕೈಜೋಡಿಸಬೇಕಾಗುತ್ತದೆ’ ಎಂದರು.



ರಾಮಯ್ಯ ಶಿಕ್ಷಣ ಸಂಸ್ಥೆ ವತಿಯಿಂದ 24 ನವೋದ್ಯಮಗಳಿಗೆ 'ಸ್ಟಾರ್ ಸ್ಟಾರ್ಟ್ ಅಪ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುರಳಿ ಕೃಷ್ಣನ್ ಗೋಪಾಲಕೃಷ್ಣನ್, ಸಮರ್ಥ ನಾಗಭೂಷಣಂ, ಎಂ. ಆರ್. ಸೀತಾರಾಂ, ಎಂ.ಆರ್. ಜಯರಾಂ, ಎಂ. ಆರ್. ರಾಮಯ್ಯ, ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎಸ್. ರಾಮ್ ಪ್ರಸಾದ್ ಇದ್ದರು ಪ್ರಜಾವಾಣಿ ಚಿತ್ರ

‘ಸಾಮಾಜಿಕ ಕಳಕಳಿ ಮತ್ತು ಬದ್ಧತೆ ರಾಮಯ್ಯ ಸಂಸ್ಥೆಗಳು ಪಾಲಿಸಿಕೊಂಡಿರುವ ಮೌಲ್ಯ. ಸಾಮಾಜಿಕ ಸಮಸ್ಯೆಗಳಿಗೆ ತಾಂತ್ರಿಕ ಅನ್ವೇಷಣೆಗಳ ಪರಿಹಾರ ಕಂಡುಕೊಳ್ಳುವ ಉದ್ದೇಶದ 24 ನವೋದ್ಯಮಗಳನ್ನು ಆಯ್ಕೆ ಮಾಡಲಾಗಿದೆ. ಇವುಗಳಲ್ಲಿ ಆಯ್ದ 10 ನವೋದ್ಯಮಗಳಿಗೆ ಮಾರ್ಗದರ್ಶನ ಮತ್ತು ಧನಸಹಾಯ ಒದಗಿಸಲು ₹5 ಕೋಟಿ ತೆಗೆದಿರಿಸಲಾಗಿದೆ’ ಎಂದು ಹೇಳಿದರು.

ಎಂ.ಎಸ್. ರಾಮಯ್ಯ ಸಮೂಹ ಸಂಸ್ಥೆಗಳ ಉಪಾಧ್ಯಕ್ಷ ಎಂ.ಆರ್. ಸೀತಾರಾಂ, ‘ಉದಯೋನ್ಮುಖ ನವೋದ್ಯಮಗಳ ಪ್ರತಿಭೆ ಪೋಷಿಸುವುದು, ಅವರಿಗೆ ಮಾರ್ಗದರ್ಶನ ನೀಡುವುದು ಕಾರ್ಯಕ್ರಮದ ಉದ್ದೇಶ. ಸ್ಟಾರ್ ಸ್ಟಾರ್ಟ್‌ಅಪ್ ಪ್ರಶಸ್ತಿ ಪಡೆದಿರುವ ಉದ್ಯಮಗಳ ಬೆಳವಣಿಗೆಗೆ ಸಂಸ್ಥೆಯು ಎಲ್ಲ ಸಹಕಾರ ನೀಡಲಿದೆ’ ಎಂದರು.

‘ಪ್ರಶಸ್ತಿಗೆ 150 ನವೋದ್ಯಮಗಳು ಅರ್ಜಿ ಸಲ್ಲಿಸಿದ್ದವು. ಅವುಗಳಲ್ಲಿ ನಮ್ಮ ತಜ್ಞರ ಸಮಿತಿಯು 24 ಉದ್ಯಮಗಳನ್ನು ಆಯ್ಕೆ ಮಾಡಿವೆ. ಸಂಸ್ಥೆಯಿಂದ ಉದ್ಯಮಗಳನ್ನು ಪ್ರೋತ್ಸಾಹಿಸುವ ಕಾರ್ಯ ಇದೇ ಮೊದಲಲ್ಲ. 1993ರಲ್ಲಿ ಅಂದರೆ, ಮೂರು ದಶಕಗಳ ಹಿಂದೆಯೇ ಎಂ.ಎಸ್. ರಾಮಯ್ಯ ಅವರು, ಸಂಸ್ಥೆಯಲ್ಲಿ ‘ಉದ್ಯಮ ಅಭಿವೃದ್ಧಿ ಘಟಕ’ ನಿರ್ಮಿಸಿದ್ದರು. ಅವರ ದೂರದೃಷ್ಟಿಯ ಫಲವೇ ಈಗ ವಿಕಸನ ಕೇಂದ್ರ ನಿರ್ಮಿಸಲಾಗಿದೆ’ ಎಂದರು.

ರಾಮಯ್ಯ ಎವಲ್ಯೂಟ್ ಕೇಂದ್ರದ ಮುಖ್ಯ ತಂತ್ರಜ್ಞ ಸಮರ್ಥ ನಾಗಭೂಷಣಂ, ‘24 ನವೋದ್ಯಮಗಳ ಪೈಕಿ, 10 ಸ್ಟಾರ್ಟ್ ಅಪ್‌ಗಳಿಗೆ ₹50 ಲಕ್ಷದವರೆಗೆ ಆರ್ಥಿಕ ನೆರವು ನೀಡಲಾಗುವುದು.ಸೆ.15ರ ವೇಳೆಗೆ ಈ ಸ್ಟಾರ್ಟ್ ಅಪ್‌ಗಳನ್ನು ಆಯ್ಕೆ ಮಾಡಲಾಗುವುದು. ಅವರ ಕಚೇರಿಗೆ ಜಾಗ, ಸಂಸ್ಥೆಯ ಗ್ರಂಥಾಲಯ, ಪ್ರಯೋಗಾಲಯ ಬಳಸಿಕೊಳ್ಳಲು ಅವಕಾಶ ನೀಡಲಾಗುವುದಲ್ಲದೆ, ಎಲ್ಲ ರೀತಿಯ ಮಾರ್ಗದರ್ಶನ ನೀಡಲಾಗುವುದು’ ಎಂದರು.

ರಾಮಯ್ಯ ಎವಲ್ಯೂಟ್ ಕೇಂದ್ರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮುರಳಿಕೃಷ್ಣನ್ ಗೋಪಾಲಕೃಷ್ಣನ್, ರಾಮಯ್ಯ ಸಂಸ್ಥೆಗಳ ಆಡಳಿತ ಮಂಡಳಿಯ ನಿರ್ದೇಶಕರಾದ ಎಂ.ಆರ್. ರಾಮಯ್ಯ, ಎಂ.ಆರ್. ಶ್ರೀನಿವಾಸಮೂರ್ತಿ, ಬಿ.ಎಸ್. ರಾಮ್ ಪ್ರಸಾದ್ ಇದ್ದರು.

ಪ್ರಶಸ್ತಿ ಪಡೆದ ಕಂಪನಿಗಳು

ಹೋಮ್‌ಪಿಕ್ಡ್ ಇ-ಮಾರ್ಕೆಟ್‌ಪ್ಲೇಸ್ ಸರ್ವಿಸಸ್, ಮೆಲಾದತ್ ಆಟೊ ಕಾಂಪೊನೆಂಟ್ಸ್, ಮೇಕರ್ ಇನ್ ಮಿ ಟೆಕ್ನಾಲಜಿಸ್, ಸ್ನೇಹಿಕ್ಸ್ ಟೆಕ್, ಫಾರ್ಮೊನಾಟ್ ಟೆಕ್ನಾಲಜಿಸ್, ಸಿಯಾಮಾಫ್ ಹೆಲ್ತ್‌ಕೇರ್, ಹೈ7 ಅಗ್ರಿ ಬಯೊ ಸಲ್ಯುಷನ್ಸ್, ಎನ್‌ಸ್ಮೈಲ್ಸ್, ಅರ್ಝೂಕ ಲ್ಯಾಬ್ಸ್, ಮೈಟೆರ್ರಾ, ಐಬ್ರೊಮ್ ಟೆಕ್ನಾಲಜಿಸ್, ಮ್ಲೀಪ್‌ಟೆಕ್‌ಮೊಬ್ಲೆ, ಟೊಬಾಕ್ಸ್ ವೆಂಚರ್ಸ್, ಕ್ಯಾಪಿಚೆಕ್, ಗಿರಿಜಲಾಲ್, ಪ್ಯುಪಿಲ್‌ಮೆಷ್, ಎಇವಾಲ್ವಲ್ಡ್ ಟೆಕ್ನಾಲಜಿಸ್, ಎಸ್‌ಎಚ್‌ಜಿ ಟೆಕ್ನಾಲಜಿಸ್, ಡ್ರೋನ್‌ಲಾಕ್ ಎಂಟರ್‌ಪ್ರೈಸ್, ಎಡಿಎಂವಿ, ಕಾರ್ಪೈನ್, ಇವ್ಲಾಜಿಯಾ ಇಕೊಕೇರ್, ಪೆಪ್ಪೆರ್‌ಟ್ರೀ.ಎಐ ಹಾಗೂ ಸಾಥಿ ಪ್ಯಾಡ್ಸ್.

ಸುದ್ದಿ 2 ನಿಮಿಷ

ಅಧಿಕೃತ ಕೇಬಲ್ ತೆರವು: ಹೈಕೋರ್ಟ್‌ಗೆ ಅರ್ಜಿ

ಬೆಂಗಳೂರು: ಕೇಬಲ್ ಅಳವಡಿಕೆಗೆ ಬಿಬಿಎಂಪಿಯಿಂದ ಅನುಮತಿ ಪಡೆದಿದ್ದರೂ ತೆರವುಗೊಳಿಸಲಾಗುತ್ತಿದೆ ಎಂದು ಆರೋಪಿಸಿ ರಾಜ್ಯ ಕೇಬಲ್ ಟಿವಿ ಆಪರೇಟರ್ ಸಂಘವು ಹೈಕೋರ್ಟ್‌ಗೆ ಮಧ್ಯಂತರ ಅರ್ಜಿ ಸಲ್ಲಿಸಿದೆ.

‘ಅನಧಿಕೃತ ಕೇಬಲ್ ತೆರವಿಗೆ ವಿರೋಧವಿಲ್ಲ. ಆ ಸಂದರ್ಭದಲ್ಲಿ ಅಧಿಕೃತ ಕೇಬಲ್‌ಗಳನ್ನೂ ತುಂಡರಿಸುತ್ತಿರುವುದರಿಂದ ಕೇಬಲ್ ಆಪರೇಟರ್‌ಗಳಿಗೆ ಸಾಕಷ್ಟು ನಷ್ಟವಾಗುತ್ತಿದೆ. ಕೇಬಲ್ ತೆರವುಗೊಳಿಸುವಾಗ ಬಿಬಿಎಂಪಿ ಅಧಿಕಾರಿಗಳು ಸಂಘದ ಗಮನಕ್ಕೆ ತರಲು ನಿರ್ದೇಶನ ನೀಡಬೇಕು’ ಎಂದು ಸಂಘದ ಪರ ವಕೀಲರು ಮನವಿ ಮಾಡಿದರು.



ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸತೀಶ್ ಚಂದ್ರಶರ್ಮಾ ನೇತೃತ್ವದ ವಿಭಾಗೀಯ ಪೀಠ, ಈ ಸಂಬಂಧ ಬಿಬಿಎಂಪಿಯನ್ನು ಸಂಪರ್ಕಿಸುವಂತೆ ಸಂಘಕ್ಕೆ ತಿಳಿಸಿತು.

ವಕೀಲ ಎನ್.ಪಿ. ಅಮೃತೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಧರಿಸಿ, ನಗರದಲ್ಲಿ ಅನಧಿಕೃತವಾಗಿ ಅಲ್ಲಲ್ಲಿ ನೇತಾಡುತ್ತಿರುವ ಕೇಬಲ್ ತೆರವುಗೊಳಿಸಬೇಕು ಎಂದು ಪೀಠ ಬಿಬಿಎಂಪಿಗೆ ಸೂಚನೆ ನೀಡಿತ್ತು.

ಶಾಂಘೈ ರ‍್ಯಾಂಕಿಂಗ್‌ನಲ್ಲಿ ವಿಐಟಿಗೆ ಸ್ಥಾನ

ಬೆಂಗಳೂರು: ವೆಲ್ಲೂರು ತಾಂತ್ರಿಕ ಮಹಾವಿದ್ಯಾಲಯವು (ವಿಐಟಿ) 2021ನೇ ಸಾಲಿನ ಶಾಂಘೈ ಎಆರ್‌ಡಬ್ಲ್ಯುಯು ಅಕಾಡೆಮಿಕ್ ರ‍್ಯಾಂಕಿಂಗ್‌ನಲ್ಲಿ 801-900ರೊಳಗೆ ಸ್ಥಾನ ಗಳಿಸಿದೆ.

ಈ ಸಾಲಿನ ಶಾಂಘೈ ರ‍್ಯಾಂಕಿಂಗ್‌ನಲ್ಲಿ ಸ್ಥಾನ ಪಡೆದಿರುವ ಜಗತ್ತಿನ 1,000 ವಿಶ್ವವಿದ್ಯಾಲಯಗಳ ಪಟ್ಟಿ ಬಿಡುಗಡೆಗೊಂಡಿದೆ. ಇದರಲ್ಲಿ ಭಾರತದ 14 ವಿಶ್ವವಿದ್ಯಾಲಯಗಳಿವೆ. ವಿಐಟಿಯು ಈ ಪಟ್ಟಿಯಲ್ಲಿರುವ ದೇಶದ ಏಕೈಕ ಖಾಸಗಿ ಶಿಕ್ಷಣ ಸಂಸ್ಥೆಯಾಗಿದೆ.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯು (ಐಐಎಸ್‌ಸಿ) 401-500 ರೊಳಗೆ ಸ್ಥಾನ ಹೊಂದಿದೆ. ಪಟ್ಟಿಯಲ್ಲಿ ಗರಿಷ್ಠ ರ‍್ಯಾಂಕಿಂಗ್ ಹೊಂದಿರುವ ಭಾರತದ ವಿಶ್ವವಿದ್ಯಾಲಯ ಎನಿಸಿದೆ. ವಿಐಟಿ 2019 ರಿಂದಲೂ ಶಾಂಘೈ ರ‍್ಯಾಂಕಿಂಗ್‌ನಲ್ಲಿ ಸ್ಥಾನ ಪಡೆಯುತ್ತಾ ಬಂದಿದೆ.

ವಿಶ್ವದ ಪ್ರಮುಖ ನಿಯತಕಾಲಿಕೆಗಳಲ್ಲಿ ಪ್ರಕಟವಾಗಿರುವ ವಿಶ್ವವಿದ್ಯಾಲಯದ ಪ್ರಬಂಧಗಳ ಸಂಖ್ಯೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪಡೆದಿರುವ ಪ್ರಶಸ್ತಿ ಸೇರಿದಂತೆ ಇತರ ಕೆಲ ಮಾನದಂಡಗಳ ಆಧಾರದಲ್ಲಿ ಈ ರ‍್ಯಾಂಕಿಂಗ್ ಸಿದ್ಧಪಡಿಸಲಾಗುತ್ತದೆ.

‘ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಪರಿಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಡಾ.ಜಿ. ವಿಶ್ವನಾಥನ್ ಖುಷಿ ವ್ಯಕ್ತಪಡಿಸಿದ್ದಾರೆ.

ಬಿಡಿಎ: ಕೇಂದ್ರ ಕಚೇರಿಯಲ್ಲಿ ಸಹಾಯ ಕೇಂದ್ರ ಆರಂಭ

ಬೆಂಗಳೂರು: ಡಾ.ಕೆ.ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೇಮಿಸಿರುವ ನ್ಯಾ.ಎ.ವಿ. ಚಂದ್ರಶೇಖರ್ ಸಮಿತಿಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕೇಂದ್ರ ಕಚೇರಿಯ ಆವರಣದಲ್ಲಿರುವ ಗಾಜಿನ ಮನೆಯಲ್ಲಿ ‘ಸಹಾಯ ಕೇಂದ್ರ’ವನ್ನು ಪ್ರಾರಂಭಿಸಿದೆ.

ಶಿವರಾಮ ಕಾರಂತ ಬಡಾವಣೆಗೆ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಡಿಸಿದ ಭೂಮಿಯಲ್ಲಿ 2018ರ ಆ.3ಕ್ಕೆ ಮುಂಚಿತವಾಗಿ ನಿರ್ಮಿಸಲಾದ ಕಟ್ಟಡ ಮತ್ತು ಮನೆಗಳ ಬಗ್ಗೆ ವರದಿಯನ್ನು ನೀಡಲು ರಚಿಸಿರುವ ಈ ಸಮಿತಿಯು ಬಡಾವಣೆಗೆ ಗೊತ್ತುಪಡಿಸಲಾದ ಪ್ರದೇಶಗಳಲ್ಲಿ ಸಹಾಯ ಕೇಂದ್ರಗಳನ್ನು ತೆರೆದು ದಾಖಲೆಗಳನ್ನು ಸಂಗ್ರಹಿಸುತ್ತಿದೆ.

ಬಿಡಿಎ ಕೇಂದ್ರ ಕಚೇರಿಯಲ್ಲಿರುವ ಸಹಾಯ ಕೇಂದ್ರವು ಇದೇ 25ರಿಂದ ಸೆ.09ರವರೆಗೆ ಕಾರ್ಯನಿರ್ವಹಿಸಲಿದೆ. ಆನ್‌ಲೈನ್ ಮೂಲಕವೂ ಅರ್ಜಿಗಳನ್ನು ಮತ್ತು ದಾಖಲೆಗಳನ್ನು ಸಲ್ಲಿಸಬಹುದು ಎಂದು ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಹಾಗೂ ದಾಖಲೆಗಳನ್ನು ಸಲ್ಲಿಸುವ ಗಡುವನ್ನು ಸಮಿತಿ ಈಗಾಗಲೇ ಅನೇಕ ಬಾರಿ ವಿಸ್ತರಿಸಿದೆ. 2021ರ ಸೆ.09ರ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಸಮಿತಿ ಈ ಹಿಂದೆಯೇ ಸ್ಪಷ್ಟಪಡಿಸಿತ್ತು.


‘ಅವಧಿ ವಿಸ್ತರಿಸಿ’

ಬೆಂಗಳೂರು: ಮುಖ್ಯಮಂತ್ರಿಗಳ ಬಹುಮಹಡಿ ವಸತಿ ಯೋಜನೆ ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆಗೆ ಕಮ್ಯುನಿಸ್ಟ್ ಪಕ್ಷ(ಸಿಪಿಐಎಂ) ಒತ್ತಾಯಿಸಿದೆ.

ಬಹುಮಹಡಿ ವಸತಿ ಯೋಜನೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 21ರವರೆಗೆ ಕಾಲಾವಕಾಶ ನೀಡಲಾಗಿದೆ. ಅರ್ಜಿ ಸಲ್ಲಿಸಲು ಒದಗಿಸಬೇಕಾದ ಜಾತಿ ಮತ್ತು ಆದಾಯ ಪ್ರಮಾಣಪತ್ರ, ವಾಸಸ್ಥಳ ದೃಢೀಕರಣ ಪತ್ರ ಪಡೆಯಲು ಅರ್ಜಿ ಸಲ್ಲಿಸಿದ ನಂತರ 21 ದಿನಗಳ ಕಾಲಾವಕಾಶ ಬೇಕು. ಈ ಕಾಲಮಿತಿಯೊಳಗೆ ಎಲ್ಲಾ ದಾಖಲೆ ಪಡೆದು ಅರ್ಜಿ ಸಲ್ಲಿಸಲು ಸಾಮಾನ್ಯ ವಸತಿ ರಹಿತ ಅಸಂಘಟಿತ ಕಾರ್ಮಿಕರಿಗೆ ಸಾಧ್ಯವಾಗುವುದಿಲ್ಲ ಎಂದು ಸಮಿತಿ ತಿಳಿಸಿದೆ. ಅರ್ಜಿ ಸಲ್ಲಿಕೆಗೆ ನೀಡಿರುವ ಒಂದು ತಿಂಗಳ ಕಾಲಾವಧಿಯನ್ನು ವಿಸ್ತರಿಸಿ ಕನಿಷ್ಠ 3 ತಿಂಗಳು ಕಾಲಾವಕಾಶ ನೀಡಬೇಕು ಎಂದು ಸಿಪಿಐ(ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ.

ಅಧ್ಯಕ್ಷರಾಗಿ ಎ.ಎಸ್. ನಾಗರಾಜಸ್ವಾಮಿ ಆಯ್ಕೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯ ಅಧ್ಯಕ್ಷರಾಗಿ ಎ.ಎಸ್. ನಾಗರಾಜಸ್ವಾಮಿ ಆಯ್ಕೆಯಾಗಿದ್ದಾರೆ.



ಎ.ಎಸ್. ನಾಗರಾಜಸ್ವಾಮಿ

ನಗರದಲ್ಲಿ ನಡೆದ ಕಾರ್ಯಮಂಡಳಿ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ತಾ.ಸಿ. ತಿಮ್ಮಯ್ಯ ಅವರು ಕೋಶಾಧ್ಯಕ್ಷರಾಗಿ, ಎಂ.ಜಿ. ದಯಾನಂದ ಕಟ್ಟೆ ಸಂಚಾಲಕರಾಗಿ ಆಯ್ಕೆಗೊಂಡಿದ್ದಾರೆ.

ಬಿ.ಆರ್. ಹೇಮಂತ ಹಾಗೂ ಬಿ.ಆರ್. ಯೋಗಿತಾ ಅವರನ್ನು ಕಾರ್ಯಮಂಡಳಿಯ ನೂತನ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ. ಸೆ.5ರಂದು ಶಿಕ್ಷಕರ ದಿನಾಚರಣೆಯ ಪ್ರಯುಕ್ತ ನಿವೃತ್ತ ಶಿಕ್ಷಕಿ ಗಾಯತ್ರಿ ರಾಮಣ್ಣ ಅವರನ್ನು ಸನ್ಮಾನಿಸಲು ತೀರ್ಮಾನಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ಎಂ.ಎಂ. ಫುಡ್ಸ್ ಪ್ರೊಡಕ್ಟ್’ ಕಾರ್ಖಾನೆಯಲ್ಲಿ ಅವಘಡ

ಬಾಯ್ಲರ್ ಸ್ಫೋಟ: ಇಬ್ಬರು ಸಜೀವ ದಹನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಗಡಿ ರಸ್ತೆಯ ಗೋಪಾಲಪುರ ಬಳಿಯ ‘ಎಂ.ಎಂ. ಫುಡ್ಸ್ ಪ್ರೊಡಕ್ಟ್’ ಕಾರ್ಖಾನೆಯಲ್ಲಿ ಬಾಯ್ಲರ್ ಸ್ಫೋಟಗೊಂಡು ಬೆಂಕಿ ಅವಘಡ ಸಂಭವಿಸಿದ್ದು, ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಸಜೀವವಾಗಿ ದಹನವಾಗಿದ್ದಾರೆ.

‘ಬಿಹಾರದ ಸೌರವ್ ಕುಮಾರ್ (21) ಹಾಗೂ ಮನೀಶ್ ಕುಮಾರ್ (21) ಮೃತರು. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸ್ಥಳೀಯ ನಿವಾಸಿಗಳಾದ ಶಾಂತಿ (52), ಧನಲಕ್ಷ್ಮಿ (40) ಹಾಗೂ ಕಾರ್ಖಾನೆ ಪಾಲುದಾರ ಸಚಿನ್ ಎಂಬುವರು ತೀವ್ರವಾಗಿ ಗಾಯಗೊಂಡಿದ್ದಾರೆ. ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ ಪಾಟೀಲ ಹೇಳಿದರು.

‘ವಿಜಯ್ ಮೆಹ್ತಾ ಎಂಬುವರು ಸಚಿನ್ ಪಾಲುದಾರಿಕೆಯಲ್ಲಿ ಕಾರ್ಖಾನೆ ನಡೆಸುತ್ತಿದ್ದರೆಂಬ ಮಾಹಿತಿ ಇದೆ. ಬೇಕರಿ ಹಾಗೂ ಇತರೆ ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ ತಿನಿಸುಗಳನ್ನು ಕಾರ್ಖಾನೆಯಲ್ಲಿ ತಯಾರಿಸಲಾಗುತ್ತಿತ್ತು’ ಎಂದೂ ತಿಳಿಸಿದರು.

ಸುಟ್ಟುಹೋದ ಕಾರ್ಮಿಕರು: ‘ವಸತಿ ಪ್ರದೇಶವಿದ್ದ ಮನೆಗಳ ಸಮೀಪವೇ ಖಾಲಿ ಜಾಗದಲ್ಲಿ ಕಬ್ಬಿಣ ಹಾಗೂ ತಗಡಿನ ಶೆಡ್‌ನಲ್ಲಿ ಕಾರ್ಖಾನೆ ಇತ್ತು. ಅಲ್ಲಿಯೇ ಬಾಯ್ಲರ್ ಅಳವಡಿಸಲಾಗಿತ್ತು. ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಮಾಲೀಕರ ನಿರ್ಲಕ್ಷ್ಯವೇ ಅವಘಡಕ್ಕೆ ಕಾರಣ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ಕಾರ್ಮಿಕರು ಬೆಳಿಗ್ಗೆ ಕೆಲಸಕ್ಕೆ ಬಂದಿದ್ದರು. ತಿನಿಸು ತಯಾರಿಸುತ್ತಿದ್ದರು. ಪಾಲುದಾರ ಸಚಿನ್, ಕಾರ್ಮಿಕರಿಂದ ಕೆಲಸ ಮಾಡಿಸುತ್ತಿದ್ದರು. ಸೋಮವಾರ ಮಧ್ಯಾಹ್ನ 1.30ರ ಸುಮಾರಿಗೆ ಬಾಯ್ಲರ್ ಏಕಾಏಕಿ ಸ್ಫೋಟಗೊಂಡು, ಬೆಂಕಿ ಹೊತ್ತಿ ಉರಿಯಲಾರಂಭಿಸಿತ್ತು. ಬೆಂಕಿ ಕೆನ್ನಾಲಗೆ ಹೆಚ್ಚಾಗಿದ್ದರಿಂದ ಹೊರಗೆ ಹೋಗಲು ಕಾರ್ಮಿಕರಿಗೆ ಸಾಧ್ಯವಾಗಲಿಲ್ಲ. ಇಬ್ಬರು ಕಾರ್ಮಿಕರು ಸ್ಥಳದಲ್ಲೇ ಸಜೀವವಾಗಿ ದಹನಗೊಂಡರು.’

‘ಸ್ಫೋಟದಿಂದ ಕಾರ್ಖಾನೆಯ ಬಹುತೇಕ ಚಾವಣಿ ಹಾರಿ ಹೋಗಿತ್ತು. ಸ್ಫೋಟದ ಸದ್ದು ಕೇಳಿದ್ದ ಸ್ಥಳೀಯರು, ಸಹಾಯಕ್ಕೆ ಬಂದಿದ್ದರು. ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿದ್ದರು. ಶಾಂತಿ, ಧನಲಕ್ಷ್ಮಿ ಹಾಗೂ ಸಚಿನ್ ಅವರನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. 2 ಗಂಟೆ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಲಾಯಿತು. ಇಬ್ಬರು ಕಾರ್ಮಿಕರ ಮೃತದೇಹಗಳು ಸುಟ್ಟ ಸ್ಥಿತಿಯಲ್ಲೇ ಅವಶೇಷಗಳಡಿ ಪತ್ತೆಯಾದವು’ ಎಂದೂ ಮೂಲಗಳು ಹೇಳಿವೆ.

ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು, ಕಾರ್ಖಾನೆ ಹಾಗೂ ಬಾಯ್ಲರ್ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮಾಲೀಕರು ಹಾಗೂ ಇತರರ ವಿರುದ್ಧ ಮಾಗಡಿ ರಸ್ತೆ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಯಾವುದೇ ಇಲಾಖೆಯಿಂದಲೂ ಅನುಮತಿ ಪಡೆಯದೇ ಅನಧಿಕೃತ ಹಾಗೂ ಅವೈಜ್ಞಾನಿಕವಾಗಿ ಬಾಯ್ಲರ್ ಅಳವಡಿಸಲಾಗಿತ್ತು. ಇಕ್ಕಟ್ಟಿನ ಜಾಗದಲ್ಲಿ ಗಾಳಿಯಾಡಲೂ ಜಾಗವಿರಲಿಲ್ಲ. ಬಾಯ್ಲರ್ ಹೆಚ್ಚು ಕಾದಿದ್ದರಿಂದಲೇ ಸ್ಫೋಟಗೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಮಾಲೀಕರ ನಿರ್ಲಕ್ಷ್ಯಕ್ಕೆ ಇಬ್ಬರ ಜೀವ ಹೋಗಿವೆ. ಅವಘಡ ಸಂಬಂಧ ವರದಿ ಸಿದ್ಧಪಡಿಸಲಾಗುತ್ತಿದೆ’ ಎಂದು ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು ಹೇಳಿದರು.

ಸಿಲಿಂಡರ್ ಸೋರಿಕೆಯಿಂದಲೂ ಹೆಚ್ಚಾದ ಬೆಂಕಿ: ‘ಕಾರ್ಖಾನೆಯಲ್ಲಿ ತಿನಿಸು ಬೇಯಿಸಲು ಪ್ರತ್ಯೇಕವಾಗಿ ಒಲೆ ಹಾಗೂ ವಾಣಿಜ್ಯ ಬಳಕೆ ಸಿಲಿಂಡರ್‌ಗಳನ್ನೂ ಬಳಸಲಾಗುತ್ತಿತ್ತು. ಬಾಯ್ಲರ್ ಸ್ಫೋಟದ ಜೊತೆಯಲ್ಲಿ ಸಿಲಿಂಡರ್‌ಗಳೂ ಸ್ಫೋಟಗೊಂಡಿರುವ ಸಾಧ್ಯತೆ ಇದೆ. ಈ ಬಗ್ಗೆ ತಜ್ಞರೇ ನಿಖರ ಮಾಹಿತಿ ನೀಡಬೇಕಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.



ಬಾಯ್ಲರ್ ಸ್ಫೋಟದಿಂದ ಸಂಪೂರ್ಣವಾಗಿ ಸುಟ್ಟಿರುವ ಕಾರ್ಖಾನೆ ಒಳಭಾಗ

ಮೂವರ ವಿರುದ್ಧ ಎಫ್‌ಐಆರ್

ಅವಘಡ ಸಂಬಂಧ ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಜಾಗದ ಮಾಲೀಕ ಎನ್ನಲಾದ ನರೇಂದ್ರ, ಕಾರ್ಖಾನೆ ಮಾಲೀಕ ವಿಜಯ್ ಮೆಹ್ತಾ ಹಾಗೂ ಪಾಲುದಾರ ಸಚಿನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಗಾಯಾಳುಗಳು ಚಿಕಿತ್ಸೆ ಪಡೆಯುತ್ತಿದ್ದು, ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದ ನಂತರ ಹೇಳಿಕೆ ಪಡೆಯಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಿಶ್ಚಯವಾಗಿದ್ದ ಮದುವೆ’

‘ಕೆಲಸ ಹುಡುಕಿಕೊಂಡು ಬಿಹಾರದಿಂದ ನಗರಕ್ಕೆ ಬಂದಿದ್ದ ಸೌರವ್ ಕುಮಾರ್ ಹಾಗೂ ಮನೀಶ್ ಕುಮಾರ್, ಜುಲೈನಲ್ಲಿ ಕಾರ್ಖಾನೆಗೆ ಸೇರಿದ್ದರು. ತಿನಿಸು ಬೇಯಿಸುವ ಕೆಲಸ ಮಾಡುತ್ತಿದ್ದರು. ಅವರಿಗೆ ಇತ್ತೀಚೆಗಷ್ಟೇ ಮದುವೆ ನಿಶ್ಚಯವಾಗಿತ್ತು. ಮುಂದಿನ ವರ್ಷ ಮದುವೆ ನಡೆಸಲು ದಿನಾಂಕ ನಿಗದಿಪಡಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು.



ಸೌರವ್ ಕುಮಾರ್



ಮನೀಶ್ ಕುಮಾರ್

ನಕಲಿ ಅಂಕಪಟ್ಟಿ: ಎಂಜಿನಿಯರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಅಂಕಪಟ್ಟಿ ನೀಡಿ ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆಯಲ್ಲಿ (ಸಿಪಿಆರ್‌ಐ) ಎಂಜಿನಿಯರ್ ಹುದ್ದೆಗೆ ಆಯ್ಕೆಯಾಗಿದ್ದ ಮನೀಶ್ ಸಿಂಗ್ (26) ಎಂಬುವರನ್ನು ಸದಾಶಿವನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನ್ಯೂ ಬಿಇಎಲ್ ರಸ್ತೆಯ ನಿವಾಸಿ ಮನೀಶ್, ಅಸ್ಸಾಂನ ಭಾರತೀಯ ತಂತ್ರಜ್ಞಾನ ಸಂಸ್ಥೆಯಲ್ಲಿ (ಐಐಟಿ) ವ್ಯಾಸಂಗ ಮಾಡಿರುವುದಾಗಿ ಸುಳ್ಳು ಹೇಳಿ ನಕಲಿ ಅಂಕಪಟ್ಟಿ ಸಲ್ಲಿಸಿದ್ದರು. ಅವರ ಅಕ್ರಮ ಬಯಲಾಗುತ್ತಿದ್ದಂತೆ ಸಿಪಿಆರ್‌ಐ ಆಡಳಿತಾಧಿಕಾರಿ ಕೆ. ಪ್ರವೀಣ್ ಕುಮಾರ್ ಅವರು ಠಾಣೆಗೆ ದೂರು ನೀಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘2018ರಲ್ಲಿ ಎಂಜಿನಿಯರ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಆರೋಪಿ ಸಹ ಅರ್ಜಿ ಸಲ್ಲಿಸಿ ಹುದ್ದೆಗೆ ಆಯ್ಕೆಯಾಗಿದ್ದರು. ಕೆಲಸಕ್ಕೂ ಹಾಜರಾತಿ ಮಾಡಿಕೊಂಡಿದ್ದರು. ಅಭ್ಯರ್ಥಿಗಳ ಸಿಂಧುತ್ವ ಪರಿಶೀಲನೆ ನಡೆಸುತ್ತಿದ್ದ ನೇಮಕಾತಿ ಮಂಡಳಿ, ಆರೋಪಿಯ ಅಂಕಪಟ್ಟಿಯನ್ನು ಪರಿಶೀಲನೆಗಾಗಿ ಸಂಬಂಧಪಟ್ಟ ಸಂಸ್ಥೆಗೆ ಕಳುಹಿಸಿತ್ತು. ಅಂಕಪಟ್ಟಿ ನಕಲಿ ಎಂಬುದನ್ನು ಪತ್ತೆ ಮಾಡಿದ್ದ ಸಂಸ್ಥೆಯ ಅಧಿಕಾರಿಗಳು, ಸಿಪಿಆರ್‌ಐಗೆ ವರದಿ ಕಳುಹಿಸಿದ್ದರು. ಅವಾಗಲೇ ಆರೋಪಿಯ ಅಕ್ರಮ ಬಯಲಾಗಿದೆ’ ಎಂದೂ ತಿಳಿಸಿವೆ.

‘ಸರ್ಕಾರಿ ಹುದ್ದೆ ಗಿಟ್ಟಿಸಿಕೊಳ್ಳುವ ಉದ್ದೇಶದಿಂದ ಆರೋಪಿ, ನಕಲಿ ಅಂಕಪಟ್ಟಿ ಸಲ್ಲಿಸಿದ್ದರು. ಅವರೇ ಅಂಕಪಟ್ಟಿ ಸೃಷ್ಟಿಸಿದ್ದಾರೆಯೇ? ಅಥವಾ ಯಾರ ಕಡೆಯಿಂದಾದರೂ ಅಂಕಪಟ್ಟಿ ಖರೀದಿಸಿದ್ದಾರೆಯೇ? ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ಅಡುಗೆ ಸರಿ ಮಾಡಿಲ್ಲವೆಂದು ಮಹಿಳೆ ಕೊಲೆ

ಬೆಂಗಳೂರು: ಚಿಕ್ಕಬಾಣಾವರ ಕೆರೆಯಲ್ಲಿ ಶಿರಿನಾ (28) ಎಂಬುವರ ಮೃತದೇಹ ಪತ್ತೆಯಾಗಿದ್ದು, ಅವರನ್ನು ಪತಿ ಹಾಗೂ ಆತನ ಮನೆಯವರು ಕೊಲೆ ಮಾಡಿರುವ ಸಂಗತಿ ತನಿಖೆಯಿಂದ ಗೊತ್ತಾಗಿದೆ.

‘ಹೆಸರುಘಟ್ಟ ಮುಖ್ಯರಸ್ತೆಯ ತರಬನಹಳ್ಳಿಯ ಮನೆಯಲ್ಲಿ ಕೊಲೆ ನಡೆದಿರುವ ಮಾಹಿತಿ ಇದೆ. ಶಿರಿನಾ ಅವರ ಸಂಬಂಧಿ ದಾವಣಗೆರೆಯ ಸುಬಾನ್ ಸಾಬ್ ಎಂಬುವರು ದೂರು ನೀಡಿದ್ದಾರೆ. ಅದರನ್ವಯ ಶಿರಿನಾ ಪತಿ ಮುಬಾರಕ್ ಹಾಗೂ ಆತನ ಸಂಬಂಧಿಕರಾದ ಬಾಷಾಸಾಬ್, ಸಾಬೀರಾಬಿ, ಸಲ್ಮಾನ್ ಬಾನು, ಜಾಕೀರ್, ಸದ್ದಾಂ ಎಂಬುವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಮುಖ ಆರೋಪಿ ಮುಬಾರಕ್ ಸೇರಿ ಹಲವರು ತಲೆಮರೆಸಿಕೊಂಡಿದ್ದಾನೆ. ಇಬ್ಬರು ಸಂಬಂಧಿಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದೂ ತಿಳಿಸಿವೆ.

‘ಹಾಸಿಗೆ ಮಾರಾಟ ವೃತ್ತಿಯಲ್ಲಿದ್ದ ಮುಬಾರಕ್ ಜೊತೆ ಶಿರಿನಾ ಮದುವೆಯಾಗಿತ್ತು. ಗಂಡನ ಮನೆಗೆ ಬಂದಿದ್ದ ಶಿರಿನಾ ಅವರಿಗೆ ಸಂಬಂಧಿಕರು ಕಿರುಕುಳ ನೀಡಲಾರಂಭಿಸಿದ್ದರು. ಮುಬಾರಕ್ ನಿತ್ಯವೂ ಹಲ್ಲೆ ಮಾಡುತ್ತಿದ್ದನೆಂಬುದು ಸದ್ಯದ ತನಿಖೆಯಿಂದ ತಿಳಿದುಬಂದಿದೆ.’

‘ಕೆಲದಿನಗಳ ಹಿಂದಷ್ಟೇ ಅಡುಗೆ ಸರಿ ಮಾಡಿಲ್ಲವೆಂದು ಜಗಳ ತೆಗೆದಿದ್ದ ಮುಬಾರಕ್ ಹಾಗೂ ಇತರರು, ಶಿರಿನಾ ಮೇಲೆ ಹಲ್ಲೆ ಮಾಡಿದ್ದರು. ತೀವ್ರ ಗಾಯಗೊಂಡು ಶಿರಿನಾ ಮೃತಪಟ್ಟಿದ್ದರು. ನಂತರ, ಮೃತದೇಹವನ್ನು ಕೆರೆಗೆ ಬಿಸಾಕಿ ಬಂದಿದ್ದರು. ಕೆರೆಯಲ್ಲಿ ಮೃತದೇಹ ಸಿಗುತ್ತಿದ್ದಂತೆ ಸಂಬಂಧಿಕರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಗಿದೆ’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

ನಗರದಲ್ಲಿ ಇಂದು

ವಕೀಲ ವಾಹಿನಿ ದ್ವಿಭಾಷಾ ಮಾಸ ಪತ್ರಿಕೆ ಲೋಕಾರ್ಪಣೆ: ಬಿಡುಗಡೆ ಮಾಡುವವರು–ಸಿ.ಎಂ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ– ಅಶೋಕ ಹಾರನಹಳ್ಳಿ, ಭಾಗವಹಿಸುವವರು– ಪ್ರಭುಲಿಂಗ ನಾವದಗಿ, ಎಂ.ಬಿ. ನರಗುಂದ್, ವಿ.ಎಸ್.ಹೆಗಡೆ, ಎಲ್. ಶ್ರೀನಿವಾಸ ಬಾಬು, ಎ.ಪಿ.ರಂಗನಾಥ, ಸಿ.ಎಚ್.ಹನುಮಂತರಾಯ, ವಿವೇಕ ಸುಬ್ಬಾರೆಡ್ಡಿ, ಸಿ.ಶಶಿಕಾಂತ, ಎಚ್.ಆರ್. ದುರ್ಗಾಪ್ರಸಾದ್, ಆಯೋಜನೆ–ವಕೀಲ ವಾಹಿನಿ ಬಳಗ, ಸ್ಥಳ–ಮುಖ್ಯಮಂತ್ರಿಯವರ ಗೃಹ ಕಚೇರಿ ಕೃಷ್ಣ–ಸಂಜೆ 6.

ಪೊಲೀಸರ ಕೈಗೆ ಸಿಗುತ್ತಿದ್ದಂತೆ ಚಿನ್ನದ ಸರ ನುಂಗಿದ್ದ ಕಳ್ಳ !

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುವ ವೇಳೆ ಪೊಲೀಸರ ಕೈಗೆ ಸಿಕ್ಕಿಬಿದ್ದ ಕಳ್ಳನೊಬ್ಬ, ತಾನು ಅಮಾಯಕನೆಂದು ವಾದಿಸಲು ಚಿನ್ನದ ಸರವನ್ನೇ ನುಂಗಿದ್ದ ಘಟನೆ ನಗರದಲ್ಲಿ ಭಾನುವಾರ ನಡೆದಿದೆ.

‘ಚಿನ್ನದ ಸರ ಕಳವು ಪ್ರಕರಣದಲ್ಲಿ ವಿಜಯ್ ಎಂಬಾತ ಸಿಕ್ಕಿಬಿದ್ದಿದ್ದಾನೆ. ಪೊಲೀಸರಿಂದ ತಪ್ಪಿಸಿಕೊಳ್ಳಲು ಆತ, ಸರವನ್ನು ನುಂಗಿದ್ದ. ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ಸ್ಕ್ಯಾನಿಂಗ್ ಮಾಡಿಸಿದಾಗ, ಹೊಟ್ಟೆಯಲ್ಲಿ ಚಿನ್ನದ ಸರವಿರುವುದು ಗೊತ್ತಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ರಾಖಿ ಖರೀದಿಸಲು ಚಿಕ್ಕಪೇಟೆಗೆ ಬಂದಿದ್ದ ಮಹಿಳೆಯೊಬ್ಬರು, ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಅವರನ್ನು ಹಿಂಬಾಲಿಸಿದ್ದ ಆರೋಪಿ ವಿಜಯ್, 80 ಗ್ರಾಂ ಚಿನ್ನದ ಮಾಂಗಲ್ಯ ಸರ ಕಿತ್ತುಕೊಳ್ಳಲು ಮುಂದಾಗಿದ್ದ. ಆದರೆ, ಸರದ ತುಂಡು ಮಾತ್ರ ಆತನ ಕೈಗೆ ಸಿಕ್ಕಿತ್ತು. ಮಹಿಳೆ, ‘ಕಳ್ಳ.. ಕಳ್ಳ..’ ಎಂದು ಕೂಗಾಡಿದ್ದರು. ಓಡಲಾರಂಭಿಸಿದ್ದ ಕಳ್ಳನನ್ನು ಸ್ಥಳೀಯರೇ ಬೆನ್ನಟ್ಟಿ ಹಿಡಿದು, ಗಸ್ತಿನಲ್ಲಿದ್ದ ಪೊಲೀಸರ ವಶಕ್ಕೆ ಒಪ್ಪಿಸಿದ್ದರು.’

‘ಸಿಟಿ ಮಾರ್ಕೆಟ್ ಪೊಲೀಸರು ಸ್ಥಳಕ್ಕೆ ಹೋಗುತ್ತಿದ್ದಂತೆ ಆರೋಪಿ, ಕೈಯಲ್ಲಿ ಬಚ್ಚಿಟ್ಟುಕೊಂಡಿದ್ದ ಸರದ ತುಂಡು ನುಂಗಿದ್ದ. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ತಾನು ಯಾವುದೇ ತಪ್ಪು ಮಾಡಿಲ್ಲವೆಂದು ವಾದಿಸಿದ್ದ. ಸರ ನುಂಗಿದ್ದನ್ನು ಸ್ಥಳೀಯರೊಬ್ಬರು ನೋಡಿದ್ದರು. ಅದೇ ಮಾಹಿತಿ ಆಧರಿಸಿ ಆತನನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ದು ಸ್ಕ್ಯಾನಿಂಗ್ ಮಾಡಿಸಲಾಯಿತು. ಸರದ ಮಾದರಿ ವಸ್ತು ಹೊಟ್ಟೆಯಲ್ಲಿರುವುದು ಗೊತ್ತಾಯಿತು. ಅದು ಮೂಳೆ ಎಂಬುದಾಗಿ ಆರೋಪಿ ಸುಳ್ಳು ಹೇಳಿದ್ದ’ ಎಂದೂ ಮೂಲಗಳು ತಿಳಿಸಿವೆ.

‘ಆರೋಪಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಸೋಮವಾರ ಬೆಳಿಗ್ಗೆ ಮಲ ವಿಸರ್ಜನೆ ವೇಳೆ ಸರ ಹೊರಗೆ ಬಂದಿದೆ’ ಎಂದೂ ಮೂಲಗಳು ಹೇಳಿವೆ.

ಸಿಬ್ಬಂದಿ ಸೇವೆ: ಕೆಐಎಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು (ಕೆಐಎ) ಅತ್ಯುತ್ತಮ ಸಿಬ್ಬಂದಿಗೆ ಸೇವೆ ನೀಡಿದ್ದಕ್ಕಾಗಿ ಏಷ್ಯಾದ ಪ್ರಶಸ್ತಿಯನ್ನು ಪಡೆದಿದೆ.

ಸ್ಕೈಟ್ರಾಕ್ಸ್ ವರ್ಲ್ಡ್ ಏರ್‌ಪೋರ್ಟ್ (ಎಸ್‌ಡಬ್ಲ್ಯುಎ) ಈ ಪ್ರಶಸ್ತಿಯನ್ನು ನೀಡುತ್ತದೆ. ಭಾರತ ಮತ್ತು ಮಧ್ಯ ಏಷ್ಯಾದಲ್ಲಿಯೇ ಅತ್ಯುತ್ತಮ ವಿಮಾನ ನಿಲ್ದಾಣ ಸಿಬ್ಬಂದಿ ಎಂಬ ಗರಿಯನ್ನು ಕೆಐಎ ಸಿಬ್ಬಂದಿ ಪಡೆದುಕೊಂಡಿದ್ದಾರೆ.

‘ಇತರೆ ವಿಮಾನ ನಿಲ್ದಾಣಗಳಲ್ಲಿನ ಸಿಬ್ಬಂದಿ ನೀಡುವ ಸೇವೆಗಿಂತ ಕೆಐಎ ವಿಮಾನ ನಿಲ್ದಾಣದ ಸೇವೆ ಅತ್ಯುತ್ತಮವಾಗಿದೆ’ ಎಂದು ಎಸ್‌ಡಬ್ಲ್ಯುಎ ಸಂಸ್ಥೆಯು ನಡೆಸಿದ ಸಮೀಕ್ಷೆಯಲ್ಲಿ ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.




ಹರಿ ಮರಾರ್

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಂಸ್ಥೆಯ (ಬಿಐಎಎಲ್) ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಹರಿ ಮರಾರ್, ‘ಏಷ್ಯಾದ ಈ ಪ್ರಶಸ್ತಿಯು ವಿಮಾನ ನಿಲ್ದಾಣದಲ್ಲಿ ಕೆಲಸ ಮಾಡುವ ನಮ್ಮೆಲ್ಲರಿಗೂ ಸಂತಸ ತಂದಿದೆ. ಇಲ್ಲಿನ ಸಿಬ್ಬಂದಿಯ ಕಾರ್ಯಕ್ಷಮತೆಯಿಂದ ಈ ಪ್ರಶಸ್ತಿ ಲಭಿಸಿದೆ. ನಮಗೆ ಮತ ನೀಡಿದ ಎಲ್ಲ ಪ್ರಯಾಣಿಕರಿಗೂ ಧನ್ಯವಾದ’ ಎಂದು ಹೇಳಿದ್ದಾರೆ.

‘ಕೋವಿಡ್ ಹರಡಲು ರಾಜಕಾರಣಿಗಳ ಕೊಡುಗೆ ಹೆಚ್ಚು’

ಬೆಂಗಳೂರು: ಕೋವಿಡ್ ಮೂರನೇ ಅಲೆಯ ಭೀತಿಯಲ್ಲಿರುವ ಸಂದರ್ಭದಲ್ಲೇ ರಾಜಕೀಯ ಪಕ್ಷಗಳು ರ‍್ಯಾಲಿ, ಯಾತ್ರೆಗಳನ್ನು ಆರಂಭಿಸಿವೆ. ಸೋಂಕು ಹರಡುವಿಕೆ ತಡೆಗೆ ಜಾಗೃತಿ ಮೂಡಿಸಬೇಕಾದ ರಾಜಕಾರಣಿಗಳೇ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿರುವುದು ಸರಿಯೇ? ಈ ಕುರಿತು ‘ಪ್ರಜಾವಾಣಿ’ ಸೋಮವಾರ ಹಮ್ಮಿಕೊಂಡಿದ್ದ ‘ಕೊರೊನಾ ಕಾಲದಲ್ಲಿ ರಾಜಕಾರಣಿಗಳ ಯಾತ್ರೆ’ ಎಂಬ ವಿಷಯ ಕುರಿತ ಸಂವಾದದಲ್ಲಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥನಾರಾಯಣಗೌಡ, ಕಾಂಗ್ರೆಸ್ ವಕ್ತಾರೆ ಭವ್ಯ ನರಸಿಂಹಮೂರ್ತಿ, ರಾಜಕೀಯ ವಿಶ್ಲೇಷಕ ಎ.ನಾರಾಯಣ, ಸಾಮಾಜಿಕ ಕಾರ್ಯಕರ್ತ ಡಾ. ಬಿ.ಆರ್.ಮಂಜುನಾಥ್ ಅವರು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ವಿವರ ಇಲ್ಲಿದೆ. **ಪೂರ್ಣ ಸಂವಾದ ವೀಕ್ಷಿಸಲು:** https://www.facebook.com/prajavani.net/videos

ಕೋವಿಡ್‌ಗೆ ಆಡಳಿತ ಪಕ್ಷದ ಕೊಡುಗೆ ಹೆಚ್ಚು



ಕೋವಿಡ್ ಹರಡಲು ಕಾರಣವಾಗುವ ರ‍್ಯಾಲಿಗಳನ್ನು ರಾಜಕೀಯ ಪಕ್ಷಗಳು ನಡೆಸುವುದು ತಪ್ಪು ಎಂಬುದನ್ನು ಒಪ್ಪಿಕೊಳ್ಳಲೇಬೇಕಿದೆ. ಐದು ರಾಜ್ಯಗಳ ಚುನಾವಣೆ ಘೋಷಣೆ ಮಾಡಿದಾಗಿನಿಂದ ಇದು ಆರಂಭವಾಯಿತು. ಪ್ರಧಾನಿ ನರೇಂದ್ರ ಮೋದಿಯವರೇ ರಾಜಕೀಯ ರ‍್ಯಾಲಿಗಳ ಮೂಲಕ ಕೋವಿಡ್ ಸೋಂಕು ಹರಡಿದರು ಎಂದು ಭಾರತೀಯ ವೈದ್ಯಕೀಯ ಸಂಘ(ಐಎಂಎ) ಹೇಳಿದೆ. ಕೋವಿಡ್ ನಿಯಂತ್ರಣ ಮಾಡುವ ಬದಲು, ಸೋಂಕು ಹರಡಲು ಎಲ್ಲರಿಗಿಂತ ಹೆಚ್ಚಿನ ಕೊಡುಗೆ ನೀಡಿದ್ದೇ ಆಡಳಿತ ಪಕ್ಷ. ಈಗ ಜನಾಶೀರ್ವಾದ ರ‍್ಯಾಲಿ ನಡೆಸುತ್ತಿದೆ. ಈ ರ‍್ಯಾಲಿಯಲ್ಲಿ ಗುಂಡು ಹಾರಿಸಿದ್ದನ್ನು ಸರ್ಕಾರ ಸಮರ್ಥನೆ ಮಾಡಿಕೊಳ್ಳು-ತ್ತಿದೆ. ಇನ್ನೊಂದೆಡೆ ಮೂವರು ಪೊಲೀಸರನ್ನು ಅಮಾನತು ಮಾಡಿದೆ. ಲಸಿಕೆ ಹಾಕಿಸಿಕೊಳ್ಳಲು ಮೊದಲಿಗೆ ಪ್ರಧಾನಿಯೇ ಹಿಂದೇಟು ಹಾಕಿದರು. ಇದು ಲಸಿಕಾ ಅಭಿಯಾನದ ಹಿನ್ನಡೆಗೆ ಕಾರಣವಾಯಿತು.

ಭವ್ಯ ನರಸಿಂಹಮೂರ್ತಿ, ಕಾಂಗ್ರೆಸ್ ವಕ್ತಾರೆ

ಪರಿಚಯ ಇಲ್ಲದೆ ಸಂಸದರಾದರೆ?



ಯಾವುದೇ ನಿಯಮ ಸಾಮಾನ್ಯ ಜನರಿಗೆ ಮಾತ್ರ ರಾಜಕಾರಣಿಗಳಿಗೆ ಅಲ್ಲ ಎಂಬಂತಾಗಿದೆ. ರಾಜಕೀಯ ಪಕ್ಷಗಳ ಈ ದೋರಣೆ ಎರಡು ರೀತಿಯ ಸಾಂಕ್ರಾಮಿಕವನ್ನು ಹರಡುತ್ತದೆ. ಕೋವಿಡ್ ಹರಡುವುದು ಒಂದೆಡೆಯಾ ದರೆ, ಅಧಿಕಾರದಲ್ಲಿ ಇರುವವರು ನಿಯಮ ಪಾಲಿ ಸದೆ ನಡೆದುಕೊಂಡಾಗ ಜನರೂ ಅದನ್ನೇ ಅನುಸರಿಸುತ್ತಾರೆ. ರಾಜಕೀಯವಾಗಿ ಸ್ವಲ್ಪ ಪ್ರಬಲವಾದರೆ ನಿಯಮ ಮೀರಬಹುದು ಎಂಬ ಮನೋಭಾವ ಸಮಾಜದಲ್ಲಿ ಬೆಳೆಯುತ್ತದೆ. ಇದು ಇನ್ನೊಂದು ರೀತಿಯ ಸಾಂಕ್ರಾಮಿಕ. ಕೇಂದ್ರ ಸಚಿವರನ್ನು ಪರಿಚಯಿಸಲು ಜನಾಶೀರ್ವಾದ ಯಾತ್ರೆ ಮಾಡಲಾಗುತ್ತಿದೆ ಎಂಬ ಸಮರ್ಥನೆ ಆ ಕ್ಷೇತ್ರದ ಮತ್ತು ರಾಜ್ಯದ ಜನರಿಗೆ ಮಾಡುವ ಅವಮಾನ. ಕ್ಷೇತ್ರದ ಜನರಿಗೆ ಪರಿಚಯ ಇರುವುದರಿಂದಲೇ ಅವರನ್ನು ಸಂಸದರಾಗಿ ಆಯ್ಕೆ ಮಾಡಿದ್ದಾರೆ. ಕೋವಿಡ್ ಕಾಲದಲ್ಲಿ ಚುನಾವಣಾ ರ‍್ಯಾಲಿಗಳು ಹೇಗಿರಬೇಕು ಎಂಬುದರ ಬಗ್ಗೆ ಚುನಾವಣಾ ಆಯೋಗವೇ ನಿಯಮಗಳನ್ನು ರೂಪಿಸಬೇಕು. **–ಎ.ನಾರಾಯಣ,** ರಾಜಕೀಯ ವಿಶ್ಲೇಷಕ

ಸಚಿವರ ಪರಿಚಯಕ್ಕಾಗಿ ರ‍್ಯಾಲಿ



ಕರ್ನಾಟಕದಿಂದ ಕೇರಳ ಮತ್ತು ಮಹಾರಾಷ್ಟ್ರಕ್ಕೆ ಕೋವಿಡ್ ಹರಡಿಲ್ಲ. ಈ ಎರಡು ರಾಜ್ಯಗಳಿಂದಲೇ ರಾಜ್ಯಕ್ಕೆ ಕೋವಿಡ್ ಹರಡಿದ್ದು, ಅಲ್ಲಿ ಬಿಜೆಪಿ ಆಡಳಿತ ನಡೆಸುತ್ತಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ 17 ಸಾವಿರ ಜನರನ್ನು ಸೇರಿಸಿ ಸಭೆ ನಡೆಸಿದ್ದಾರೆ. ಹೊಸದಾಗಿ ಕೇಂದ್ರ ಸಚಿವರಾದ-ವರನ್ನು ಸಂಸತ್‌ನಲ್ಲಿ ಪರಿಚಯ ಮಾಡಿಕೊಳ್ಳಲು ವಿರೋಧ ಪಕ್ಷಗಳು ಅವಕಾಶ ನೀಡಲಿಲ್ಲ. ಹೀಗಾಗಿ, ಸಚಿವರು ಜನಾಶೀರ್ವಾದ ರ‍್ಯಾಲಿಗಳನ್ನು ನಡೆಸಿದ್ದಾರೆ. ನರೇಂದ್ರ ಮೋದಿ ಕಾರ್ಯಕ್ರಮಗಳಿಗೆ ಜನ ಸೇರುತ್ತಾರೆ, ರಾಹುಲ್ ಗಾಂಧಿ ಕಾರ್ಯಕ್ರಮಕ್ಕೆ ಜನರೇ ಬರುವುದಿಲ್ಲ. ಕೋವಿಡ್ ನಿಲಯ ಪಾಲನೆ ಮಾಡಿಕೊಂಡೆ ಸಭೆಗಳನ್ನು ಬಿಜೆಪಿ ನಡೆಸಿದ್ದೇವೆ. ಖುಷಿಯಾದಾಗ ಗುಂಡು ಹಾರಿಸುವುದು ಬಂಜಾರ ಸಮುದಾಯದ ಸಂಪ್ರದಾಯ. ಕೊರೊನಾ ಸೋಂಕನ್ನು ಭಾರತ ಸಮರ್ಥವಾಗಿ ನಿಭಾಯಿಸಿದೆ. **ಅಶ್ವತ್ಥನಾರಾಯಣಗೌಡ,** ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ ಸಂವಾದ

ಎಲ್ಲ ಪಕ್ಷಗಳು ಆತ್ಮವಿಮರ್ಶೆ ಮಾಡಿಕೊಳ್ಳಲಿ



ಕೋವಿಡ್‌ನಿಂದಾಗಿ ದೇಶದಲ್ಲಿ ಸಾವಿರಾರು ಜನರು ಮೃತಪಟ್ಟಿದ್ದಾರೆ. ಇದಕ್ಕೆ ಯಾರಿಗೂ ದುಃಖವಿಲ್ಲ. ಬದಲಿಗೆ ಸಚಿವನಾದ ಸಂಭ್ರಮವೇ ಹೆಚ್ಚಾಗಿದೆ. ಭಾರತ ಸರ್ಕಾರ ಎಂದರೆ ಅದಕ್ಕಿರುವುದು ಇಬ್ಬರ ಮುಖಗಳಷ್ಟೇ. ಮೂರನೇ ಮುಖವೇ ಇಲ್ಲ. ಕೇಂದ್ರ ಸಚಿವರಾದವರು ಪರಿಚ-ಯಿಸಿಕೊಳ್ಳಬೇಕಾದ ಸ್ಥಿತಿ ಇರುವುದು ವಿಪರ್ಯಾಸ. ಇದಕ್ಕಾಗಿ ಜನಾಶೀರ್ವಾದ ಯಾತ್ರೆ ಮಾಡಿದ್ದು ದೊಡ್ಡ ತಪ್ಪು. ರಾಜಕಾರಣಿಗಳ ಈ ರೀತಿಯ ಬೇಜವಾಬ್ದಾರಿ ವರ್ತನೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಬೇಕಿದೆ. ಇಂತಹ ಯಾತ್ರೆ ಮತ್ತು ಬೇಜವಾಬ್ದಾರಿ ನಡವಳಿಕೆಗಳನ್ನು ಜನರೇ ವಿರೋಧಿಸುವಂತಾಗಬೇಕು. ಸಂಸತ್ ಕಲಾಪ ಎದುರಿಸಲು ಆಡಳಿತ ಪಕ್ಷವೇ ಸಿದ್ಧವಿಲ್ಲ. ಕೋವಿಡ್ ಕಾಲದಲ್ಲಿ ಸಣ್ಣಪುಟ್ಟ ಸ್ವಯಂ ಸೇವಾ ಸಂಸ್ಥೆಗಳು ಮಾಡಿದ ಕೆಲಸವನ್ನು ಸರ್ಕಾರ ಅಥವಾ ರಾಜಕೀಯ ಪಕ್ಷಗಳು ಮಾಡಲಿಲ್ಲ. ತಮ್ಮ ನಡವಳಿಕೆಗಳ ಬಗ್ಗೆ ಆ ಪಕ್ಷಗಳೇ ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

ಡಾ. ಬಿ.ಆರ್.ಮಂಜುನಾಥ್, ಸಾಮಾಜಿಕ ಕಾರ್ಯಕರ್ತ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು **‘Deccan Herald-Prajavani Relief Trust’** ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳ-ಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ

ಶುಲ್ಕ ಪಾವತಿಗೆ ಸಹಾಯ



‘ಪ್ರಜಾವಾಣಿ’ ಸ್ಕಾಲರ್‌ಶಿಪ್‌ನಿಂದ ಕಾಲೇಜು ಶುಲ್ಕ ಪಾವತಿಸಲು ಸಾಧ್ಯವಾಯಿತು. ಪತ್ರಿಕೆಯ ಸಮಾಜಮುಖಿ ಕಾರ್ಯದಿಂದ ನನ್ನಂಥ ಅನೇಕ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ವೈದ್ಯೆಯಾಗುವ ಕನಸು ನನ್ನದಾಗಿದೆ. ಗುರಿಸಾಧಿಸಲು ಪ್ರಯತ್ನ ನಡೆಸಿದ್ದೇನೆ.

ಆರತಿ ಶ್ರೀಗನ್, ಕೊಟಗ್ಯಾಳ. ಬೀದರ್ ಜಿಲ್ಲೆ

ಸಕಾಲಕ್ಕೆ ನೆರವು ಶಿಕ್ಷಣಕ್ಕೆ ಸಹಕಾರಿ



‘ಪ್ರಜಾವಾಣಿ’ ಪತ್ರಿಕೆ ನೀಡಿದ ಹಣದಿಂದ ಸಾಕಷ್ಟು ಅನುಕೂಲವಾಯಿತು. ಜೆಇ, ಕೆ–ಸಿಇಟಿ ಪರೀಕ್ಷೆಗೆ ಸಿದ್ಧತೆ ಆರಂಭಿಸಿದ್ದು, ಪುಸ್ತಕಗಳ ಖರೀದಿಗೆ ನೆರವಾಯಿತು. ಸಕಾಲದಲ್ಲಿ ಹಣ ಸಿಕ್ಕಿದ್ದು, ವಿದ್ಯಾಭ್ಯಾಸ ಮುಂದುವರಿಸಲು ಸಹಕಾರಿಯಾಗಿದೆ.

ಧನುಷ್ ಕೆ.ಗೌಡ, ತುಮಕೂರು

ಪಿಸ್ತೂಲ್ ಸ್ವಚ್ಛಗೊಳಿಸುವ ವೇಳೆ ಗುಂಡು ತಗುಲಿ ಕಾನ್‌ಸ್ಟೆಬಲ್ ಸಾವು

ಪ್ರಜಾವಾಣಿ ವಾರ್ತೆ



ಚೇತನ್

ದಾವಣಗೆರೆ: ಇಲ್ಲಿನ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಆವರಣದಲ್ಲಿ ಸೋಮವಾರ ಪಿಸ್ತೂಲ್ ಸ್ವಚ್ಛ-ಗೊಳಿಸುವ ವೇಳೆ ಆಕಸ್ಮಿಕವಾಗಿ ಗುಂಡು ತಗುಲಿ ಸಶಸ್ತ್ರ ಮೀಸಲು ಪಡೆಯ ಕಾನ್‌ಸ್ಟೆಬಲ್ ಚೇತನ್ (28) ಮೃತಪಟ್ಟರು.

ಬೆಳಿಗ್ಗೆ ತರಬೇತಿ ಬಳಿಕ ಪೊಲೀಸ್ ಸಿಬ್ಬಂದಿಯೊಬ್ಬರು 9 ಎಂ.ಎಂ. ಪಿಸ್ತೂಲ್ ಸ್ವಚ್ಛಗೊಳಿಸುವಾಗ ಅವಘಡ ಸಂಭವಿಸಿದೆ. ಚೇತನ್ ಅವರು ಆಸ್ಪತ್ರೆಗೆ ಕರೆತರುವ ಮಾರ್ಗ ಮಧ್ಯೆ ಮೃತಪಟ್ಟರು.

ಇವರು ಚನ್ನಗಿರಿ ತಾಲ್ಲೂಕಿನ ಮಲಹಾಳ್ ಗ್ರಾಮದ ನಿವಾಸಿ. 2012ರಲ್ಲಿ ದಾವಣಗೆರೆ ಜಿಲ್ಲಾ ಸಶಸ್ತ್ರ ಮೀಸಲು ಪಡೆಗೆ ಸೇರಿದ್ದರು. ತಂದೆ, ತಾಯಿ, ಪತ್ನಿ, 4 ವರ್ಷದ ಪುತ್ರ ಇದ್ದಾರೆ. ಪತ್ನಿ ಗರ್ಭಿಣಿ.

‘ಆಕಸ್ಮಿಕವಾಗಿ ಚೇತನ್ ಅವರಿಗೆ ಗುಂಡು ತಗುಲಿದೆ. ಮೇಲಧಿಕಾರಿ-ಗಳೊಂದಿಗೆ ಚರ್ಚಿಸಿ ಕುಟುಂಬಕ್ಕೆ ಪರಿಹಾರ ಕೊಡಿಸಲಾಗುವುದು’ ಎಂದು ಪೂರ್ವ ವಲಯ ಐಜಿಪಿ ಎಸ್.ರವಿ ತಿಳಿಸಿದರು.

ಸಂಶೋಧನೆ –ಅಭಿವೃದ್ಧಿ ನೀತಿ ಜಾರಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ

ರಾಜ್ಯದಲ್ಲಿ ಇನ್ನು ‘ರಾಷ್ಟ್ರೀಯ ಶಿಕ್ಷಣ ನೀತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಷ್ಟ್ರೀಯ ಶಿಕ್ಷಣ ನೀತಿ-2020’ ಜಾರಿಗೆ ತರುವ ಮೂಲಕ, ಇಡೀ ದೇಶದಲ್ಲಿ ಈ ನೀತಿ ಜಾರಿಗೊಳಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಕರ್ನಾಟಕ ಪಾತ್ರವಾಗಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ, ದೆಹಲಿಯಿಂದಲೇ ವರ್ಚುವಲ್ ಮೂಲಕ ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ನೀತಿ ಜಾರಿಗೆ ಹಸಿರು ನಿಶಾನೆ ತೋರಿಸಿದರು. ಈ ನೀತಿಯಡಿ ಉನ್ನತ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳ ದಾಖಲಾತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

‘ಶಿಕ್ಷಣ ಕ್ಷೇತ್ರದಲ್ಲಿ ಮಂಚೂಣಿಯಲ್ಲಿ-ರುವ ಕರ್ನಾಟಕದಲ್ಲಿ ಹೊಸ ಮನ್ವಂತರ ಆರಂಭವಾಗಿದೆ’ ಎಂದೂ ಘೋಷಿಸಿದ ಪ್ರಧಾನ್, ‘ಈ ನೀತಿ ಬಹುಶಿಸ್ತೀಯ ಹಾಗೂ ಬಹು ಆಯ್ಕೆಯ ಕಲಿಕೆಗೆ ಉತ್ತೇಜನ ನೀಡಲಿದೆ. ವಿದ್ಯಾರ್ಥಿಗಳು ತಮಗಿಷ್ಟವಾದ ವಿಷಯವನ್ನು ಅಧ್ಯಯನ ಮಾಡಬಹುದು’ ಎಂದರು.

ಬೊಮ್ಮಾಯಿ ಮಾತನಾಡಿ, ‘ಅ. 1ರಿಂದ ಪದವಿ ಮೊದಲ ವರ್ಷದ ತರಗತಿಗಳು ಆರಂಭವಾಗಲಿವೆ. ಮೊದಲ ವರ್ಷದ ಪದವಿಗೆ ದಾಖಲಾಗುವ ಎಲ್ಲ ವಿದ್ಯಾರ್ಥಿಗಳಿಗೂ ಸರ್ಕಾರದ ವತಿಯಿಂದ ಉಚಿತವಾಗಿ ಟ್ಯಾಬ್ಲೆಟ್ ಪಿಸಿ ನೀಡಲಾಗುವುದು’ ಎಂದು ಪ್ರಕಟಿಸಿದರು.

‘ಶೈಕ್ಷಣಿಕವಾಗಿ ಅದರಲ್ಲೂ ವೈಜ್ಞಾನಿಕ ಅಧ್ಯಯನ ಕ್ಷೇತ್ರದಲ್ಲಿ ಮೊದಲಿನಿಂದಲೂ ಕರ್ನಾಟಕ ಮುಂಚೂಣಿಯಲ್ಲಿದೆ. ಹೀಗಾಗಿ ನೂತನ ಡಿಜಿಟಲ್ ನೀತಿ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ನೀತಿಯನ್ನು ಜಾರಿಗೆ ತರಲಾಗುವುದು. ಈ ಮೂಲಕ ವೈಜ್ಞಾನಿಕ ಸಂಶೋಧನೆ, ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು’ ಎಂದು ಮುಖ್ಯಮಂತ್ರಿ ಹೇಳಿದರು.



ರಾಷ್ಟ್ರೀಯ ಶಿಕ್ಷಣ ನೀತಿ ಕರಡು ರೂಪಿಸಿದ್ದ ಅನುರಾಗ್ ಬೇಹರ್, ಪ್ರೊ.ಎಂ.ಕೆ. ಶ್ರೀಧರ್, ಕೆ. ಕಸ್ತೂರಿ ರಂಗನ್ ಮತ್ತು ಪ್ರೊ. ಟಿ.ವಿ. ಕಟ್ಟೀಮನಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತ ಪ್ರದೀಪ್, ಉನ್ನತ ಶಿಕ್ಷಣ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕುಮಾರ್ ನಾಯ್ಕ್, ಸಂಸದ ಪಿ.ಸಿ. ಮೋಹನ್, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರಾಥಮಿಕ ಹಾಗು ಪ್ರೌಢ ಶಾಲೆ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ತಿಮ್ಮೇಗೌಡ ಇದ್ದರು ಪ್ರಜಾವಾಣಿ ಚಿತ್ರ

ಹೊಸ ವ್ಯವಸ್ಥೆಗೆ ಚಾಲನೆ: ‘ಕಾಲೇಜು ಶಿಕ್ಷಣ ಇಲಾಖೆ ರೂಪಿಸಿರುವ ‘ಏಕೀಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳ ದಾಖಲಾತಿಗೂ ಬೊಮ್ಮಾಯಿ ಚಾಲನೆ ನೀಡಿದರು.

ಒಪ್ಪಂದ: ಹೊಸ ನೀತಿಯಡಿ ಉನ್ನತ ಶಿಕ್ಷಣದ ಜಾಗತೀಕರಣ ಉದ್ದೇಶದಿಂದ ಅಮೆರಿಕದ ಪೆನ್ಸಿಲ್ವೇನಿಯಾ ರಾಜ್ಯದ ಮಾಂಟಿಗೋಮೆರಿ ಕಮ್ಯುನಿಟಿ ಕಾಲೇಜಿನ ಜತೆ ಮಾಡಿಕೊಂಡಿರುವ ಒಪ್ಪಂದದ ದಾಖಲೆಗಳನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅನಾವರಣಗೊಳಿಸಿದರು.

ನೀತಿ ನಿರೂಪಕರಿಗೆ ಸನ್ಮಾನ: ರಾಷ್ಟ್ರೀಯ ಶಿಕ್ಷಣ ನೀತಿ ಕರಡು ಸಮಿತಿ ಅಧ್ಯಕ್ಷರಾಗಿದ್ದ ಡಾ. ಕಸ್ತೂರಿ ರಂಗನ್, ಶಿಕ್ಷಣ ತಜ್ಞರಾದ ಪ್ರೊ.ಎಂ.ಕೆ. ಶ್ರೀಧರ್, ಪ್ರೊ.ಟಿ.ವಿ. ಕಟ್ಟೀಮನಿ ಮತ್ತು ಅನುರಾಗ್ ಬೇಹರ್ ಅವರನ್ನು ಬಸವರಾಜ ಬೊಮ್ಮಾಯಿ ಸನ್ಮಾನಿಸಿದರು.

ವೆಬ್, ಸಹಾಯವಾಣಿ

ನೀತಿಯ ಜಾರಿ ವೇಳೆ ಉಂಟಾಗಬಹುದಾದ ಗೊಂದಲ ನಿವಾರಣೆಗೆ ಕಾಲೇಜು ಶಿಕ್ಷಣ ಇಲಾಖೆ ಸಂಬಂಧಿಸಿದ ವೆಬ್‌ಸೈಟ್ ಮತ್ತು ಸಹಾಯವಾಣಿ (080-24486666) ಆರಂಭಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	120.18	5,723	5,545
ಹಾರಂಗಿ	2,859	2,857.76	1,600	1,850
ಕಬಿನಿ	2,284	2,283.20	2,780	1,000
ಹೇಮಾವತಿ	2,922	2,919.02	2,509	4,895
ಲಿಂಗನಮಕ್ಕಿ	1,819	1,812.65	5,060	-
ಸೂಪಾ (ಮೀ)	564	554.74	3,172	1,021
ಮಾಣಿ	594.36	585.68	629	-
ತುಂಗಭದ್ರಾ	1,633	1,632.99	14,507	14,087
ಮಲಪ್ರಭಾ	2,079.50	2,078	494	494
ಘಟಪ್ರಭಾ	2,175	2,175	1,932	1,932
ಭದ್ರಾ	186	185	4,740	3,837
ಆಲಮಟ್ಟಿ (ಮೀ)	519.60	519.60	20,846	20,846
ನಾರಾಯಣಪುರ (ಮೀ)	492.25	492.05	24,000	22,120

* ನೆಲಮಟ್ಟದಿಂದ

ಭೋವಿ ಸಮುದಾಯಕ್ಕೆ ಸಚಿವ ಸ್ಥಾನ: ಮುಖ್ಯಮಂತ್ರಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೋವಿ ಸಮುದಾಯಕ್ಕೆ ಸೇರಿದವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ನಿವಾಸದಲ್ಲಿ ಬೊಮ್ಮಾಯಿ ಅವರನ್ನು ಭೇಟಿ ಮಾಡಿದ ಸ್ವಾಮೀಜಿ, ಭೋವಿ ಸಮುದಾಯಕ್ಕೆ ಸಚಿವ ಸ್ಥಾನ ನೀಡುವ ಬಗ್ಗೆ ಮನವರಿಕೆ ಮಾಡಿದರು.

ಭೋವಿ ಅಭಿವೃದ್ಧಿ ನಿಗಮಕ್ಕೆ ಮೂರು ವರ್ಷ ಕಳೆದರೂ ಅಧ್ಯಕ್ಷರ ನೇಮಕವಾಗಿಲ್ಲ. ಕಲಬುರ್ಗಿ, ಬೆಳಗಾವಿ, ಮೈಸೂರು ಮತ್ತು ಮಧ್ಯಕರ್ನಾಟಕ-ದಲ್ಲಿ ಕಚೇರಿಗಳ ಆರಂಭಕ್ಕೂ ಮುನ್ನ, ನಿರ್ದೇಶಕರನ್ನು ನೇಮಕ ಮಾಡಬೇಕು. ಅಧ್ಯಕ್ಷರನ್ನು ನೇಮಕ ಮಾಡುವ ಜತೆಗೆ ₹500 ಕೋಟಿ ಬಿಡುಗಡೆ ಮಾಡಬೇಕು ಎಂದು ಸ್ವಾಮೀಜಿ ಒತ್ತಾಯಿಸಿದರು.

ಭೋವಿ ಮತ್ತು ವಡ್ಡರಲ್ಲದವ-ರು ಅನುದಾನ ಪಡೆಯುವುದನ್ನು ತಡೆಯಲು ಭೋವಿ ಅಭಿವೃದ್ಧಿ ನಿಗಮವನ್ನು ಭೋವಿ ವಡ್ಡರ ಅಭಿವೃದ್ಧಿ ನಿಗಮ ಎಂದು ಮರುನಾಮಕರಣ ಮಾಡಬೇಕು.



ಇಮ್ಮಡಿ ಸಿದ್ಧ ರಾಮೇಶ್ವರ ಸ್ವಾಮೀಜಿ

ಭೋವಿ ಗುರುಪೀಠದಲ್ಲಿ ಭೋವಿ ಜನಾಂಗದ ಸಂಸ್ಕೃತಿ ಮತ್ತು ಸಂಶೋಧನಾ ಕೇಂದ್ರ ಸ್ಥಾಪನೆ, ಭೋವಿ ನಿಗಮದಿಂದ ಕಟ್ಟಡ, ಕಲ್ಲುಕ್ವಾರೆ, ರಸ್ತೆ ಚರಂಡಿ, ಅರೆ ಅಲೆಮಾರಿ ಮತ್ತು ಭೂರಹಿತ ಭೋವಿ ವಡ್ಡರ ಕಾರ್ಮಿಕ ಸಮೀಕ್ಷೆ ನಡೆಸಿ ವಿಶೇಷ ಗುರುತಿನ ಚೀಟಿ ವಿತರಿಸಬೇಕು ಎಂದು ಸ್ವಾಮೀಜಿ ಮನವಿ ಮಾಡಿದರು.

ಕಲ್ಲುಕ್ವಾರಿ ಕುಲವೃತ್ತಿಯಾಗಿರು-ವುದರಿಂದ ಆ ವೃತ್ತಿಗೆ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆಯಿಂದ ತೊಡಕಾಗಿರುವ ಕಾನೂನುಗಳನ್ನು ನಿವಾರಣೆ ಮಾಡಬೇಕು. ಆ ವೃತ್ತಿ ಕೈಗೊಳ್ಳುವವರಿಗೆ ಯಂತ್ರ ಖರೀದಿಗೆ ಶೇ 75 ರಷ್ಟು ಅಥವಾ ₹2 ಕೋಟಿವರೆಗೆ ಸಹಾಯಧನ ಒದಗಿಸಬೇಕು. ಮುಂದಿನ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಸಮುದಾಯದ ಸ್ಪರ್ಧಾಕಾಂಕ್ಷಿಗಳಿಗೆ ಟಿಕೆಟ್ ಹಂಚಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಬೆಂಗಳೂರಿನ ಉತ್ತರದಲ್ಲಿಯೂ ಕ್ಯಾನ್ಸರ್ ಕೇಂದ್ರ ಸ್ಥಾಪನೆ: ಸಿ.ಎಂ ಹೇಳಿಕೆ

ಪ್ರಾದೇಶಿಕವಾರು ಕ್ಯಾನ್ಸರ್ ಆಸ್ಪತ್ರೆ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಮಾದರಿಯಲ್ಲೇ ಪ್ರಾದೇಶಿಕವಾರು ಕ್ಯಾನ್ಸರ್ ಆಸ್ಪತ್ರೆ ಆರಂಭಿಸಲು ಕ್ರಮ ಕೈಗೊಳ್ಳಲಾಗುವು-ದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಮವಾರ ತಿಳಿಸಿದರು.

ಇನ್ಫೊಸಿಸ್ ಪ್ರತಿಷ್ಠಾನದ ವತಿಯಿಂದ ಕಿದ್ವಾಯಿ ಸಂಸ್ಥೆಯ ಆವರಣದಲ್ಲಿ ನಿರ್ಮಿಸಿರುವ ಹೊರರೋಗಿಗಳ ವಿಭಾಗದ (ಇನ್ಫೊಸಿಸ್ ಒಪಿಡಿ) ಕಟ್ಟಡ ಹಾಗೂ ವಿವಿಧ ಘಟಕಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಬೀದರ್ ಸೇರಿದಂತೆ ದೂರದ ಜಿಲ್ಲೆಗಳ ಬಡ ಜನರು ಕ್ಯಾನ್ಸರ್ ಚಿಕಿತ್ಸೆಗೆ ಕಿದ್ವಾಯಿ ಆಸ್ಪತ್ರೆಯನ್ನೇ ಅವಲಂಬಿಸಬೇಕು. ಅಷ್ಟು ದೂರದಿಂದ ಬೆಂಗಳೂರಿಗೆ ಬಂದು ಕಷ್ಟ ಪಡುವುದು ತಪ್ಪಬೇಕು. ಹೀಗಾಗಿ ಪ್ರದೇಶವಾರು ಆಸ್ಪತ್ರೆ ಸ್ಥಾಪನೆಗೆ ನಿರ್ಧರಿಸಿದ್ದೇವೆ. ಬೆಂಗಳೂರಿನ ಉತ್ತರ ಭಾಗದಲ್ಲೂ ಕ್ಯಾನ್ಸರ್ ಕೇಂದ್ರ ಆರಂಭಿಸಲು ಚಿಂತಿಸಲಾಗಿದೆ ಎಂದು ತಿಳಿಸಿದರು.

‘ಕಲಬುರ್ಗಿಯಲ್ಲಿ ಕಿದ್ವಾಯಿ ಕೇಂದ್ರ ಇದೆ. ಶಿವಮೊಗ್ಗ ಮತ್ತು ಮೈಸೂರಿನಲ್ಲೂ ಆಸ್ಪತ್ರೆ ಸ್ಥಾಪನೆಗೆ ಚಾಲನೆ ಸಿಕ್ಕಿದೆ. ಹುಬ್ಬಳ್ಳಿ–ಧಾರವಾಡದಲ್ಲಿ ಕ್ಯಾನ್ಸರ್ ಆಸ್ಪತ್ರೆ ಸ್ಥಾಪಿಸುವ ಅಗತ್ಯ ಹೆಚ್ಚಿದೆ. ಇದಕ್ಕೆ ಬೇಕಿರುವ ಭೂಮಿ ಒದಗಿಸಲು ಹಾಗೂ ಇತರ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಸಿದ್ಧವಿದೆ’ ಎಂದು ತಿಳಿಸಿದರು.

‘ಕ್ಯಾನ್ಸರ್‌ಪೀಡಿತರಿಗೆಕೈಗೆಟಕುವದರ ದಲ್ಲಿ ಔಷಧಗಳು ಸಿಗುವಂತಾಗಲು ಸೊಸೈಟಿ ಸ್ಥಾಪಿಸಲು ಚಿಂತಿಸಲಾಗಿದೆ. ಇದಕ್ಕೆ ಸಿಎಸ್‌ಆರ್ ಹಾಗೂ ಸರ್ಕಾರಿ ನಿಧಿ ಬಳಸಲಾಗುತ್ತದೆ. ಈ ಬಗ್ಗೆ ಕೇಂದ್ರದ ಜೊತೆಗೂ ಚರ್ಚಿಸುತ್ತೇವೆ. ಬೆಂಗಳೂರಿನಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಆರಂಭಿಸುವ ಅಗತ್ಯವೂ ಇದೆ’ ಎಂದರು.

ಇ–ಹಾಸ್ಪಿಟಲೈಸೇಷನ್ ಸೇವೆ ಹಾಗೂ ಕಿದ್ವಾಯಿ ಸಂಸ್ಥೆಯ ವೆಬ್‌ಸೈಟ್‌ಗೂ ಚಾಲನೆ ನೀಡಲಾಯಿತು. ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ದಾನಿಗಳಾದ ಸುಧಾ ಹಾಗೂ ಮಜೀದ್ ಇದ್ದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕ್ಯಾನ್ಸರ್ ಪೀಡಿತ ಮಗುವಿನ ಜೊತೆ ಸಮಾಲೋಚನೆ ನಡೆಸಿದರು. ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕ ಡಾ.ಸಿ.ರಾಮಚಂದ್ರ ಇದ್ದಾರೆ –ಪ್ರಜಾವಾಣಿ ಚಿತ್ರ

ಒಳ್ಳೆಯ ಕೆಲಸ ಮಾಡಿ ಮರೆತುಬಿಡಬಾರದು. ಅದನ್ನು ಪುನರ್ ಮನನ ಮಾಡಿಕೊಳ್ಳಬೇಕು. ಆಗ ಮತ್ತಷ್ಟು ಕೆಲಸ ಮಾಡಲು ಪ್ರೇರಣೆ ಸಿಗುತ್ತದೆ

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ

‘ಹಣ ಇರುವುದು ಜನರಿಗಾಗಿ’

‘ಹಣ ಇರುವುದು ಎಣಿಸಲಿಕ್ಕ-ಲ್ಲ. ಜನರಿಗಾಗಿ. ಸಮಾಜಕ್ಕಾಗಿ ಏನಾದರೂ ಕೊಡುಗೆ ನೀಡಲು ಅದನ್ನು ಬಳಸಬೇಕು’ ಎಂದು ಇನ್ಫೊಸಿಸ್ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ ಹೇಳಿದರು.

‘ಪ್ರತಿಷ್ಠಾನವು ಬಡಜನರ ಹಿತಕ್ಕಾಗಿ ಕೆಲಸ ಮಾಡುತ್ತದೆ. ಅವರಿಗೆ ನೆರವಾಗಲು ಕಿದ್ವಾಯಿಯಲ್ಲಿ ಸುಮಾರು ₹70 ಕೋಟಿ ವೆಚ್ಚದಲ್ಲಿ ಒಪಿಡಿ, ಇತರೆ ಸೌಕರ್ಯಗಳನ್ನು ಕಲ್ಪಿಸಲಾಗಿದೆ’ ಎಂದು ಹೇಳಿದರು.

ನಾಡಗೀತೆ: ಗೊಂದಲಗಳಿಗೆ ಶೀಘ್ರವೇ ಪರಿಹಾರ –ಸಚಿವ

ಪ್ರಜಾವಾಣಿ ವಾರ್ತೆ



ವಿ. ಸುನಿಲ್ ಕುಮಾರ್

ಉಡುಪಿ: ‘ನಾಡಗೀತೆ ಗಾಯನವನ್ನು ಎಷ್ಟು ನಿಮಿಷಕ್ಕೆ ಸೀಮಿತಗೊಳಿಸಬೇ-ಕು, ಹಿನ್ನೆಲೆ ಸಂಗೀತ ಹಾಗೂ ಕನ್ನಡಾಂಬೆ ಭುವನೇಶ್ವರಿಯ ಫೋಟೊ ಹೇಗಿರಬೇಕು ಎಂಬ ಬಗ್ಗೆ ಚರ್ಚೆ ನಡೆದಿದ್ದು, ಶೀಘ್ರವೇ ಎಲ್ಲ ಗೊಂದಲಗಳನ್ನು ನಿವಾರಿಸಲಾಗುವುದು’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಸೋಮವಾರ ಹೇಳಿದರು.

ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ಸದ್ಯ ವಿವಿಧ ಕಾರ್ಯಕ್ರಮಗಳಲ್ಲಿ ನಾಡಗೀತೆಯ ಅವಧಿ, ಹಿನ್ನೆಲೆ ಸಂಗೀತ ಬೇರೆ ಬೇರೆ-ಯಾಗಿರುತ್ತದೆ. ಇದರಲ್ಲಿ ಏಕರೂಪತೆ ತರಲಾಗುವುದು’ ಎಂದರು.

ಗಣ್ಯರ ಜಯಂತಿ ಕಾರ್ಯಕ್ರ-ಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವಜನ ಸಬಲೀಕರಣ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳು ಜಂಟಿಯಾಗಿ, ಅರ್ಥಪೂರ್ಣವಾ-ಗಿ ಹೇಗೆ ಆಚರಿಸಬಹುದು ಎಂಬ ಬಗ್ಗೆ ಚಿಂತನೆ ನಡೆದಿದೆ ಎಂದು ತಿಳಿಸಿದರು.

ಅಂತಿಮ ತೀರ್ಮಾನ ಆಗಿಲ್ಲ: ಬಳಕೆದಾರರ ಮನೆಗಳಿಗೆ ಸ್ಮಾರ್ಟ್ ವಿದ್ಯುತ್ ಮೀಟರ್ ಹಾಗೂ ಪ್ರಿಪೇಯ್ಡ್ ಮೀಟರ್ ಅಳವಡಿಕೆ ಕುರಿತು ಚರ್ಚೆಗಳು ನಡೆಯುತ್ತಿವೆ. ಸಾಧಕ ಬಾಧಕ ಗಮನಿಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದರು.

ಮುಖ್ಯಾಂಶಗಳು

- ‘ನಾಡಗೀತೆಯ ಅವಧಿ, ಹಿನ್ನೆಲೆ ಸಂಗೀತದಲ್ಲಿ ಏಕರೂಪತೆ’
- ‘ಸ್ಮಾರ್ಟ್ ವಿದ್ಯುತ್ ಮೀಟರ್, ಪ್ರಿಪೇಯ್ಡ್ ಮೀಟರ್ ಅಳವಡಿಕೆ ಅಂತಿಮವಾಗಿಲ್ಲ’

ಪರಿಷ್ಕೃತ ಮಾದರಿಯಲ್ಲಿ ಪಠ್ಯ ಬೋಧನೆಗೆ ಪ್ರಾಧ್ಯಾಪಕರ ಆಕ್ಷೇಪ

ಇತಿಹಾಸ ವಿರೂಪಗೊಳಿಸಿದ ಪಿಯು ಇಲಾಖೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ (2021–22) ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಎಲ್ಲ ಪಠ್ಯಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಪ್ರತಿಹಂತಕ್ಕೆ ಶೇ 25ರಷ್ಟು ಬೋಧನೆಗೆ ಅಳವಡಿಸಿ ಪದವಿಪೂರ್ವ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಇತಿಹಾಸ ಪಠ್ಯ ಪರಿಷ್ಕರಿಸಿರುವ ಕ್ರಮಕ್ಕೆ ಇತಿಹಾಸ ಪ್ರಾಧ್ಯಾಪಕರು, ಉಪನ್ಯಾಸಕರಿಂದ ಆಕ್ಷೇಪ ವ್ಯಕ್ತವಾಗಿದೆ.

‘ಇತಿಹಾಸ ಪಠ್ಯದಲ್ಲಿ ನಡೆದಿರುವ ‘ಕತ್ತರಿಸಿ ಮತ್ತು ಅಂಟಿಸುವ ಪ್ರಯೋಗ’ (ಕಟ್ ಆ್ಯಂಡ್ ಪೇಸ್ಟ್) ಇತಿಹಾಸದ ಮೂಲಸ್ವರೂಪ ಮತ್ತು ವಿನ್ಯಾಸಕ್ಕೆ ತದ್ವಿರುದ್ಧವಾಗಿದೆ. ಮೂಲಸ್ವರೂಪ-ವನ್ನೇ ವಿರೂಪಗೊಳಿಸಿ ಪರಿಷ್ಕರಿಸಿರು-ವುದು, ಇತಿಹಾಸದ ತಾತ್ವಿಕ ಚೌಕಟ್ಟಿಗೆ ವಿರುದ್ಧವಾಗಿದೆ’ ಎಂದು ಇಲಾಖೆ ನಿರ್ದೇಶಕರಿಗೆ ಉಪನ್ಯಾಸಕರು ಈಗಾಗಲೇ ದೂರು ಸಲ್ಲಿಸಿದ್ದಾರೆ. ಪರಿಷ್ಕೃತ ಪಠ್ಯವನ್ನು ಬಿಟ್ಟು ನಾಲ್ಕು ಭಾಗಗಳಾಗಿ ವಿಂಗಡಿಸಿ ಬೋಧನೆಗೆ ಅವಕಾಶ ಮಾಡಿಕೊಡಬೇಕು ಎಂದೂ ಆಗ್ರಹಿಸಿದ್ದಾರೆ.

‘ಇತಿಹಾಸದ ಪರಿಷ್ಕೃತ ಪಠ್ಯ-ವಸ್ತುವಿನ ಮೊದಲ ಅವಧಿಯಲ್ಲಿ ಬಹುತೇಕ ಆಧುನಿಕ, ಎರಡನೇ ಅವಧಿಯಲ್ಲಿ ಪ್ರಾಚೀನ, ಮೂರನೇ ಅವಧಿಯಲ್ಲಿ ಮಧ್ಯಕಾಲೀನ, ನಾಲ್ಕನೇ ಅವಧಿಯಲ್ಲಿ ಉಳಿದ ಇತಿಹಾಸವನ್ನು ಬೋಧಿಸುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಇದು ಅಸಂಬಂದ್ಧ ಕ್ರಮ’ ಎಂದು ಇತಿಹಾಸ ಉಪನ್ಯಾಸಕ-ರೊಬ್ಬರು ದೂರಿದರು.

‘ಕಾಲಾನುಕ್ರಮಣಿಕೆ ಇತಿಹಾಸದ ಮುಖ್ಯಲಕ್ಷಣ. ಬಿಡಿಯಾಗಿ ಬೋಧಿಸದೆ, ಸಮಷ್ಠಿಯಾಗಿ ಕಲಿಸಬೇಕು. ಏಕೆಂದರೆ ಐತಿಹಾಸಿಕ ಘಟನೆಗಳ ನಡುವೆ ಕಾರ್ಯಕಾರಣ ಸಂಬಂಧಗಳಿರುತ್ತವೆ. ಪರಸ್ಪರ ಅವಲಂಬಿಸಿವೆ. ಜೈವಿಕ ಸಹ ಸಂಬಂಧ ಹೊಂದಿರುತ್ತದೆ. ಪರಿಷ್ಕರಣೆಯಂ-ತೆ ಬೋಧಿಸಿ, ಕಾಲಾನುಕ್ರಮವ-ನ್ನು ಕೈಬಿಡುವುದರಿಂದ ಮುಂದೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಮೇಲೆ ನಕಾರಾತ್ಮ ಪರಿಣಾಮ ಬೀರುವ ಸಾಧ್ಯತೆ ಇದೆ’ ಎಂದು ಬಾಗಲಕೋಟೆಯ ಉಪನ್ಯಾಸ-ಕರೊಬ್ಬರು ಹೇಳಿದರು.

‘ಕಲಿಕೆಯು ಸರಳತೆಯಿಂದ ಸಂಕೀರ್ಣತೆ ಕಡೆಗೆ ಸಾಗಬೇಕು. ಬೋಧನಾ ವಿಷಯಗಳ ಪರಿಕಲ್ಪನೆಗಳ ನಡುವೆ ಸಹ ಸಂಬಂಧ ಏರ್ಪಡಬೇಕು. ಆಗಷ್ಟೇ ಪರಿಣಾಮಕಾರಿ ಬೋಧನೆ, ಕಲಿಕೆ ಸಾಧ್ಯ. ಮೊದಲ ಅವಧಿಯಲ್ಲಿ ಸರಳವೂ ಆಕರ್ಷಕವೂ ಆದ ಪ್ರಾಚೀನ ಇತಿಹಾಸದ ಬದಲು ಆಧುನಿಕ ಇತಿಹಾಸವನ್ನು ತಂದಿರುವುದು ಮೂಲಆಶಯವನ್ನು ನಿರರ್ಥಕಗೊ-ಳಿಸುತ್ತದೆ. ಪರಿಷ್ಕರಣೆ ಮಾಡುವಾಗ ನಿರ್ದಿಷ್ಟ ಮಾನದಂಡ ಅನುಸರಿಸಿಲ್ಲ’ ಎಂದೂ ದೂರಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಇಲಾಖೆಯ ನಿರ್ದೇಶಕಿ ಆರ್.ಸ್ನೇಹಲ್ ಅವರನ್ನು ಸಂಪರ್ಕಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

‘ಅತಾರ್ಕಿಕ, ಅವೈಜ್ಞಾನಿಕ ಕ್ರಮ’

‘ಇತಿಹಾಸವನ್ನು ಹೀಗೇ ವಿಂಗಡಿಸುವುದು ತಪ್ಪು, ಅದಕ್ಕೆ ಮಾಡುವ ಅಪಚಾರವಿದು. ಇತಿಹಾಸ ಅಧ್ಯಯನವನ್ನು ಸಮಕಾಲೀನದಿಂದ ಹಿಂದಕ್ಕೆ ಹೋಗಿ, ಪ್ರಾಚೀನಕ್ಕೆ ಹೋಗುವುದಾದರೆ ಅದು ಅತಾರ್ಕಿಕ ಮತ್ತು ಅವೈಜ್ಞಾನಿಕ ಕ್ರಮ. ಇತಿಹಾಸದ ಮೂಲ ಕಲ್ಪನೆ, ವ್ಯಾಖ್ಯಾನಕ್ಕೆ ಅವಮಾನ ಮಾಡಿದಂತೆ’ ಎಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಅಶೋಕ ಶೆಟ್ಟರ್ ಅವರು ಹೇಳಿದರು.

‘ಪ್ರಾಚೀನತೆಯಿಂದ ಆಧುನಿಕತೆಯ ಕಡೆಗೆ ಇತಿಹಾಸ. ಚರಿತ್ರೆಯನ್ನು ಈ ರೀತಿ ಬೋಧಿಸಲು ಅನುಸರಿಸುವ ಕ್ರಮಕ್ಕಿಂತಲೂ, ಈ ರೀತಿ ಯೋಚಿಸುವುದೇ ತಪ್ಪು. ಇತಿಹಾಸ ಎನ್ನುವುದು ಮಾನವ ಕ್ರಿಯೆಗೆ ಸಂಬಂಧಿಸಿದ್ದು. ಮಾನವ ವಿಕಾಸ ಮೊದಲು. ಬಳಿಕ ನಾಗರಿಕತೆಯ ಏಳುಬೀಳು. ಇತಿಹಾಸದಲ್ಲಿ ಕಾಲಾನುಕ್ರಮಣಿಕೆ ಬಿಡುವುದು ಖಂಡಿತಾ ತಪ್ಪು’ ಎಂದು ಮಂಗಳೂರು ವಿಶ್ವವಿದ್ಯಾಲಯದ ಡೀನ್ (ಇತಿಹಾಸ ವಿಭಾಗ) ಪ್ರೊ. ಉದಯ್ ಬಾರ್ಕೂರು ಅಭಿಪ್ರಾಯಪಟ್ಟರು.

ಮಂಡ್ಯ: ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆ ಇದೇ 25ರಂದು ಮಂಡ್ಯ ನಗರದಲ್ಲಿ ನಡೆಯಲಿದ್ದು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ದುಶ್ಯಂತ್ ಕುಮಾರ್ ಗೌತಮ್ ಸಭೆಯನ್ನು ಉದ್ಘಾಟಿಸಲಿ-ದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅಧ್ಯಕ್ಷತೆ ವಹಿಸಲಿದ್ದಾರೆ.

ಚಿತ್ರದುರ್ಗದಲ್ಲಿ ನಡೆದ ಪದಾಧಿಕಾರಿಗಳ ಸಭೆಯ ನಂತರದ ಸಂಘಟನಾತ್ಮಕ ಚಟುವಟಿಕೆಗಳು, ಕೋವಿಡ್ 3ನೇ ಅಲೆಯ ಕುರಿತ ತಯಾರಿ, ಮಹಾನಗರ ಪಾಲಿಕೆಗಳ ಚುನಾವಣೆ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಕುರಿತು ಚರ್ಚಿಸಲಾಗುವುದು ಎಂದು ರಾಜ್ಯ ಮುಖ್ಯ ವಕ್ತಾರ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ತಿಳಿಸಿದ್ದಾರೆ.

‘ಜಾತಿ ಗಣತಿ: ಗೊಂದಲ ಇಲ್ಲ’

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಜಾತಿ ಜನಗಣತಿ ನಡೆಸುವಂತೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಕಾಂತರಾಜ್ ಅವರಿಗೆ ಸೂಚಿಸಿದ್ದರು. ಅದರಂತೆ, ಜಾತಿ ಜನಗಣತಿ ವರದಿ ಸಿದ್ಧವಾಗಿದ್ದ-ರೂ ಬಿಡುಗಡೆ ಮಾಡಿರಲಿಲ್ಲ. ಈಗ ಆ ವರದಿ ಬಿಡುಗಡೆಗೆ ಸರ್ಕಾರದಲ್ಲಿ ಗೊಂದಲಗಳಿಲ್ಲ. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಸರ್ಕಾರಕ್ಕೆ ಜಾತಿ ಜನಗಣತಿ ವಿವರಗಳನ್ನು ಸಲ್ಲಿಸಿದ ಬಳಿಕ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಗುಂಡಿನ ದಾಳಿ ಅಫ್ಗನ್ ಸೈನಿಕ ಸಾವು

ಕಾಬೂಲ್ (ಎಪಿ): 'ಕಾಬೂಲ್ ವಿಮಾನ ನಿಲ್ದಾಣದ ಪ್ರವೇಶದ್ವಾರವೊಂದರ ಬಳಿ ಸೋಮವಾರ ಗುಂಡಿನ ದಾಳಿ ನಡೆದಿದ್ದು, ಅಫ್ಗನ್ ಸೈನಿಕನೊಬ್ಬ ಮೃತಪಟ್ಟಿದ್ದಾನೆ. ಮೂವರು ಸೈನಿಕರಿಗೆ ಗಾಯಗಳಾಗಿವೆ' ಎಂದು ಜರ್ಮನಿಯ ಸೇನೆಯು ಹೇಳಿದೆ.

ಕಾಬೂಲ್ ವಿಮಾನ ನಿಲ್ದಾಣದ ಬಳಿ ತೆರವು ಕಾರ್ಯಾಚರಣೆಯಲ್ಲಿ ಭಾಗಿಯಾಗಿರುವ ಜರ್ಮನಿ ಸೇನೆಯು ಈ ಮಾಹಿತಿ ನೀಡಿದೆ. 'ಪ್ರವೇಶದ್ವಾರವೊಂದರ ಬಳಿ ಗದ್ದಲ ಉಂಟಾಯಿತು. ಅದರ ಬೆನ್ನಲ್ಲೇ ಹಲವು ಸುತ್ತು ಗುಂಡು ಹಾರಿಸಿದ ಸದ್ದು ಕೇಳಿಸಿತು. ಆ ಸ್ಥಳದಿಂದ ಅಫ್ಗನ್ ಸೇನೆಯ ಒಬ್ಬ ಸೈನಿಕನ ಶವವನ್ನು ಒಳಗೆ ತರಲಾಯಿತು. ಮೂವರು ಸೈನಿಕರಿಗೆ ಗಾಯಗಳಾದವು' ಎಂದು ಜರ್ಮನಿಯ ಸೇನೆ ಹೇಳಿದೆ.

ಆದರೆ, ಗದ್ದಲ ಏಕೆ ಉಂಟಾಯಿತು ಮತ್ತು ಸೈನಿಕರನ್ನು ಗುರಿ ಮಾಡಿಕೊಂಡು ಏಕೆ ಗುಂಡು ಹಾರಿಸಲಾಯಿತು ಎಂಬುದು ತಕ್ಷಣಕ್ಕೆ ತಿಳಿದುಬಂದಿಲ್ಲ. ಗುಂಡು ಹಾರಿಸಿದವರು ಯಾರು ಎಂಬುದೂ ಪತ್ತೆಯಾಗಿಲ್ಲ.

ಮುಖ್ಯಾಂಶಗಳು

- ದಾಳಿಯಲ್ಲಿ ಮೂವರು ಅಫ್ಗನ್ ಸೈನಿಕರಿಗೆ ಗಾಯ
- ದಾಳಿ ನಡೆಸಿದವರು ಯಾರು ಎಂಬುದು ಪತ್ತೆಯಾಗಿಲ್ಲ
- ದಾಳಿ ಮತ್ತು ಸಾವು ದೃಢಪಡಿಸಿದ ಜರ್ಮನಿ ಸೇನೆ

ದೇಶ ತೊರೆಯಲು ಮುಂದಾಗಿರುವ ಅಫ್ಗನ್ನರು ಮತ್ತು ಅಮೆರಿಕ-ಮಿತ್ರ ರಾಷ್ಟ್ರಗಳ ಪ್ರಜೆಗಳನ್ನು ನ್ಯಾಟೊ ಪಡೆಯು ತೆರವು ಮಾಡುತ್ತಿದೆ. 'ತಾಲಿಬಾನ್ ಮತ್ತು ಅಲ್ ಕೈದಾ ಉಗ್ರ ಸಂಘಟನೆಗಳ ವಿರುದ್ಧ ಹೋರಾಡಿದ್ದ ನ್ಯಾಟೊ ಪಡೆಗಳ ಮೇಲೆ, ಉಗ್ರರು ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ದಾಳಿ ನಡೆಸುವ ಅಪಾಯವಿದೆ. ನಿಲ್ದಾಣದ ಬಳಿ ಸೈನಿಕರು ಗುಂಪುಗೂಡುವುದು ಬೇಡ' ಎಂದು ಅಮೆರಿಕ ರಕ್ಷಣಾ ಸಚಿವಾಲಯವು ಭಾನುವಾರವಷ್ಟೇ ಎಚ್ಚರಿಕೆ ನೀಡಿತ್ತು. ಅದರ ಮರುದಿನವೇ ಅಫ್ಗನ್ ಸೈನಿಕರ ಮೇಲೆ ಗುಂಡಿನ ದಾಳಿ ನಡೆದಿದೆ.

ಕೆಲಸಕ್ಕೆ ಹಿಂತಿರುಗಲು ಯುವತಿಯರು, ಮಹಿಳೆಯರಿಗೆ ತಾಲಿಬಾನ್ ಆಹ್ವಾನ

ಹಕ್ಕುಗಳು ಇವೆ, ಆದರೆ ಬುರ್ಖಾದೊಳಗೆ



ಕಾಬೂಲ್‌ನ ಮಾರುಕಟ್ಟೆಯಲ್ಲಿ ಬುರ್ಖಾ ಧರಿಸಿದ ಮಹಿಳೆಯರು ಖರೀದಿಯಲ್ಲಿ ತೊಡಗಿದ್ದರು ಎಎಫ್‌ಪಿ ಚಿತ್ರ

ಕಾಬೂಲ್ (ಎಪಿ): 'ದೇಶದ ಮಹಿಳೆ ಮತ್ತು ಮಕ್ಕಳಿಗೆ ಅವರು ಈ ಹಿಂದೆ ಅನುಭವಿಸುತ್ತಿದ್ದ ಎಲ್ಲಾ ಹಕ್ಕುಗಳನ್ನು ನೀಡುತ್ತೇವೆ. ಆದರೆ ಯುವತಿಯರು ಮತ್ತು ಮಹಿಳೆಯರು ಬುರ್ಖಾ ಧರಿಸಬೇಕು ಅಷ್ಟೆ' ಎಂದು ತಾಲಿಬಾನ್ ವಕ್ತಾರ ಡಾ.ಸುಹೇಲ್ ಶಹೀನ್ ಹೇಳಿದ್ದಾರೆ.

'ದೇಶದಲ್ಲಿ ಶಿಕ್ಷಕಿಯರು ತಮ್ಮ ಕೆಲಸ ಆರಂಭಿಸಿದ್ದಾರೆ. ಅವರು ಏನನ್ನೂ ಕಳೆದುಕೊಂಡಿಲ್ಲ. ಮಹಿಳಾ ಪತ್ರಕರ್ತರು ತಮ್ಮ ಕೆಲಸ ಆರಂಭಿಸಿದ್ದಾರೆ. ಅವರು ಸಹ ಏನನ್ನೂ ಕಳೆದುಕೊಂಡಿಲ್ಲ. ಮಹಿಳೆಯರಿಗೆ ಎಲ್ಲಾ ಹಕ್ಕುಗಳನ್ನು ನೀಡುತ್ತೇವೆ. ಆದರೆ ಅವರೆಲ್ಲರೂ ಕಡ್ಡಾಯವಾಗಿ ಹಿಜಬ್ ಧರಿಸಬೇಕು. ಇದನ್ನು ಒಪ್ಪಿಕೊಂಡು ಹಲವರು ಈಗಾಗಲೇ ಕೆಲಸ ಆರಂಭಿಸಿದ್ದಾರೆ' ಎಂದು ಡಾ.ಸುಹೇಲ್ ಹೇಳಿದ್ದಾರೆ.



'ತಾಲಿಬಾನ್ ವಿರುದ್ಧ ಕೆಲಸ ಮಾಡುತ್ತಿದ್ದವರನ್ನು ಹುಡುಕುತ್ತಿದ್ದೇವೆ. ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಪ್ರತಿ ಮನೆಯನ್ನೂ ಪರಿಶೀಲಿಸಲಾಗುತ್ತಿದೆ ಎಂಬುದೆಲ್ಲಾ ಸುಳ್ಳು. ಅದೆಲ್ಲಾ ಸುಳ್ಳು ಸುದ್ದಿ' ಎಂದು ಸುಹೇಲ್ ಹೇಳಿದ್ದಾರೆ.

ಸುಖಕ್ಕಾಗಿ ವಲಸೆ: 'ಯಾರೂ ನಮಗೆ ಹೆದರಿ ದೇಶವನ್ನು ಬಿಡುತ್ತಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಸುಖವಾಗಿ ಬದುಕುವ ಉದ್ದೇಶದಿಂದ ಜನರು ದೇಶ ತೊರೆಯುತ್ತಿದ್ದಾರೆ' ಎಂದು ತಾಲಿಬಾನ್ ಹೇಳಿದೆ.

'ಇದು ಹೆದರಿಕೆಯ ಕಾರಣದಿಂದ ಆಗುತ್ತಿರುವ ವಲಸೆ ಅಲ್ಲ ಎಂಬುದನ್ನು ನಾನು ಖಡಾಖಂಡಿತವಾಗಿ ಹೇಳುತ್ತೇನೆ. ಇದೊಂದು ರೀತಿಯಲ್ಲಿ ಆರ್ಥಿಕ ವಲಸೆ. ಪಾಶ್ಚಿಮಾತ್ಯ ದೇಶಗಳತ್ತ ನಡೆಯುತ್ತಿರುವ ವಲಸೆ. ಅಫ್ಗಾನಿಸ್ತಾನ ಬಡ ರಾಷ್ಟ್ರ. ದೇಶದ ಶೇ 70ರಷ್ಟು ಜನರು ಬಡತನದಲ್ಲಿ ಬದುಕುತ್ತಿದ್ದಾರೆ. ಹೀಗಾಗಿ ಅವರೆಲ್ಲರೂ ಪಾಶ್ಚಿಮಾತ್ಯ ದೇಶಗಳಲ್ಲಿ ಸುಖವಾಗಿ ಬದುಕಲು ವಲಸೆ ಹೋಗುತ್ತಿದ್ದಾರೆ' ಎಂದು ಸುಹೇಲ್ ಶಹೀನ್ ಹೇಳಿದ್ದಾರೆ.

50ಕ್ಕೂ ಹೆಚ್ಚು ತಾಲಿಬಾನಿಗಳ ಹತ್ಯೆ?

ಕಾಬೂಲ್ ಹೊರವಲಯದಲ್ಲಿ ತಾಲಿಬಾನ್ ವಿರುದ್ಧದ ಪ್ರತಿರೋಧ ಹೆಚ್ಚುತ್ತಿದೆ. 'ತಾಲಿಬಾನ್ ವಿರುದ್ಧ ಸಶಸ್ತ್ರ ಹೋರಾಟ ಘೋಷಿಸಿದ್ದ ಪಂಜ್‌ಶಿರ್ ಕಣಿವೆ ಪ್ರಾಂತದ ಹೋರಾಟಗಾರರು ತಾಲಿಬಾನ್ ವಿರುದ್ಧ ದಾಳಿ ನಡೆಸಿದ್ದಾರೆ. ಆ ದಾಳಿಯಲ್ಲಿ 7 ತಾಲಿಬಾನಿಗಳು ಮೃತಪಟ್ಟಿದ್ದಾರೆ' ಎಂದು ಮಾಧ್ಯಮಗಳು ವರದಿ ಮಾಡಿವೆ. ಮೃತರ ಸಂಖ್ಯೆ 50ಕ್ಕೂ ಹೆಚ್ಚು ಎಂಬ ವರದಿಗಳೂ ಇವೆ.

ಪಂಜ್‌ಶಿರ್ ಕಣಿವೆಯಲ್ಲಿ ಒಟ್ಟಾಗಿರುವ ತಾಲಿಬಾನ್ ವಿರೋಧಿ ಹೋರಾಟಗಾರರು ಭಾನುವಾರ ತಾಲಿಬಾನ್ ವಿರುದ್ಧ ಹೋರಾಟ ಆರಂಭಿಸಿದ್ದಾರೆ. ತಾಲಿಬಾನ್ ಹಿಡಿತದಲ್ಲಿದ್ದ ಮೂರು ಜಿಲ್ಲೆಗಳನ್ನು ಹೋರಾಟಗಾರರನ್ನು ವಶಪಡಿಸಿಕೊಂಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. 'ಆದರೆ, ಆ ಮೂರೂ ಜಿಲ್ಲೆಗಳನ್ನು ಮರಳಿ ವಶಕ್ಕೆ ಪಡೆದಿದ್ದೇವೆ. ಈಗ ಯಾವುದೇ ಪ್ರತಿರೋಧವಿಲ್ಲ. ಯಾವುದೇ ರೀತಿಯ ದಾಳಿಯನ್ನು ತಡೆಯಲು ತಾಲಿಬಾನ್ ಸಿದ್ಧವಿದೆ. ಪಂಜ್‌ಶಿರ್ ಹೊರವಲಯದಲ್ಲಿ ನಮ್ಮ ಸೈನಿಕರು ಬೀಡುಬಿಟ್ಟಿದ್ದಾರೆ' ಎಂದು ತಾಲಿಬಾನ್ ಹೇಳಿದೆ.

ಕಾಬೂಲ್‌ನಿಂದ ದೋಹಾಕ್ಕೆ ನ್ಯಾಟೊ, ಅಮೆರಿಕದ ವಿಮಾನಗಳಲ್ಲಿ ಬಂದಿದ್ದ ಭಾರತೀಯರು

ದೋಹಾದಿಂದ 146 ಮಂದಿ ಭಾರತಕ್ಕೆ

ನವದೆಹಲಿ (ಪಿಟಿಐ): ಭಾರತವು ತನ್ನ 146 ಪ್ರಜೆಗಳನ್ನು ಕತಾರ್ ರಾಜಧಾನಿ ದೋಹಾದಿಂದ ನಾಲ್ಕು ವಿಮಾನಗಳಲ್ಲಿ ವಾಪಸ್ ಕರೆತಂದಿದೆ.

ಹದಗೆಟ್ಟಿರುವ ಭದ್ರತಾ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ನ್ಯಾಟೊ ಮತ್ತು ಅಮೆರಿಕದ ವಿಮಾನಗಳು ಅಫ್ಗಾನಿಸ್ತಾನದಿಂದ ಸ್ಥಳಾಂತರಿಸಿದ ಕೆಲವು ದಿನಗಳ ನಂತರ ಅವರನ್ನು ಭಾರತವು ತವರಿಗೆ ಕರೆತಂದಿದೆ.

ತಾಲಿಬಾನ್‌ಗಳು ಸ್ವಾಧೀನಪಡಿಸಿಕೊಂಡ ನಂತರ ಕಾಬೂಲ್‌ನಿಂದ ತನ್ನ ನಾಗರಿಕರನ್ನು ಸ್ಥಳಾಂತರಿಸುವ ಭಾರತದ ಕಾರ್ಯಕ್ರಮದ ಭಾಗವಾಗಿ, ಅವರನ್ನು ದೆಹಲಿಗೆ ಕರೆತರಲಾಯಿತು ಎಂದು ಮೂಲಗಳು ತಿಳಿಸಿವೆ.

ಕಾಬೂಲ್‌ನಿಂದ ಸ್ಥಳಾಂತರಿಸಿದ ಬಳಿಕ ತವರಿಗೆ ಕರೆಸಿಕೊಂಡ ಭಾರತೀಯರ ಎರಡನೇ ತಂಡ ಇದಾಗಿದೆ. ಮೊದಲ ತಂಡದಲ್ಲಿ ಒಟ್ಟು 135 ಭಾರತೀಯರನ್ನು ದೋಹಾದಿಂದ ಕರೆತರಲಾಗಿತ್ತು.

ದೋಹಾದಿಂದ ಬಂದ ಎರಡನೇ ತಂಡದ ಪೈಕಿ 104 ಜನರನ್ನು ವಿಸ್ತಾರ ವಿಮಾನದಲ್ಲಿ, 30 ಜನರನ್ನು ಕತಾರ್ ಏರ್‌ವೇಸ್ ವಿಮಾನದಲ್ಲಿ ಮತ್ತು 11 ಮಂದಿಯನ್ನು ಇಂಡಿಗೋ ವಿಮಾನದಲ್ಲಿ ಕರೆತರಲಾಗಿದೆ. ಒಬ್ಬ ವ್ಯಕ್ತಿಯು ಏರ್ ಇಂಡಿಯಾ ವಿಮಾನದಲ್ಲಿ ಹಿಂದಿರುಗಿದರು ಎಂದು ಅಧಿಕಾರಿಯೊಬ್ಬರು ಹೇಳಿದರು.

ಕಾಬೂಲ್‌ನಿಂದ ದೋಹಾಕ್ಕೆ ಸ್ಥಳಾಂತರಗೊಂಡ ಬಹುತೇಕ ಭಾರತೀಯರು ಅಫ್ಗಾನಿಸ್ತಾನದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿವಿಧ ವಿದೇಶಿ ಕಂಪನಿಗಳ ಉದ್ಯೋಗಿಗಳು. ಇವರನ್ನು ನ್ಯಾಟೊ ಮತ್ತು ಅಮೆರಿಕದ ವಿಮಾನಗಳು ಕಾಬೂಲ್‌ನಿಂದ ದೋಹಾಕ್ಕೆ ಕರೆತಂದದ್ದವು.

ಕಾಬೂಲ್‌ನಿಂದ ತಮ್ಮ ನಾಗರಿಕರನ್ನು ರಕ್ಷಿಸಲು ವಿವಿಧ ದೇಶಗಳು ಹರಸಾಹಸ ಪಡುತ್ತಿರುವ ಮಧ್ಯೆ, ಭಾನುವಾರ ಎರಡು ವಿವಿಧ ವಿಮಾನಗಳಲ್ಲಿ ಇಬ್ಬರು ಅಫ್ಗನ್ ಶಾಸಕರು ಸೇರಿದಂತೆ 400 ಜನರನ್ನು ಭಾರತವು ವಾಪಸ್ ಕರೆತಂದಿತ್ತು.



ಚಮನ್ ಪ್ರದೇಶದ ಗಡಿ ಮೂಲಕ ಸೋಮವಾರ ಅಫ್ಗಾನಿಸ್ತಾನದಿಂದ ಪಾಕಿಸ್ತಾನ ತಲುಪಿದ ಜನರು – ಪಿಟಿಐ ಚಿತ್ರ

'ತಾಲಿಬಾನ್ ಗೆಲುವಿನ ಹಿಂದೆ ಪಾಕ್ ಕೈವಾಡ'

ವಾಷಿಂಗ್ಟನ್ (ಪಿಟಿಐ): ಪಾಕಿಸ್ತಾನ ಮತ್ತು ಅದರ ಗುಪ್ತಚರ ಸಂಸ್ಥೆಯು ತಾಲಿಬಾನ್ ಅನ್ನು ಪೋಷಿಸುತ್ತಿದ್ದು, ಅಫ್ಗಾನಿಸ್ತಾನವನ್ನು ವಶಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದೆ ಎಂದು ರಿಪಬ್ಲಿಕನ್ ಪಕ್ಷದ ಸಂಸದ ಸ್ಟೀವ್ ಚಾಬೊಟ್ ಆರೋಪಿಸಿದ್ದಾರೆ. ತಾಲಿಬಾನ್ ವಿಜಯವನ್ನು ಪಾಕಿಸ್ತಾನ ಸಂಭ್ರಮಿಸಿದ್ದು ನಾಚಿಕೆಗೇಡು ಎಂದಿರುವ ಅವರು, ಇದರಿಂದ ಅಫ್ಗನ್ನರು ಅಪರಿಮಿತ ಕ್ರೌರ್ಯಕ್ಕೆ ತುತ್ತಾಗಲಿದ್ದಾರೆ ಎಂದಿದ್ದಾರೆ.

ಭಾರತ ಪರ ಗುಂಪಿನ ಸಹ ಅಧ್ಯಕ್ಷರೂ ಆಗಿರುವ ಸ್ಟೀವ್, ಹಿಂದೂ ರಾಜಕೀಯ ಕಾರ್ಯಸಮಿತಿ ಸಭೆಯಲ್ಲಿ ಭಾನುವಾರ ಮಾತನಾಡಿ, ಅಫ್ಗಾನಿಸ್ತಾನದ ಧಾರ್ಮಿಕ ಅಲ್ಪಸಂಖ್ಯಾತರನ್ನು ಸ್ವಾಗತಿಸಿದ ಭಾರತ ಸರ್ಕಾರವನ್ನು ಶ್ಲಾಘಿಸಿದರು.

'ಪಾಕಿಸ್ತಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ಕಿರುಕುಳದ ಬಗ್ಗೆ ಗೊತ್ತಿದೆ. ಈ ಬಗ್ಗೆ ನಮ್ಮ ನಾಗರಿಕರಿಗೆ ತಿಳಿಸಿಕೊಡುವುದು ಉತ್ತಮ. ಅಪಹರಣ, ಇಸ್ಲಾಂಗೆ ಬಲವಂತವಾಗಿ ಮತಾಂತರ ಮಾಡುವುದು, ಹಿಂದೂ ಹುಡುಗಿಯರನ್ನು ಹಿರಿಯ ಮುಸ್ಲಿಂ ಪುರುಷರಿಗೆ ಬಲವಂತವಾಗಿ ಮದುವೆ ಮಾಡುವಂತಹ ಹೇಯ ಅಭ್ಯಾಸದಲ್ಲಿ ತೊಡಗಿದೆ' ಎಂದರು. ಈ ಆರೋಪಗಳು ಕೇವಲ ಗಾಳಿಸುದ್ದಿ ಅಲ್ಲ ಎಂದೂ ಅವರು ಹೇಳಿದರು.

ಹದಿಹರೆಯದ ಹುಡುಗಿಯರನ್ನು ಅವರ ಕುಟುಂಬಗಳಿಂದ ಅಪಹರಿಸಿ, ಬಲವಂತದ ಮದುವೆಗಳಿಗೆ ಒಪ್ಪಿಸುವ ಅನೇಕ ಹೃದಯ ವಿದ್ರಾವಕ ಕಥೆಗಳನ್ನು ಪ್ರಮುಖ ಸುದ್ದಿ ಸಂಸ್ಥೆಗಳು ಮತ್ತು ಮಾನವ ಹಕ್ಕುಗಳ ಗುಂಪುಗಳು ಅನೇಕ ಬಾರಿ ಪ್ರಕಟಿಸಿವೆ ಎಂದರು.



ಸಂಕಷ್ಟದಲ್ಲೂ ಮಂದಹಾಸ...

ಕಾಬೂಲ್‌ನ ಹಮೀದ್ ಕರ್ಜೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭದ್ರತೆಗೆ ನಿಯೋಜಿಸಲಾಗಿದ್ದ ಅಮೆರಿಕದ ಯೋಧರೊಬ್ಬರಿಗೆ ಬಾಟಲ್‌ನಿಂದ ಮಕ್ಕಳು ನೀರು ಸಿಂಪಡಿಸಿ ಸಂತಸಪಟ್ಟರು

– ರಾಯಿಟರ್ಸ್ ಚಿತ್ರ

ಸರ್ಕಾರದಿಂದ ಗುರುವಾರ ಮಾಹಿತಿ

ನವದೆಹಲಿ (ಪಿಟಿಐ): ಯುದ್ಧಪೀಡಿತ ಅಫ್ಗಾನಿಸ್ತಾನದಲ್ಲಿನ ಬೆಳವಣಿಗೆಗಳ ಕುರಿತು, ವಿವಿಧ ರಾಜಕೀಯ ಪಕ್ಷಗಳ ಸಂಸದೀಯ ನಾಯಕರಿಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಗುರುವಾರ ಮಾಹಿತಿ ನೀಡಲಿದೆ.

'ಅಂದು ಬೆಳಿಗ್ಗೆ 11ಕ್ಕೆ ಸಂಸತ್ ಭವನದ ಅನೆಕ್ಸ್‌ನಲ್ಲಿ, ವಿವಿಧ ರಾಜಕೀಯ ಪಕ್ಷಗಳ ಸಂಸದೀಯ ನಾಯಕರಿಗೆ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಖುದ್ದಾಗಿ ಮಾಹಿತಿ ನೀಡಲಿದ್ದಾರೆ. ಸಂಬಂಧಿಸಿದವರಿಗೆ ಈಗಾಗಲೇ ಇ-ಮೇಲ್ ಮುಖಾಂತರ ಆಹ್ವಾನ ನೀಡಲಾಗಿದ್ದು, ಅವರೆಲ್ಲರೂ ಭಾಗವಹಿಸಬೇಕು' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು ಟ್ವೀಟ್ ಮೂಲಕ ಮನವಿ ಮಾಡಿದ್ದಾರೆ.

ಇದಕ್ಕೂ ಮುನ್ನ, ಅಫ್ಗಾನಿಸ್ತಾನದಲ್ಲಿನ ವಿದ್ಯಮಾನಗಳ ಕುರಿತಾಗಿ ಎಲ್ಲ ರಾಜಕೀಯ ಪಕ್ಷಗಳ ಸಂಸದೀಯ ನಾಯಕರಿಗೆ ಮಾಹಿತಿ ನೀಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಸಚಿವಾಲಯಕ್ಕೆ ಸೂಚಿಸಿದ್ದಾಗಿ ಸಚಿವ ಜೈಶಂಕರ್ ಕೂಡ ಟ್ವೀಟ್ ಮಾಡಿದ್ದರು.

ಅಫ್ಗಾನಿಸ್ತಾನದಿಂದ ಭಾರತೀಯರನ್ನು ತೆರವುಗೊಳಿಸುವ ಕಾರ್ಯಾಚರಣೆ ಹಾಗೂ ಅಲ್ಲಿನ ಪರಿಸ್ಥಿತಿ ಕುರಿತು ಕೇಂದ್ರ ಸರ್ಕಾರವು ಮಾಹಿತಿ ನೀಡುವ ನಿರೀಕ್ಷೆ ಇದೆ.

ವೈದ್ಯಕೀಯ ಪರಿಕರ ರವಾನೆಗೆ ಅಡ್ಡಿ

ಜಿನಿವಾ (ರಾಯಿಟರ್ಸ್): ಕಾಬೂಲ್ ವಿಮಾನ ನಿಲ್ದಾಣದಲ್ಲಿನ ನಿರ್ಬಂಧಗಳಿಂದಾಗಿ ಪೌಷ್ಟಿಕ ಆಹಾರದ ಕಿಟ್, ಶಸ್ತ್ರಚಿಕಿತ್ಸೆಗೆ ಅಗತ್ಯವಾದ ಸಾಮಗ್ರಿಗಳೂ ಸೇರಿದಂತೆ 500 ಟನ್‌ಗಿಂತಲೂ ಅಧಿಕ ವೈದ್ಯಕೀಯ ಪರಿಕರಗಳ ನೆರವನ್ನು ಅಫ್ಗಾನಿಸ್ತಾನಕ್ಕೆ ತಲುಪಿಸಲಾಗಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಹೇಳಿದೆ.

ಈ ವಾರದಲ್ಲಿ ಅಲ್ಲಿಗೆ ತಲುಪಬೇಕಿದ್ದ ಆಹಾರ ಹಾಗೂ ವೈದ್ಯಕೀಯ ನೆರವಿಗೆ ಅಲ್ಲಿನ ಪರಿಸ್ಥಿತಿಯು ಅಡ್ಡಿಯಾಗಿದೆ. ಕಳೆದ ಎರಡು ತಿಂಗಳಿನಲ್ಲಿ ಸ್ಥಳಾಂತರಗೊಂಡಿರುವ ಅಂದಾಜು ಮೂರು ಲಕ್ಷ ಜನರಿಗೆ ನೆರವು ತಲುಪಿಸುವುದು ಕಠಿಣವಾಗಿದೆ. ಆ ದೇಶದ ಜನಸಂಖ್ಯೆಯ ಅರ್ಧದಷ್ಟು ಜನರು, (1.85 ಕೋಟಿ) ವಿಶ್ವ ಆರೋಗ್ಯ ಸಂಸ್ಥೆಯ ನೆರವನ್ನೇ ಅವಲಂಬಿಸಿದ್ದಾರೆ. ಬರಗಾಲದಿಂದಾಗಿ, ಮುಂಬರುವ ದಿನಗಳಲ್ಲಿ ಆ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆ ಇದೆ ಎಂದು ಡಬ್ಲ್ಯುಎಚ್‌ಒ ಹೇಳಿದೆ.

ಪಂಜಾಬ್ ಕಾಂಗ್ರೆಸ್: ಒಳಜಗಳ ಮತ್ತೆ ಭುಗಿಲು

ಸಿಧು ಸಲಹೆಗಾರರ ವಿವಾದಿತ ಹೇಳಿಕೆಗೆ ಆಕ್ಷೇಪ: ಆತ್ಮಾವಲೋಕನಕ್ಕೆ ಕರೆ

ನವದೆಹಲಿ/ಚಂಡೀಗಡ (ಪಿಟಿಐ): ಪಂಜಾಬ್ ಕಾಂಗ್ರೆಸ್ ಘಟಕದ ಒಳಜಗಳವು ಮತ್ತೆ ಭುಗಿಲೇಳುವ ಲಕ್ಷಣಗಳು ಕಾಣಿಸಿವೆ. 'ಜಮ್ಮು ಮತ್ತು ಕಾಶ್ಮೀರವನ್ನು ಭಾರತದ ಭಾಗವೆಂದು ಪರಿಗಣಿಸದವರು ಪಂಜಾಬ್ ಕಾಂಗ್ರೆಸ್‌ನ ಭಾಗವಾಗಿರಬೇಕೇ' ಎಂದು ಪ್ರಶ್ನಿಸಿರುವ ಕಾಂಗ್ರೆಸ್ ನಾಯಕ ಮನೀಶ್ ತಿವಾರಿ, ಈ ಬಗ್ಗೆ ಪಕ್ಷವು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸೋಮವಾರ ಒತ್ತಾಯಿಸಿದ್ದಾರೆ.

ಪಂಜಾಬ್ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ನೇಮಿಸಿಕೊಂಡಿರುವ ಸಲಹೆಗಾರರಾದ ಮಲ್ವಿಂದರ್ ಸಿಂಗ್ ಮಾಲಿ ಮತ್ತು ಪ್ಯಾರೆಲಾಲ್ ಗರ್ಗ್ ಅವರು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ ಎನ್ನಲಾಗಿದೆ.

ಸಿಧು ತಮ್ಮ ಸಲಹೆಗಾರರನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳುವಂತೆ ಎಚ್ಚರಿಸಿರುವ ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್, 'ಈ ಸಲಹೆಗಾರರು ತಮ್ಮ ಮಾತುಗಳಿಂದಾಗುವ ಪರಿಣಾಮದ ಅರಿವಿಲ್ಲದೇ ಹಾಗೂ ತಮಗೆ ಗೊತ್ತಿಲ್ಲದ ವಿಚಾರದ ಬಗ್ಗೆ ಮಾತನಾಡುವುದನ್ನು ನಿಲ್ಲಿಸಲಿ. ಅವರ ಕೆಲಸವು ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥರಿಗೆ ಸಲಹೆ ಕೊಡುವುದಕ್ಕೆ ಮಾತ್ರ ಸೀಮಿತವಾಗಿರಲಿ' ಎಂದು ಕಿಡಿಕಾರಿದ್ದಾರೆ.

ಆಕ್ಷೇಪ, ಟೀಕೆ ಎದುರಾಗುತ್ತಿದ್ದಂತೆಯೇ ಪಟಿಯಾಲದ ತಮ್ಮ ಮನೆಗೆ ಬರುವಂತೆ ಸಲಹೆಗಾರರಿಗೆ ಸಿಧು ಸೋಮವಾರ ಸೂಚಿಸಿದ್ದಾರೆ.

ಪಂಜಾಬ್ ಉಸ್ತುವಾರಿಯಾಗಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹರೀಶ್ ರಾವತ್, 'ಚುನಾವಣಾ ವರ್ಷದಲ್ಲಿ ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳಲು, ಈ ಹೇಳಿಕೆಗಳನ್ನು ತಿರುಚಲಾಗಿದೆ' ಎಂದಿದ್ದಾರೆ.

ಹೇಳಿಕೆಗಳನ್ನು ಪರಿಶೀಲಿಸುವುದಾಗಿಯೂ ಹೇಳಿರುವ ರಾವತ್, ಒಂದು ವೇಳೆ ಅವು ದೇಶವಿರೋಧಿ ಆಗಿದ್ದಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ. ಜಮ್ಮು ಮತ್ತು ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗಿದ್ದು, ಅದರ ವಿರುದ್ಧವಾಗಿ ಯಾರೊಬ್ಬರೂ ಮಾತನಾಡುವಂತಿಲ್ಲ ಎಂದೂ ಹೇಳಿದ್ದಾರೆ.

ಪ್ರತಿಕ್ರಿಯೆಗೆ ಬಿಜೆಪಿ ಆಗ್ರಹ

ಸಿಧು ಅವರ ಸಲಹೆಗಾರರ ವಿವಾದಾತ್ಮಕ ಹೇಳಿಕೆಗಳನ್ನು ಖಂಡಿಸಿರುವ ಬಿಜೆಪಿ, ಈ ಬಗ್ಗೆ ಉತ್ತರಿಸುವಂತೆ ಸಿಧು ಹಾಗೂ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಸೋಮವಾರ ಆಗ್ರಹಿಸಿದೆ.

ಸಿಧು ಅವರ ಸಲಹೆಗಾರರಲ್ಲಿ ಒಬ್ಬರಾದ ಮಲ್ವಿಂದರ್ ಸಿಂಗ್ ಮಾಲಿ, 'ಕಾಶ್ಮೀರವು ಕಾಶ್ಮೀರ ಜನರ ದೇಶ' ಎಂದು ಹೇಳಿದ್ದರು. ಮತ್ತೊಬ್ಬ ಸಲಹೆಗಾರ ಪ್ಯಾರೆಲಾಲ್ ಗರ್ಗ್, ಕಾಶ್ಮೀರ ವಿಚಾರದಲ್ಲಿ ಪಾಕಿಸ್ತಾನದ ನಡೆಯನ್ನು ಟೀಕಿಸಿದ್ದ ಪಂಜಾಬ್ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಹೇಳಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದರು.

2019ರಲ್ಲಿ ಕರ್ತಾರ್ ಸಾಬ್ ಸಾಹಿಬ್ ಕಾರಿಡಾರ್ ಉದ್ಘಾಟನಾ ಸಮಾರಂಭದಲ್ಲಿ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಶ್ಲಾಘಿಸಿ ನವಜೋತ್ ಸಿಂಗ್ ಸಿಧು ಮಾಡಿದ ಭಾಷಣವನ್ನು ಉಲ್ಲೇಖಿಸಿ ಟ್ವೀಟ್ ಮಾಡಿರುವ ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ, 'ಸಿಧು ಅವರ ಹೇಳಿಕೆಗಳಿಂದ ಅವರ ಸಲಹೆಗಾರರೂ ಸ್ಫೂರ್ತಿ ಪಡೆದಿದ್ದಾರೆಯೇ' ಎಂದು ಕೇಳಿದ್ದಾರೆ.

'ಪಾಕಿಸ್ತಾನದ ಬಗ್ಗೆ ಮಾಡಿದ ಟೀಕೆಯು ಪಂಜಾಬ್ ಹಿತಾಸಕ್ತಿಗೆ ಪೂರಕವಾಗಿಲ್ಲ ಎಂದು ಗರ್ಗ್ ಹೇಳಿದರೆ, ಮಾಲಿ ಅವರು, 'ಕಾಶ್ಮೀರವೇ ಪ್ರತ್ಯೇಕವಾಗಿದ್ದು, ಅದನ್ನು ಭಾರತವು ಅತಿಕ್ರಮಿಸಿಕೊಂಡಿದೆ' ಎನ್ನುತ್ತಾರೆ. ಇವು ಪಾಕಿಸ್ತಾನ ಹಾಗೂ ಕಾಶ್ಮೀರ ಕುರಿತಾಗಿ ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರ ಸಲಹೆಗಾರರಿಗೆ ಇರುವ ಅಭಿಪ್ರಾಯಗಳು. ಈ ಬಗ್ಗೆ ರಾಹುಲ್ ಗಾಂಧಿಯವರ ಬಳಿಯಲ್ಲಿ ಉತ್ತರವಿದೆಯೇ' ಎಂದು ಪಾತ್ರಾ ಪ್ರಶ್ನಿಸಿದ್ದಾರೆ.

ಈ ವಿಷಯವಾಗಿ ಸಿಧು ಮೌನವಾಗಿರುವುದನ್ನೂ ಪ್ರಶ್ನಿಸಿರುವ ವಿರೋಧ ಪಕ್ಷವಾದ ಶಿರೋಮಣಿ ಅಕಾಲಿ ದಳದ ಮುಖಂಡ ದಲ್ಜಿತ್ ಸಿಂಗ್, 'ಅವರು ಇದುವರೆಗೂ ಸುಮ್ಮನಿದ್ದಾರೆ ಎಂದರೆ, ಅವರ ಸಮ್ಮತಿಯ ಮೇರೆಗೇ ಅವರ ಸಲಹೆಗಾರರು ಈ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಅರ್ಥ' ಎಂದಿದ್ದಾರೆ.

ಚಿನ್ನಾಭರಣ ಅಂಗಡಿಯಲ್ಲಿ ಗುಂಡಿನ ದಾಳಿ, ಗ್ರಾಹಕ ಸಾವು

ಮೈಸೂರು: ಇಲ್ಲಿನ ವಿದ್ಯಾರಣ್ಯಪುರಂನಲ್ಲಿರುವ ಅಮೃತ್ ಗೋಲ್ಡ್ ಅಂಡ್ ಸಿಲ್ವರ್ ಪ್ಯಾಲೇಸ್ ಅಂಗಡಿಗೆ ಸೋಮವಾರ ನುಗ್ಗಿದ ನಾಲ್ವರು ದುಷ್ಕರ್ಮಿಗಳ ತಂಡ ಗುಂಡಿನ ದಾಳಿ ನಡೆಸಿ, ಆಭರಣ ದೋಚಿದೆ. ಇವರು ಹಾರಿಸಿದ ಗುಂಡು ಗ್ರಾಹಕ ಚಂದ್ರು ಎಂಬುವವರಿಗೆ ತಗುಲಿ ಮೃತಪಟ್ಟಿದ್ದಾರೆ. ಮತ್ತೊಬ್ಬರು ಗಾಯಗೊಂಡಿದ್ದಾರೆ.

ಸಂಜೆ 4 ಗಂಟೆ ಸಮಯದಲ್ಲಿ ಬೈಕಿನಲ್ಲಿ ಬಂದ ನಾಲ್ವರು, ಮಾಲೀಕ ಧರ್ಮೇಂದ್ರ ಅವರನ್ನು ಥಳಿಸಿ ಆಭರಣ ದೋಚಿದರು. ಪರಾರಿಯಾಗುವಾಗ ಎದುರಾದ ಚಂದ್ರು ಮೇಲೆ ಗುಂಡು ಹಾರಿಸಿದ್ದಾರೆ. ಚಂದ್ರು ಸ್ಥಳದಲ್ಲೇ ಮೃತಪಟ್ಟರೆ, ಗಾಯಗೊಂಡ ಧರ್ಮೇಂದ್ರ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದುಷ್ಕರ್ಮಿಗಳ ಚಹರೆ ಸೆರೆಯಾಗಿದ್ದು, ಅವರನ್ನು ಪತ್ತೆ ಹಚ್ಚಲು ಪೊಲೀಸರು ನಗರದಲ್ಲಿ ನಾಕಾಬಂದಿ ರಚಿಸಿದ್ದಾರೆ. ಸ್ಥಳಕ್ಕೆ ಬಂದ ಪೊಲೀಸ್ ಕಮಿಷನರ್ ಚಂದ್ರಗುಪ್ತ ಪರಿಶೀಲನೆ ನಡೆಸಿದರು.

ಕೋವಿಡ್ ಮರಣ ಪ್ರಮಾಣದಲ್ಲಿ ಹಾವೇರಿ ಮುಂಚೂಣಿ • ಸರ್ಕಾರಕ್ಕೆ ತಜ್ಞವೈದ್ಯರ ತಂಡದ ವರದಿ

ಕಂಟಕವಾದ ಆಮ್ಲಜನಕ ವ್ಯತ್ಯಯ

• ಸಿದ್ದು ಆರ್.ಜಿ.ಹಳ್ಳಿ

ಪ್ರಜಾವಾಣಿ ವಿಶೇಷ

ಹಾವೇರಿ: ತಾಲ್ಲೂಕು ಆಸ್ಪತ್ರೆಗಳಲ್ಲಿ ಆಮ್ಲಜನಕ ಸಿಲಿಂಡರ್‌ಗಳ ಕೊರತೆ, ಕೊರೊನಾ ಸೋಂಕಿತರಿಗೆ ನಿರೀಕ್ಷಿತ ಪ್ರಮಾಣದಲ್ಲಿ ಆಮ್ಲಜನಕದ ಅಲಭ್ಯತೆ ಜಿಲ್ಲೆಯಲ್ಲಿ ಕೋವಿಡ್ ಮರಣ ಪ್ರಮಾಣ ಏರಿಕೆಗೆ ಕಾರಣ ಎನ್ನುತ್ತದೆ ತಜ್ಞವೈದ್ಯರ ವರದಿ.

ಜಿಲ್ಲೆಯಲ್ಲಿ 641 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದು, ಮರಣ ಪ್ರಮಾಣದಲ್ಲಿ ಹಾವೇರಿ ಜಿಲ್ಲೆ (ಪ್ರಸ್ತುತ ಶೇ 2.90) ರಾಜ್ಯದಲ್ಲೇ ಮುಂಚೂಣಿಯಲ್ಲಿದೆ. ಎರಡನೇ ಅಲೆಯಲ್ಲಿ ಸಾವುಗಳ ಸಂಖ್ಯೆ ಏರಿಕೆಗೆ ಕಾರಣವೇನು? ಎಂಬ ಬಗ್ಗೆ ತನಿಖೆಗೆ ಬಸವರಾಜ ಬೊಮ್ಮಾಯಿ ಅವರು ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಸೂಚನೆ ನೀಡಿದ್ದರು.

ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯ ಅರಿವಳಿಕೆ ತಜ್ಞ ಡಾ.ಬಸವರಾಜ ಕಲ್ಲಾಪುರ, ಔಷಧ ವಿಭಾಗದ ಮುಖ್ಯಸ್ಥ ಡಾ.ಈಶ್ವರ ಹಸಬಿ ಮತ್ತು ಡಾ.ಸಂಪತ್‌ಸಿಂಗ್ ರಂಗವಾಲೆ ಅವರಿದ್ದ ತಂಡ ಜೂನ್ ತಿಂಗಳಲ್ಲಿ ಜಿಲ್ಲಾಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಭೇಟಿ ನೀಡಿ, ಮರಣ ಪ್ರಮಾಣ ಏರಿಕೆಗೆ ಕಾರಣವೇನು ಎಂಬ ಬಗ್ಗೆ ಮಾಹಿತಿ ಕಲೆ ಹಾಕಿ, ಸರ್ಕಾರಕ್ಕೆ ವರದಿ ಸಲ್ಲಿಸಿದೆ.

ಆಮ್ಲಜನಕ ಪೂರೈಕೆಗೆ ನಿಗಾವಹಿಸದಿರುವುದು, ತಾಲ್ಲೂಕು ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸದ ವೆಂಟಿಲೇಟರ್‌ಗಳು, ವೆಂಟಿಲೇಟರ್‌ಗಳಿರುವ ಕಡೆ ನಿರ್ವಹಣೆ ಸಿಬ್ಬಂದಿ ಕೊರತೆ ಅಂಶಗಳು ಒಳಗೊಂಡು ಕೋವಿಡ್ ಪರಿಸ್ಥಿತಿ ನಿರ್ವಹಣೆ ಮಾಡುವಲ್ಲಿ ಜಿಲ್ಲಾಡಳಿತ ಮತ್ತು ಆರೋಗ್ಯ ಇಲಾಖೆ ವಿಫಲವಾಗಿವೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ರಾತ್ರಿ ವೇಳೆ ಹೆಚ್ಚು ಸಾವು: ರಾತ್ರಿ ವೇಳೆಯೇ ಹೆಚ್ಚಿನ ಸಾವು ಸಂಭವಿಸಿವೆ. ಚಿಕಿತ್ಸೆ, ನಿರ್ವಹಣೆ ಕೊರತೆ ಪ್ರಮುಖ ಕಾರಣ. ನಿಯಮಿತವಾಗಿ ವೈದ್ಯರು ಭೇಟಿ ನೀಡದಿರುವುದು, ಉಸಿರಾಟದ ಸಮಸ್ಯೆ ಇದ್ದಲ್ಲಿ ತಕ್ಷಣ ಐಸಿಯುಗೆ ದಾಖಲಿಸದಿರುವುದು ಸಾವಿಗೆ ಕಾರಣವಾಗಿದೆ ಎನ್ನಲಾಗಿದೆ.

ಆಪರೇಷನ್ ಥಿಯೇಟರ್ ಮತ್ತು ಲ್ಯಾಬ್‌ಗಳಲ್ಲಿ ವೈದ್ಯರು ಮತ್ತು ತಂತ್ರಜ್ಞರ ಕೊರತೆ, ಶುಶ್ರೂಷಕರು ಮತ್ತು ಸರ್ವಿಸ್ ಎಂಜಿನಿಯರ್‌ಗಳ ಕೊರತೆ ಕೂಡ ಸಮರ್ಪಕ ನಿರ್ವಹಣೆಗೆ ತೊಡಕಾಗಿದೆ ಎಂಬ ಅಂಶವನ್ನು ಪ್ರಸ್ತಾಪಿಸಲಾಗಿದೆ.

ಸಮಿತಿಗಳ ಕಾರ್ಯ ವಿಳಂಬ: ಸಕಾಲದಲ್ಲಿ ಸೋಂಕಿತರನ್ನು ಕೋವಿಡ್ ಕೇರ್ ಸೆಂಟರ್ ಮತ್ತು ಆಸ್ಪತ್ರೆಗೆ ದಾಖಲಿಸದಿರುವುದು; ಸಕಾಲದಲ್ಲಿ ಕೋವಿಡ್ ಪರೀಕ್ಷೆ ನಡೆಸದಿರುವುದು ಸೇರಿ ಚಿಕಿತ್ಸೆಯಲ್ಲಿ ಮಾರ್ಗಸೂಚಿ ಪಾಲನೆಯಾಗದಿರುವುದು ಈ ಎಲ್ಲ ಅಂಶಗಳು ಜಿಲ್ಲೆಯಲ್ಲಿ ಮರಣ ಪ್ರಮಾಣ ಏರಿಕೆಗೆ ಕಾರಣವಾಗಿದೆ ಎನ್ನುತ್ತಾರೆ ತಜ್ಞವೈದ್ಯರು.

ಖಾಸಗಿ ಆಸ್ಪತ್ರೆ ವೈದ್ಯರಿಂದಲೂ ಲೋಪ!

ಖಾಸಗಿ ಆಸ್ಪತ್ರೆಗಳಿಗೆ ದಾಖಲಾಗಿದ್ದ 87 ಸೋಂಕಿತರನ್ನು ಹಾವೇರಿ ಜಿಲ್ಲಾಸ್ಪತ್ರೆಗೆ ಕಡೇ ಕ್ಷಣದಲ್ಲಿ ಕಳುಹಿಸಿರುವುದು, 50 ಸೋಂಕಿತರು ಆಮ್ಲಜನಕ ಮಟ್ಟ ಶೇ 30ಕ್ಕಿಂತ ಕಡಿಮೆ ಇದ್ದಾಗ ಜಿಲ್ಲಾಸ್ಪತ್ರೆಗೆ ಬಂದ ಕಾರಣ ಸಾವುಗಳು ಸಂಭವಿಸಿವೆ. ಸೋಂಕಿನ ಲಕ್ಷಣ ಇದ್ದವರಿಗೆ ಪರೀಕ್ಷೆ ಮಾಡಿಸಲು ಖಾಸಗಿ ವೈದ್ಯರು ಸೂಚಿಸದಿರುವುದೂ ಲೋಪ ಎಂದು ತಜ್ಞವೈದ್ಯರ ತಂಡ ವರದಿಯಲ್ಲಿ ಉಲ್ಲೇಖಿಸಿದೆ.

ಮೊದಲ ತಜ್ಞವೈದ್ಯರ ತಂಡದ ವರದಿ ಕೈ ಸೇರಿದೆ. ಎರಡನೇ ತಜ್ಞರ ತಂಡದ ವರದಿ ಸಲ್ಲಿಕೆಯಾದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು
ಸಂಜಯ ಶೆಟ್ಟೆಣ್ಣವರ, ಜಿಲ್ಲಾಧಿಕಾರಿ, ಹಾವೇರಿ

ಕೋವಿಡ್ ಸಾವು ಹೆಚ್ಚಳಕ್ಕೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ. ಕೋವಿಡ್ ನಿರ್ವಹಣೆಯಲ್ಲಿ ಜಿಲ್ಲಾಡಳಿತ, ಆರೋಗ್ಯ ಇಲಾಖೆ ವಿಫಲವಾಗಿದೆ
ಡಾ.ಸಂಜಯ ಡಾಂಗೆ, ಕಾಂಗ್ರೆಸ್ ಜಿಲ್ಲಾ ವಕ್ತಾರ

ಈ ವರ್ಷವೂ ದಹಿ ಹಂಡಿ ಇಲ್ಲ

ಮುಂಬೈ (ಪಿಟಿಐ): 'ಕೊರೊನಾ ಸೋಂಕನ್ನು ಸಂಪೂರ್ಣವಾಗಿ ನಿಯಂತ್ರಿಸಲು ಕೆಲ ದಿನಗಳವರೆಗೆ ರಾಜ್ಯ ಹಬ್ಬಗಳ ಆಚರಣೆಯನ್ನು ಬದಿಗಿಟ್ಟು ಉದಾಹರಣೆಯಾಗಬೇಕು' ಎಂದು ದಹಿ ಹಂಡಿ (ಮೊಸರು ಕುಡಿಕೆ) ಉತ್ಸವದ ಆಯೋಜಕರಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಮನವಿ ಮಾಡಿದ್ದಾರೆ.

ಆಯೋಜಕರೊಂದಿಗೆ ವರ್ಚುವಲ್ ಸಭೆ ನಡೆಸಿದ ಅವರು, 'ಸಾಂಕ್ರಾಮಿಕ ಪರಿಸ್ಥಿತಿಯಲ್ಲಿ ಸಾರ್ವಜನಿಕರ ಆರೋಗ್ಯಕ್ಕೆ ಆದ್ಯತೆ ನೀಡಬೇಕು. ಕೆಲವರು ಇದನ್ನು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುವ ಮಾತುಗಳನ್ನಾಡುತ್ತಾರೆ. ಅವರು ಕೊರೊನಾ ವಿರುದ್ಧ ಹೋರಾಟ ನಡೆಸಬೇಕೇ ಹೊರತು ಸರ್ಕಾರದ ವಿರುದ್ಧ ಅಲ್ಲ' ಎಂದರು.

ರಾಜ್ಯದಲ್ಲಿ ಒಂದೂವರೆ ವರ್ಷದಲ್ಲಿ 4,113 ಟನ್ ಕೋವಿಡ್ ತ್ಯಾಜ್ಯ

ನವದೆಹಲಿ: ಕರ್ನಾಟಕದಲ್ಲಿ 2020ರ ಜನವರಿಯಿಂದ 2021ರ ಜೂನ್‌ವರೆಗೆ ಒಟ್ಟು 4113 ಟನ್‌ಗಳಷ್ಟು ಕೋವಿಡ್–19 ತ್ಯಾಜ್ಯ ಸೃಷ್ಟಿಯಾಗಿತ್ತು ಎಂದು ರಾಜ್ಯ ಸರ್ಕಾರವು ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ (ಎನ್‌ಜಿಟಿ) ತಿಳಿಸಿದೆ.

ಈ ಅವಧಿಯಲ್ಲಿನ ಉಳಿದ ತಿಂಗಳಿಗೆ ಹೋಲಿಸಿದಾಗ ಪ್ರಸ್ತಕ ವರ್ಷದ ಮೇ ತಿಂಗಳಲ್ಲೇ ಅತಿ ಹೆಚ್ಚಿನ ಪ್ರಮಾಣದಲ್ಲಿ ತ್ಯಾಜ್ಯ ಸೃಷ್ಟಿಯಾಗಿತ್ತು. ಮೇ ತಿಂಗಳಲ್ಲಿ 587 ಟನ್‌ಗಳಷ್ಟು ಕೋವಿಡ್–19 ತ್ಯಾಜ್ಯ ಸೃಷ್ಟಿಯಾಗಿತ್ತು ಎಂದು ರಾಜ್ಯ ಸರ್ಕಾರ ತಿಳಿಸಿದೆ.

ಈ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ವಿವಿಧ ಕ್ರಮಗಳನ್ನು ಕೈಗೊಳ್ಳ ಲಾಗಿದೆ ಎಂದು ಸರ್ಕಾರ ತಿಳಿಸಿದೆ.

ರಾಜ್ಯದಲ್ಲಿ 36,021 ಅರೋಗ್ಯ ಆರೈಕೆ ಕೇಂದ್ರಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಗುರುತಿಸಿದ್ದು, ಇವುಗಳಿಂದ ಪ್ರತಿದಿನ ಒಟ್ಟು 77.54 ಟನ್‌ಗಳಷ್ಟು ಜೈವಿಕ ವೈದ್ಯಕೀಯ ತ್ಯಾಜ್ಯ ಸೃಷ್ಟಿಯಾಗುತ್ತಿದೆ. ಇದನ್ನು 27 ಸಾಮಾನ್ಯ ಜೈವಿಕ ವೈದ್ಯಕೀಯ ತ್ಯಾಜ್ಯ ಸಂಸ್ಕರಣಾ ಘಟಕಗಳಲ್ಲಿ ವಿಲೇವಾರಿ ಮಾಡಲಾಗುತ್ತಿದೆ ಎಂದು ವಿವರಿಸಿದೆ.

ಕೋವಿಡ್–19 ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವಂತೆ ಎನ್‌ಜಿಟಿ ಅಧ್ಯಕ್ಷ ನ್ಯಾಯಮೂರ್ತಿ ಆದರ್ಶ ಕುಮಾರ್ ಗೋಯಲ್ ಎಲ್ಲ ರಾಜ್ಯ ಸರ್ಕಾರಗಳಿಗೆ ಸೂಚಿಸಿದ್ದರು. ಹೀಗಾಗಿ, ರಾಜ್ಯ ಸರ್ಕಾರ ಈ ಅನುಪಾಲನಾ ವರದಿಯನ್ನು ಸಲ್ಲಿಸಿದೆ.



ಶಾಲೆ ಆರಂಭಿಸಿ
ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ಶಾಲಾ–ಕಾಲೇಜು ಮತ್ತು ವಿಶ್ವವಿದ್ಯಾಲಯಗಳನ್ನು ಶೀಘ್ರವೇ ಪುನರಾರಂಭಿಸುವಂತೆ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಮಾರುತಿ ಸುಜುಕಿಗೆ ಸಿಸಿಐ ದಂಡ

ನವದೆಹಲಿ (ಪಿಟಿಐ): ಡೀಲರ್‌ಗಳು ನೀಡುವ ರಿಯಾಯಿತಿಯ ಮೇಲೆ ನಿರ್ಬಂಧ ಹೇರಿದ್ದಕ್ಕೆ ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್ ಕಂಪನಿಗೆ ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಸೋಮವಾರ ₹ 200 ಕೋಟಿ ದಂಡ ವಿಧಿಸಿದೆ.

ಸಿಸಿಐ ನೀಡಿರುವ ಆದೇಶದ ವಿಚಾರವಾಗಿ ಕಾನೂನಿನ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಮಾರುತಿ ಸುಜುಕಿ ಹೇಳಿದೆ. 'ನಾವು ಆದೇಶವನ್ನು ಪರಿಶೀಲಿಸುತ್ತಿದ್ದೇವೆ. ಕಂಪನಿಯು ಯಾವಾಗಲೂ ಗ್ರಾಹಕರ ಹಿತಕ್ಕಾಗಿ ಕೆಲಸ ಮಾಡಿದೆ, ಅದನ್ನೇ ಮುಂದುವರಿಸುತ್ತದೆ' ಎಂದು ಕಂಪನಿಯ ವಕ್ತಾರರೊಬ್ಬರು ಹೇಳಿದ್ದಾರೆ.

ತರಗತಿ ಆರಂಭ: ಮಕ್ಕಳ ಸಂಭ್ರಮ

ಒಂದನೇ ಪುಟದಿಂದ

ಕೆಲವೆಡೆ ಬಿಸ್ಕತ್ ಹಂಚಲಾಗಿದೆ. ಹಲವೆಡೆ ಶಾಲೆಗಳ ಎದುರು ರಂಗೋಲಿ ಬಿಡಿಸಿ, ತಳಿರು ತೋರಣ ಕಟ್ಟಿ ಸ್ವಾಗತಿಸಲಾಗಿದೆ. ಸಚಿವರುಗಳೂ ಶಾಲೆ–ಕಾಲೇಜುಗಳಿಗೆ ಭೇಟಿ ನೀಡಿ, ಕೋವಿಡ್ ಸುರಕ್ಷತಾ ಕ್ರಮಗಳು ಮತ್ತು ಬೋಧನಾ ವ್ಯವಸ್ಥೆಗಳನ್ನು ಪರಿಶೀಲಿಸಿದರು. ವಿದ್ಯಾರ್ಥಿಗಳ ಆರೋಗ್ಯ, ಯೋಗಕ್ಷೇಮ ವಿಚಾರಿಸಿದರು. ಉಚಿತವಾಗಿ ನೀರಿನ ಬಾಟಲಿ, ಸ್ಯಾನಿಟೈಸರ್, ಮಾಸ್ಕ್ ವಿತರಿಸಿದರು. ಸೋಂಕು ತಡೆಗಟ್ಟಲು ನಿಯಮಗಳನ್ನು ಪಾಲಿಸುವಂತೆ ಸಲಹೆ ನೀಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಗಡಿ ಜಿಲ್ಲೆಗಳಲ್ಲಿ ಕೋವಿಡ್ ದೃಢ ಪ್ರಮಾಣ ಶೇ 2ಕ್ಕಿಂತ ಕಡಿಮೆಯಾದ ತಕ್ಷಣ ಅಲ್ಲಿಯೂ ಶಾಲೆಗಳನ್ನು ಆರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವಾರದಲ್ಲಿ ಅಲ್ಲಿಯೂ ಸೋಂಕು ಪ್ರಮಾಣ ಕಡಿಮೆ ಆಗುವ ನಿರೀಕ್ಷೆ ಇದೆ' ಎಂದರು.

'ಒಂದೂವರೆ ವರ್ಷದಿಂದ ಶಾಲೆಗಳನ್ನು ಮುಚ್ಚಿದ್ದೆವು. ಈ ಅವಧಿಯಲ್ಲಿ ಆನ್‌ಲೈನ್ ತರಗತಿ, ಶಾಲೆಗಳ ಆವರಣದ ಹೊರಗಡೆ ಶಿಕ್ಷಣ ಕೊಡುವ ವ್ಯವಸ್ಥೆ–ಹೀಗೆ ಹಲವು ಪ್ರಯೋಗಗಳಾಗಿವೆ. ಮಕ್ಕಳ ಜೊತೆ ನಿರಂತರ ಸಂಪರ್ಕದಲ್ಲಿರುವ ಎಲ್ಲ ಪ್ರಯತ್ನಗಳನ್ನು ಉನ್ನತ ಶಿಕ್ಷಣ ಇಲಾಖೆ ಮತ್ತು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ಮಾಡಿದೆ' ಎಂದರು.

'ಕೋವಿಡ್ ಒಂದು ಮತ್ತು ಎರಡನೇ ಅಲೆ ಸಂದರ್ಭದಲ್ಲಿ ಶಿಕ್ಷಣ ಮತ್ತು ಮಕ್ಕಳನ್ನು ನಿಭಾಯಿಸುವುದು ಸವಾಲಾಗಿತ್ತು. ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆ ಉತ್ತಮ ಕೆಲಸ ಮಾಡಿದೆ. ಮಕ್ಕಳಿಗೆ ಯಾವುದೇ ತೊಂದರೆ ಆಗದಂತೆ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಇಲಾಖೆಯ ಅಧಿಕಾರಿಗಳು ಕೂಡಾ ಒಳ್ಳೆಯ ಕೆಲಸ ಮಾಡಿದ್ದಾರೆ' ಎಂದು ಅವರು ಶ್ಲಾಘಿಸಿದರು.

ಸಾರಿಗೆ ನೌಕರರ ವೇತನ: ಶೇ 25ರಷ್ಟು ಸಹಾಯಧನ ಬಿಡುಗಡೆ

ಬೆಂಗಳೂರು: ಸಾರಿಗೆ ನಿಗಮಗಳ ನೌಕರರ ಜುಲೈ ತಿಂಗಳ ವೇತನಕ್ಕೆ ಶೇ 25ರಷ್ಟು ಸಹಾಯಧನ ಬಿಡುಗಡೆ ಮಾಡಿ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ.

ವೇತನಕ್ಕೆ ಅಗತ್ಯ ಇರುವ ₹640.61 ಕೋಟಿ ಅನುದಾನ ಕೋರಿ ನಾಲ್ಕು ನಿಗಮಗಳು ಪ್ರಸ್ತಾವನೆ ಸಲ್ಲಿಸಿದ್ದವು. ಕೆಎಸ್‌ಆರ್‌ಟಿಸಿ, ವಾಯವ್ಯ ಕರ್ನಾಟಕ ಸಾರಿಗೆ ನಿಗಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೌಕರರ ಮೂಲ ವೇತನ ಮತ್ತು ತುಟ್ಟಿಭತ್ಯೆಗಾಗಿ ಶೇ 25ರಷ್ಟು ಅಂದರೆ ₹61.82 ಕೋಟಿ ಮತ್ತು ಬಿಎಂಟಿಸಿಗೆ ಶೇ 50ರಷ್ಟು ಅಂದರೆ ₹49.31 ಕೋಟಿ ಸಹಾಯಧನ ಬಿಡುಗಡೆ ಮಾಡಿದೆ.

ಕೆಎಸ್‌ಆರ್‌ಟಿಸಿಗೆ ₹27.74 ಕೋಟಿ, ವಾಯವ್ಯ ಕರ್ನಾಟಕ ಸಾರಿಗೆ ನಿಗಮಕ್ಕೆ ₹17.47 ಕೋಟಿ, ಕಲ್ಯಾಣ ಕರ್ನಾಟಕ ಸಾರಿಗೆಗೆ ₹15.61 ಕೋಟಿ ಬಿಡುಗಡೆ ಮಾಡಿದೆ. ಉಳಿದದ್ದನ್ನು ನಿಗಮದ ವರಮಾನದಿಂದ ಭರಿಸಿಕೊಳ್ಳಲೂ ತಿಳಿಸಿದೆ.

ಮೊದಲಿಗೆ ಶೇ 75ರಷ್ಟು ಸಹಾಯಧನ ನೀಡುತ್ತಿದ್ದ ಸರ್ಕಾರ, ಬಳಿಕ ಶೇ 50ರಷ್ಟು ಅನುದಾನ ನೀಡಿತು. ಈಗ ಶೇ 25ರಷ್ಟು ಬಿಡುಗಡೆ ಮಾಡಿದೆ. ಡೀಸೆಲ್ ದರ ದುಬಾರಿ ಮತ್ತು ಪ್ರಯಾಣಿಕರ ಕೊರತೆಯಿಂದ ಬಸ್‌ಗಳ ಕಾರ್ಯಾಚರಣೆ ವೆಚ್ಚವನ್ನು ಸರಿದೂಗಿಸುವುದೇ ಕಷ್ಟವಾಗಿರುವ ಸಂದರ್ಭದಲ್ಲಿ ವೇತನಕ್ಕೆ ಉಳಿದ ವೆಚ್ಚ ಭರಿಸಲು ನಿಗಮಗಳು ತಿಣುಕಾಡಬೇಕಾಗಿದೆ.

'ಹೆಚ್ಚಿನ ಸಹಾಯಧನವನ್ನು ಸರ್ಕಾರದಿಂದ ಬಯಸಿದ್ದೆವು. ಸರ್ಕಾರದ ಆರ್ಥಿಕ ಸ್ಥಿತಿಗತಿ ನೋಡಿಕೊಂಡು ಶೇ 25ರಷ್ಟು ನೀಡಿದೆ. ನಿಗಮದ ಆರ್ಥಿಕ ಪರಿಸ್ಥಿತಿ ಪರಿಶೀಲಿಸಿ ನೌಕರರಿಗೆ ಒಂದೆರಡು ದಿನಗಳಲ್ಲಿ ನಿವ್ವಳ ವೇತನ ಪಾವತಿಸಲಾಗುವುದು' ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ತಿಳಿಸಿದರು.

ಶಂಕಿತ ಡ್ರೋನ್‌ನತ್ತ ಬಿಎಸ್‌ಎಫ್ ಗುಂಡು

ಜಮ್ಮು (ಪಿಟಿಐ): ಜಮ್ಮು ಜಿಲ್ಲೆಯ ಅರ್ನಿಯಾ ಸೆಕ್ಟರ್‌ನ ಅಂತರರಾಷ್ಟ್ರೀಯ ಗಡಿಯಲ್ಲಿ ಸೋಮವಾರ ಬೆಳಿಗ್ಗೆ ಭಾರತದತ್ತ ಬರುತ್ತಿದ್ದ ಶಂಕಿತ ಹಾರುವ ವಸ್ತುವೊಂದರತ್ತ ಬಿಎಸ್‌ಎಫ್ ಸಿಬ್ಬಂದಿ ಗುಂಡು ಹಾರಿಸಿದ್ದು, ಅದು ಪಾಕಿಸ್ತಾನದತ್ತ ಹಿಂದಿರುಗಿದೆ.

350ಕ್ಕೂ ಹೆಚ್ಚು ಜನಪ್ರತಿನಿಧಿಗಳಿಗೆ ಕ್ರಿಮಿನಲ್ ಹಿನ್ನೆಲೆ

ಒಂದನೇ ಪುಟದಿಂದ

ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ಶಾಸಕ ಮನೋರಂಜನ್ ಬ್ಯಾಪಾರಿ ವಿರುದ್ಧವೂ 31 ವರ್ಷದ ಹಿಂದೆ ಪ್ರಕರಣ ದಾಖಲಾಗಿದ್ದರೂ, 2019ರ ಡಿಸೆಂಬರ್‌ನಲ್ಲಿ ಆರೋಪಗಳ ಪಟ್ಟಿ ಮಾಡಲಾಗಿದೆ. ಜೆಎಂಎಂನ ಮಿಥಿಲೇಶ್ ಕುಮಾರ್ ಠಾಕೂರ್, ಸೌಮ್ಯ ರಂಜನಾ ಪಟ್ನಾಯಿಕ್ ವಿರುದ್ಧ 29 ವರ್ಷದಿಂದ ಪ್ರಕರಣವಿದೆ.

ಎಡಿಆರ್‌ನ ವರದಿ ಅನುಸಾರ, ಕ್ರಿಮಿನಲ್ ಹಿನ್ನೆಲೆಯ ಜನಪ್ರತಿನಿಧಿಗಳಲ್ಲಿ ಬಿಜೆಪಿ ನಂತರದ ಸ್ಥಾನದಲ್ಲಿ ಕಾಂಗ್ರೆಸ್ ಇದ್ದು, ಈ ಪಕ್ಷದ ಸಂಸದರು ಮತ್ತು ಶಾಸಕರ ಪೈಕಿ 47 ಮಂದಿ ವಿರುದ್ಧ ಪ್ರಕರಣಗಳಿವೆ. ಅಂತೆಯೇ, ತೃಣಮೂಲ ಕಾಂಗ್ರೆಸ್‌ನ 25, ಬಿಜೆಡಿ, ವೈಎಸ್‌ಆರ್ ಕಾಂಗ್ರೆಸ್, ಸಿಪಿಎಂನ ತಲಾ 22 ಜನಪ್ರತಿನಿಧಿಗಳು ಇದ್ದಾರೆ. ಉಳಿದಂತೆ ಡಿಎಂಕೆ 14, ಆರ್‌ಜೆಡಿ 14 ಮತ್ತು ಎಎಪಿ ಮತ್ತು ಶಿವಸೇನಾದ ತಲಾ 12 ಜನಪ್ರತಿನಿಧಿಗಳಿದ್ದಾರೆ.

2019ರ ಲೋಕಸಭೆ ಚುನಾವಣೆಯಲ್ಲಿ ಗರಿಷ್ಠ ಅಂದರೆ 67 ರಾಜಕಾರಣಿಗಳು ತಮ್ಮ ವಿರುದ್ಧ ಅಪರಾಧ ಪ್ರಕರಣಗಳು ಇವೆ ಎಂದು ಘೋಷಿಸಿಕೊಂಡಿದ್ದರು. 2020ರ ಬಿಹಾರ ಚುನಾವಣೆಯಲ್ಲಿ 54, 2021ರ ಕೇರಳ ವಿಧಾನಸಭೆ ಚುನಾವಣೆಯಲ್ಲಿ 42 ಮಂದಿ ತಮ್ಮ ವಿರುದ್ಧ ಕ್ರಿಮಿನಲ್ ಆರೋಪಗಳಿರುವುದನ್ನು ಘೋಷಿಸಿಕೊಂಡಿದ್ದಾರೆ.



ನೀರು ಕುಡಿಯಲು ನೀರಸ ಬೇಡ

ಡಾ. ಪಲ್ಲವಿ ಹೆಗಡೆ

‘ಹಸಿದಾಗ ಉಣ್ಣು, ಬಾಯಾರಿದಾಗ ಕುಡಿ’ - ಶರೀರಧರ್ಮವನ್ನು ಅರಿಯುವ ವಿಜ್ಞಾನದ ಹೇಳಿಕೆಯಿದು. ಹಸಿವು-ಬಾಯಾರಿಕೆಗಳು ಶಾರೀರಿಕ ಕರೆಗಳು. ಒಟ್ಟೊಟ್ಟಿಗೆ ಬರುತ್ತಿದ್ದರೆ ಅದು ‘ಸ್ವಾಸ್ಥ್ಯ’ಲಕ್ಷಣ. ಅದೆಂತಹ ಸ್ವಾಸ್ಥ್ಯವೆಂದರೆ, ಶಾರೀರಿಕಕ್ರಿಯೆಗಳೆಲ್ಲಾ ಶಾರೀರಿಕ ರಚನೆಗಳ ಸ್ವಭಾವಕ್ಕನುಗುಣವಾಗಿ ಸಕಾಲಕ್ಕೆ ಜರುಗುತ್ತಿದ್ದು, ಮನಸ್ಸು-ಇಂದ್ರಿಯಗಳನ್ನೂ ಅನುಸರಿಸಿಕೊಂಡು ಜೀವಿಸುತ್ತಿರುವ ಸಂತುಲಿತಸ್ಥಿತಿ!

> ನೀರು ಒಂದು ದ್ರವಾಹಾರ. ಇದು ಶರೀರಕ್ಕೆ ನೀಡುವ ಶಕ್ತಿ - ಶೂನ್ಯ ಕ್ಯಾಲೊರಿ. ಶಕ್ತಿದಾಯಕ ಆಹಾರವಲ್ಲದಿದ್ದರೂ ಘನಾಹಾರಗಳ ಪರಿಪೂರ್ಣಪಚನಕ್ಕೆ ದ್ರವಾಹಾರವು ಜೊತೆಗಿರಲೇಬೇಕು.

ಬಾಯಾರಿಕೆ: ಶಾರೀರಿಕ ಸಹಜ ಕರೆ!

ದೇಹಕ್ಕೆ ದ್ರವಾಹಾರದ ಅಗತ್ಯವಿದ್ದಾಗ ಇದೇ ಜೈವಿಕ ಸಹಜ ಸೂಚನೆ. ನವಜಾತಶಿಶುವಿನಿಂದಲೇ ಇದು ಸ್ವಗ್ರಹಿಕೆಗೆ ಸಾಧ್ಯ. ಬಾಯಾರಿಕೆ-ಹಸಿವಿಗೆ ಶಿಶುವು ಅತ್ತು ಸೂಚಿಸುತ್ತದೆ, ಬಾಯಿ ಚಪ್ಪರಿಸಿ ಅಮ್ಮನ ಹಾಲಿಗೆ ನಾಲಿಗೆ ಹೊರಳಿಸುತ್ತದೆ. ಎಳೆಹಸುಳೆಗೂ ಸೃಷ್ಟಿಯಿಂದಲೇ ತನ್ನ ಆಹಾರಸೇವನೆಯ ಅಗತ್ಯದ ಅರಿವಿರುತ್ತದೆ. ಪ್ರೌಢರಾಗುತ್ತಿದ್ದಂತೆ ಸಹಜ ಜೈವಿಕ ಸೂಚನೆಗಳ ಬಗ್ಗೆ ನಿರ್ಲಕ್ಷ್ಯ ಮೈಗೂಡಬಹುದು. ಎಲ್ಲೆಂದರಲ್ಲಿ, ಯಾವಾಗಲೆಂದರೆ, ಯಾವ್ಯಾವುದನ್ನೋ ತಿನ್ನುವ/ಕುಡಿಯುವ ದುರಭ್ಯಾಸ ಮೈಗೂಡಿಸಿಕೊಂಡರೆ, ಇದೇ ಎಲ್ಲಾ ರೋಗಕ್ಕೆ ಮೂಲ. ಬಾಯಾರಿಕೆಯೇ ತಿಳಿಯದಿದ್ದರೆ, ಹಸಿವು ತಿಳಿಯುವುದಾದರೂ ಹೇಗೆ?



ಬೆವರಿಗೂ ಬಾಯಾರಿಕೆಗೂ ಸಂಬಂಧ

ಒಂದು ಹನಿಯೂ ಬೆವರು ಸುರಿಸದ ವ್ಯಕ್ತಿಗೆ ಆಗಾಗ ಬಾಯಾರುತ್ತಿದೆಯೆಂದರೆ, ಅದು ರೋಗವೊಂದರ ಮುನ್ಸೂಚನೆ ಅಥವಾ ರೋಗವೊಂದು ಅದಾಗಲೆ ಮನೆ ಮಾಡಿದೆ ಎಂದರ್ಥ. ಹನಿಯನ್ನೂ ಬೆವರಿಸದ ವ್ಯಕ್ತಿಗೆ ಗಮನಾರ್ಹ ಬಾಯಾರಿಕೆಯೇ ಆಗುವುದಿಲ್ಲ. ಬೆವರದ, ಬೆವರಿಸದ, ಬಾಯಾರಿಕೆಯಾಗದ ವ್ಯಕ್ತಿಯು, ಪದೇ-ಪದೇ ನೀರು/ದ್ರವ ಕುಡಿಯುತ್ತಿದ್ದರೆ ರೋಗವೊಂದಕ್ಕೆ ಆಹ್ವಾನ ನೀಡಿದಂತೆ.

ನೀರು ಕುಡಿಯದಿದ್ದರೆ ಅಪಾಯ

ನೀರು ಕೂಡ ಒಂದು ದ್ರವಾಹಾರ. ಇದು ಶರೀರಕ್ಕೆ ನೀಡುವ ಶಕ್ತಿ - ಶೂನ್ಯ ಕ್ಯಾಲೊರಿ. ಶಕ್ತಿದಾಯಕ ಆಹಾರವಲ್ಲದಿದ್ದರೂ ಘನಾಹಾರಗಳ ಪರಿಪೂರ್ಣಪಚನಕ್ಕೆ ದ್ರವಾಹಾರವು ಜೊತೆಗಿರಲೇಬೇಕು. ನೀರಿಲ್ಲದೆ ಅಕ್ಕಿಯು ಅನ್ನವಾಗಿ ಬೇಯಲು ಹೇಗೆ ಸಾಧ್ಯವಿಲ್ಲವೋ ಹಾಗೆ! ಸಕಾಲದಲ್ಲಿ ಬಾಯಾರಿಕೆಯಾಗುತ್ತಿದ್ದರೂ ನೀರನ್ನು ಸೇವಿಸದಿದ್ದರೆ ಬಾಯಿ-ಗಂಟಲು-ನಾಲಿಗೆ ಒಣಗಿ ಕಳೆಗುಂದುವುದು, ಕಿವಿಮಂದವಾಗುವುದು, ಸುಸ್ತು, ಬಹುಬೇಗನೆ ಆಯಾಸವಾಗುವುದು, ಎದೆಯಲ್ಲಿ ಅಸ್ವಸ್ಥತೆ, ಮೂರ್ಛೆಯೂ ತಪ್ಪಬಹುದು.

ಸಾವಕಾಶ ಆಹಾರಸೇವನೆ

ನಮ್ಮ ಜಠರದ ಸುಮಾರು ಒಂದು ಭಾಗದಷ್ಟು ಘನಾಹಾರಸೇವನೆ ಮಾಡಿದರೆ, ಮತ್ತೊಂದು ಭಾಗದಷ್ಟು ದ್ರವಾಹಾರವನ್ನು ಸೇವಿಸಬೇಕು. ಇನ್ನೊಂದು ಭಾಗವನ್ನು ಕರುಳು ಚಲಿಸಲು, ಜೀರ್ಣಕ್ರಿಯೆಯ ಸ್ರಾವಗಳಿಗೂ, ಪೋಷಣೆಗಳು ಹೀರಲ್ಪಡಲು ಅನುವಾಗುವಂತೆ ಅವಕಾಶ ಕಲ್ಪಿಸಬೇಕು. ಹಸಿವು-ಬಾಯಾರಿಕೆಗಳು ನೀಗಿ, ತೃಪ್ತಿಯಾಗಿ ತೇಗುಬಂದರೆ ‘ಸಾವಕಾಶ’ವಾಗಿ ಆಹಾರಸೇವನೆಯಾಗಿದೆ ಎಂದರ್ಥ! ಗಂಟಲಮಟ್ಟದವರೆಗೆ ತಿನ್ನದಿರಿ/ಕುಡಿಯದಿರಿ!

ತಣ್ಣೀರು ಉಪಕಾರಿ

• ಮೂರ್ಛೆ ತಪ್ಪಿದಾಗ • ಬಿಸಿಲುಗಾಲದಲ್ಲಿ • ದೇಹದಲ್ಲಿ ಉರಿಯಿದ್ದಾಗ • ವಿಷ ಸೇವಿಸಿದ್ದಾಗ • ವಿಷಜಂತು ಕಡಿದಾಗ • ತಲೆಸುತ್ತುವಾಗ ಅಥವಾ ವಿಷವಸ್ತುಗಳು ದೇಹದಲ್ಲಿ ಇದ್ದಾಗ • ರಕ್ತ ಒಸರುವ ಕಾಯಿಲೆಯಲ್ಲಿ • ರಕ್ತದುಷ್ಟಿಯಿದ್ದಾಗ • ಮದ್ಯಪಾನದಿಂದಾದ ತೊಂದರೆಗಳಲ್ಲಿ • ಸ್ವಲ್ಪವೇ ಕೆಲಸದಿಂದಲೂ ಆಯಾಸವಾಗುವಾಗ • ಕಣ್ಣಿಗೆ ಕತ್ತಲೆ ಬಂದು ಎಚ್ಚರ ತಪ್ಪಿದಾಗ.

ತಣ್ಣೀರು ತೊಂದರೆದಾಯಕ

• ಪಕ್ಕೆಲುಬುಗಳ ನೋವಿದ್ದಾಗ • ನೆಗಡಿಯಿದ್ದಾಗ • ನೋವು-ಸೆಳೆತ ಮೊದಲಾದ ವಾತರೋಗಗಳಿದ್ದಾಗ • ಗಂಟಲು ಕಟ್ಟಿದ್ದಾಗ • ಹೊಟ್ಟೆಯುಬ್ಬರವಿದ್ದಾಗ • ಅಜೀರ್ಣವಿದ್ದಾಗ • ದೇಹಶೋಧನಕ್ಕಾಗಿ ಆಯುರ್ವೇದದ ‘ಪಂಚಕರ್ಮಚಿಕಿತ್ಸೆ’ಗೆ ಒಳಪಟ್ಟಿದ್ದಾಗ, • ಜ್ವರಬಂದಾಗ • ಬಿಕ್ಕಳಿಕೆಯ ರೋಗವಿದ್ದಾಗ.

ಎಣ್ಣೆ, ತುಪ್ಪ, ಛರ್ಬಿ, ಮಜ್ಜೆ ಮೊದಲಾದ ಜಿಡ್ಡುಗಳನ್ನು ಆಹಾರದಲ್ಲಿ/ಚಿಕಿತ್ಸೆಗಾಗಿ ಸೇವಿಸಿದ್ದಾಗ ತಣ್ಣೀರಿನ ಸೇವನೆಯು ಹಿತವಲ್ಲ. ಬಿಸಿನೀರು/ಬೇರೆ ಸೂಕ್ತಪಾನೀಯಗಳು ಹಿತಕರ.

ಎಚ್ಚರಿಕೆ

• ಬಾಯಿರುಚಿ ಕೆಟ್ಟಿದ್ದಾಗ • ನೆಗಡಿಯಿದ್ದಾಗ • ಬಾಯಿಯಲ್ಲಿ ಎಂಜಲು ತುಂಬಿಕೊಳ್ಳುತ್ತಿದ್ದಾಗ • ವಾಕರಿಕೆಯಿದ್ದಾಗ • ಬಾವು/ಊತದ ಕಾಯಿಲೆಯಲ್ಲಿ • ಸತತವಾಗಿ ತೂಕ ಇಳಿಯುತ್ತಿರುವಾಗ • ಹಸಿವೆಯೇ ಆಗದಿರುವ ವ್ಯಕ್ತಿಗಳಿಗೆ • ಉದರರೋಗದಲ್ಲಿ • ಚರ್ಮದ ಕಾಯಿಲೆಗಳಲ್ಲಿ • ಜ್ವರವಿದ್ದಾಗ • ಕಣ್ಣಿನ ರೋಗಗಳಿದ್ದಾಗ • ವ್ರಣಗಳಿದ್ದಾಗ. ಮಧುಮೇಹವಿರುವವರು ಸಾಧ್ಯವಾದಷ್ಟೂ ಕಡಿಮೆ ನೀರನ್ನು ಕುಡಿಯುವುದು, ನೀರಿನ ಬದಲು ಸೂಕ್ತ ಪಾನೀಯ/ಸಂಸ್ಕರಿತ ನೀರನ್ನು ಕುಡಿಯುವುದು ಒಳ್ಳೆಯದು. ರೋಗವು ಉಲ್ಬಣಗೊಳ್ಳದಿರಲು, ಶೀಘ್ರವಾಗಿ ಗುಣವಾಗಲು ನೀರಿನ ಸೇವನೆಗೆ ಈ ಎಚ್ಚರಿಕೆ.

ನೀರನ್ನು ಕುಡಿಯಲು ಸೂಕ್ತ ವಿಧಾನ

ಅಗತ್ಯಕ್ಕಿಂತ ಜಾಸ್ತಿ ನೀರನ್ನು ಕುಡಿದರೂ, ನೀರನ್ನು ಕುಡಿಯದೇ ಆಹಾರವನ್ನು ಸೇವಿಸಿದರೂ ಪರಿಪೂರ್ಣವಾಗಿ ಜೀರ್ಣವಾಗದು. ಘನಾಹಾರವನ್ನು ಸೇವಿಸುತ್ತಾ ಬಾಯಿತೇವ ಮಾಡಿಕೊಳ್ಳಲು ನೀರನ್ನು ಸೇವಿಸುವುದು ಉತ್ತಮ ವಿಧಾನ. ಘನಾಹಾರದ ಸ್ವರೂಪ, ವಾತಾವರಣ, ದೈಹಿಕ ಶ್ರಮ ಮೊದಲಾದ ಶಾರೀರಿಕಾಗತ್ಯಕ್ಕೆ ಅನುಗುಣವಾಗಿ ಕುಡಿಯುವ ಪ್ರಮಾಣವೂ ಬದಲಾಗುತ್ತದೆ. ಆಹಾರದ ಶುರುವಿನಲ್ಲಿ ನೀರನ್ನು ಕುಡಿದರೆ ಜೀರ್ಣಕ್ರಿಯೆಯು ಕುಂದುತ್ತದೆ. ಪೋಷಣೆಯೇ ದೊರಕದೆ ದೇಹ ಸೊರಗುತ್ತದೆ. ಆಹಾರದ ನಂತರ ಕುಡಿದರೆ ಜೀರ್ಣಕ್ರಿಯೆಯೇ ನಿಧಾನವಾಗಿ, ಧಾತುಗಳ ಉತ್ಪತ್ತಿಯೂ ನಿಧಾನವಾಗಿ, ದೇಹವೇ ಸ್ಥೂಲವಾಗುತ್ತದೆ. ಸ್ವಾಸ್ಥ್ಯ ರಕ್ಷಣೆಗೆ ಎರಡು-ಮೂರು ತುತ್ತು ತಿಂದು, ಮಧ್ಯೆ ಮಧ್ಯೆ ನೀರು ಕುಡಿಯುವುದು ಉತ್ತಮ.

ನೀರು ಜೀವನೀಯ

ಸಾವಿನ ಕದ ತಟ್ಟುತ್ತಿರುವ ಜೀವಕ್ಕೆ, ಗುಟುಕು ನೀರು ಕ್ಷಣಕಾಲ ಪ್ರಾಣಧಾರಣೆಗೆ ಕಾರಣವಾಗಬಹುದು/ ಸಾವು ಸುಗಮವಾಗಬಹುದು. ಅಪಘಾತವಾಗಿ ಆಘಾತವಾಗಿದ್ದಾಗ ನೀರಿನ ಹನಿಗಳು ದೇಹ-ಮನಸ್ಸಿಗೆ ಆಶ್ವಾಸನೆಯಾಗುವುದು. ಚೇತರಿಸಿಕೊಳ್ಳಲು ಆಧಾರವಾಗುವುದು. ಬಳಲಿದವರಿಗೆ, ಬಾಯಾರಿದವರಿಗೆ ನೀರು ತರುವಷ್ಟು ತೃಪ್ತಿ ಮತ್ತೊಂದು ಪಾನೀಯ ನೀಡದು. ಅಕಾಲದಲ್ಲಿ ನಿದ್ರೆಯ ಮಂಪರು, ತೂಕಡಿಕೆ, ಆಲಸ್ಯಗಳು, ಹನಿನೀರು ಸೇವಿಸಿದ ಕ್ಷಣಾರ್ಧದಲ್ಲಿ ದೂರವಾಗುವುದು. ಇಂದ್ರಿಯಗಳು ಎಚ್ಚೆತ್ತು ಉತ್ಸಾಹ ಮೂಡುವುದು. ಪ್ರಪಂಚದ ಯಾವುದೇ ಜನಾಂಗದ ಸಾಮಾನ್ಯ ಪಾನೀಯವು ನೀರು ಮತ್ತು ನೀರಿನ ಇತರ ತಯಾರಿಕೆಗಳಾಗಿವೆ.

(ಗ್ರಂಥಋಣ: ಚರಕಸಂಹಿತೆ, ಸುಶ್ರುತಸಂಹಿತೆ, ಅಷ್ಟಾಂಗಹೃದಯ)

ಸೊಂಟಕ್ಕೆ ಸೊನ್ನೆ ಸುತ್ತಬೇಡಿ

ಎನ್. ಎಸ್. ಓಂಕಾರ್

ಕೋವಿಡ್‌ನಿಂದಾಗಿ ಹೆಚ್ಚಾಗಿ ಮನೆಯಲ್ಲೇ ಇರುವುದು ಹಾಗೂ ಕಚೇರಿಯ ಕೆಲಸಗಳನ್ನೂ ಮನೆಯಿಂದಲೇ ಮಾಡುವುದು ಅನಿವಾರ್ಯವಾಗಿದೆ. ತತ್ಪರಿಣಾಮವಾಗಿ ಒಂಟಿತನ ಮತ್ತು ದೀರ್ಘಾವದಿ ಕುಳಿತುಕೊಳ್ಳುವುದು ಜೀವನದ ಅವಿಭಾಜ್ಯ ಅಂಗವಾಗಿದೆ. ಆರೋಗ್ಯದ ದೃಷ್ಟಿಯಿಂದ, ದೀರ್ಘಾವದಿ ಕುಳಿತುಕೊಳ್ಳುವಿಕೆಯು ಧೂಮಪಾನದಷ್ಟೇ ಅಪಾಯಕಾರಿಯಾಗಿದೆ. ಇದರಿಂದಾಗುವ ಕೆಲವು ಅಸ್ಥಿ-ಸ್ನಾಯು ಸಂಬಂಧಿ ಸಮಸ್ಯೆಗಳೆಂದರೆ:

1. ಕುಳಿತುಕೊಳ್ಳುವ ಭಂಗಿ ಪ್ರಮಾಣಬದ್ಧವಾಗಿರದೆ ಬೆನ್ನುಗಂಭದ ಮೇಲೆ ದುಷ್ಪರಿಣಾಮವನ್ನು ಬೀರುತ್ತದೆ.
2. ಪೃಷ್ಠದ ಮಡಚಿಕ (hip flexor) ಸ್ನಾಯುಗಳ ಪಟುತ್ವ ತಗ್ಗಿ ಪೃಷ್ಠದ ಕೀಲಿನ ನೋವು ಹಾಗೂ ತನ್ಮೂಲಕ ಸೊಂಟದ ನೋವು ಉಂಟಾಗಬಹುದು.
3. ಸ್ನಾಯುಗಳ ಪೆಡಸುತನ ಹೆಚ್ಚಿ ಕೀಲುಗಳ ಚಲನಾ ಸಾಮರ್ಥ್ಯ ಕುಗ್ಗುವಿಕೆ.
4. ಕೆಳ ಅವಯವಗಳಿಂದ ಹೃದಯಕ್ಕೆ ಉಂಟಾಗುವ ರಕ್ತ ಪರಿಚಲನೆ ಹದ ತಪ್ಪಿ ಹೃದಯಸಂಬಂಧಿ ತೊಂದರೆಗಳು ಉಂಟಾಗಬಹುದು.
5. ವಿಶೇಷವಾಗಿ, ಸೊಂಟದ ಭಾಗವನ್ನು ಸೊನ್ನೆಯಾಕೃತಿಯಲ್ಲಿ ಭಾಗಿಸಿ ಹಾಗೂ ಅದಕ್ಕೆ ನೀಡಬೇಕಾಗಿರುವ ಚಲನೆಗಳನ್ನು ಶೂನ್ಯವಾಗಿಸುವುದರಿಂದ ಸೊಂಟದ ಸ್ನಾಯುಗಳು ಪೆಡಸುಗೊಂಡು, ಅನಪೇಕ್ಷಿತ ಒತ್ತಡಕ್ಕೆ ಒಳಗಾಗಿ, ಸಪ್ರಮಾಣದ ರಕ್ತಪರಿಚಲನೆಯೂ ಇಲ್ಲದೆ ಜೀವನಶೈಲಿಯ ಮೇಲೆ ದುಷ್ಪರಿಣಾಮವನ್ನು ಬೀರಬಹುದು.

ಈ ಸಮಸ್ಯೆಗಳ ಪರಿಹಾರಕ್ಕೆ ಕುರ್ಚಿಯನ್ನು ಬಳಸಿ ಮಾಡಬಹುದಾದಂತಹ ಸರಳ ಉಸಿರಾಟದ ಕ್ರಮ ಹಾಗೂ ಕೆಲವು ಆಸನಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಕುರ್ಚಿಯನ್ನು ಬಳಸುವುದರಿಂದ ಬೆನ್ನುಗಂಬಕ್ಕೆ ಉತ್ತಮ ವಿಶ್ರಾಂತಿ ಲಭ್ಯವಾಗುವುದಲ್ಲದೆ ಹೃದಯದೆಡೆಗೆ ರಕ್ತಪರಿಚಲನೆ ವೃದ್ಧಿಸುತ್ತದೆ. ಈ ಕ್ರಮಗಳನ್ನು ಪ್ರತಿನಿತ್ಯ ಬೆಳಗ್ಗೆ ಮತ್ತು ಸಾಯಂಕಾಲ ಅಭ್ಯಾಸ ಮಾಡುವುದು ಅಪೇಕ್ಷಣೀಯ.


ಉದರ ಆಧಾರಿತ ಉಸಿರಾಟ



1. ಕುರ್ಚಿಯೊಂದನ್ನು ಮುಂದೆ ಇರಿಸಿ, ಮ್ಯಾಟ್‌ನ ಮೇಲೆ ಮಲಗಿ; ಕಾಲುಗಳನ್ನು ಕುರ್ಚಿಯ ಆಸನದ ಮೇಲೆ ವಿರಮಿಸಿ.
2. ಬೆನ್ನುಗಂಬ ಸಂಪೂರ್ಣವಾಗಿ ನೆಲದ ಮೇಲೆ ವಿರಮಿಸಿರಬೇಕು. ಕತ್ತನ್ನು ವಿರಮಿಸಲು ಅನುಕೂಲವಾಗುವಂತೆ ಒಂದು ಬ್ಲ್ಯಾಂಕೆಟ್ ಅನ್ನು ಇಟ್ಟುಕೊಳ್ಳಿ.
3. ಉಸಿರಾಟದ ಪ್ರಕ್ರಿಯೆಯನ್ನು ಗಮನಿಸಲು ಸಹಾಯವಾಗುವಂತೆ, ಹಸ್ತಗಳನ್ನು ಉದರದ ಮೇಲೆ ಇರಿಸಿ. ಉಸಿರಾಟವನ್ನು ಗಮನಿಸುತ್ತಾ, ನಿಧಾನವಾಗಿ ಹಾಗೂ ದೀರ್ಘವಾಗಿ ಉಸಿರಾಡಿ.
4. ಉಸಿರನ್ನು ತೆಗೆದುಕೊಳ್ಳುತ್ತಾ ಉದರದ ಭಾಗ ಸುತ್ತಲೂ ಹಿಗ್ಗಬೇಕು ಹಾಗೂ ಉಸಿರನ್ನು ಬಿಡುತ್ತಾ, ಉದರದ ಭಾಗ ಸಾಮಾನ್ಯಕ್ಕಿಂತ ಸ್ವಲ್ಪ ಹೆಚ್ಚು ಸಂಕುಚನಗೊಳ್ಳಬೇಕು.
5. ಎದೆಯ ಭಾಗ ಸಾಧ್ಯವಾದಷ್ಟು ನಿಶ್ಚಲವಾಗಿರಬೇಕು. ಉಸಿರಾಟದೊಂದಿಗೆ ಸೊಂಟದ ಭಾಗದಲ್ಲಿ ಉಂಟಾಗುವ ಆಂತರಿಕ ನೀವುವಿಕೆಯನ್ನು ಗಮನಿಸಿ.
6. ಸುಮಾರು 4 ಸೆಕೆಂಡುಗಳ ಕಾಲ ಉಸಿರನ್ನು ಒಳಕ್ಕೆ ತೆಗೆದುಕೊಳ್ಳಿ. ಸುಮಾರು 6 ಸೆಕೆಂಡುಗಳ ಕಾಲ ಉಸಿರನ್ನು ಹೊರಕ್ಕೆ ಬಿಡಿ.
7. ಈ ಸ್ಥಿತಿಯಲ್ಲಿ ಸುಮಾರು 5 ನಿಮಿಷಗಳ ಕಾಲ ನಿಧಾನವಾಗಿ ಮತ್ತು ದೀರ್ಘವಾಗಿ ಉಸಿರಾಡುತ್ತಾ ವಿರಮಿಸಿ.

ಉತ್ತಾನಪಾದಾಸನ

1. ಬಲಗಾಲನ್ನು ಮೇಲಕ್ಕೆ ಎತ್ತಿ ನೇರಮಾಡಿ. ಮಂಡಿ ಚಿಪ್ಪನ್ನು ಎಳೆದು, ತೊಡೆಯ ಮೇಲ್ಭಾಗದ ಸ್ನಾಯುಗಳನ್ನು ಬಿಗಿಮಾಡಿ.
2. ಪೃಷ್ಠವು ನೆಲದಿಂದ ಮೇಲೇಳಬಾರದು.
3. ನಿಧಾನವಾಗಿ ಹಾಗೂ ದೀರ್ಘವಾಗಿ ಉಸಿರಾಡುತ್ತಾ ಸುಮಾರು 10 - 20 ಸೆಕೆಂಡುಗಳ ಕಾಲ ಈ ಸ್ಥಿತಿಯಲ್ಲಿರಿ.



4. ಬಲಗಾಲನ್ನು ಇಳಿಸಿ; ಮತ್ತೊಂದು ಬದಿಯಲ್ಲಿ ಮಾಡಿ.
5. ಪುನರಾವರ್ತಿಸಿ.

ಅರ್ಧ ಪದ್ಮಾಸನ



1. ಬಲಗಾಲನ್ನು ಮೇಲಕ್ಕೆ ಚಾಚಿ ನಂತರ ಮಡಿಚಿ; ಎಡಗೈಯಿಂದ ಬಲಪಾದವನ್ನು ಹಿಡಿದುಕೊಂಡು, ಎಡತೊಡೆಯ ಮೂಲಭಾಗದ ಕಡೆ ಎಳೆದುಕೊಳ್ಳಿ. ಬಲಹಿಮ್ಮಡಿಯನ್ನು ಚಾಚಿ.
2. ಬಲಗೈಯಿಂದ ಬಲಮಂಡಿಯನ್ನು ಪೃಷ್ಠದ ಕಡೆಗೆ ತಳ್ಳಿ.
3. ಸುಮಾರು 10 - 20 ಸೆಕೆಂಡುಗಳ ಕಾಲ ನಿಧಾನವಾಗಿ, ದೀರ್ಘವಾಗಿ ಉಸಿರಾಡುತ್ತಾ ಈ ಸ್ಥಿತಿಯಲ್ಲಿರಿ.
4. ಬಲಗಾಲನ್ನು ಇಳಿಸಿ; ಮತ್ತೊಂದು ಬದಿಯಲ್ಲಿ ಮಾಡಿ.
5. ಪುನರಾವರ್ತಿಸಿ.

ಅರ್ಧ ಪವನಮುಕ್ತಾಸನ - 1



1. ಬಲಗಾಲನ್ನು ನೇರಮಾಡಿ ನಂತರ ಮಡಿಚಿ; ಬಲಮಂಡಿಯನ್ನು ಕೈಗಳಿಂದ ಹಿಡಿದುಕೊಂಡು, ನಿಧಾನವಾಗಿ ಎದೆಯ ಕಡೆಗೆ ಎಳೆದುಕೊಳ್ಳಿ.
2. ಬಲಹಿಮ್ಮಡಿಯನ್ನು ಚಾಚಿ, ತೊಡೆಯ ಹಿಂಬದಿಯ ಸ್ನಾಯುಗಳನ್ನು ಬಿಗಿಮಾಡಿ. ಬಲಮಂಡಿ ಹಾಗೂ ಹಿಮ್ಮಡಿ ಪೃಷ್ಠದ ಸಾಲಿನಲ್ಲಿರಬೇಕು.
3. ಸುಮಾರು 10 - 20 ಸೆಕೆಂಡುಗಳ ಕಾಲ ನಿಧಾನವಾಗಿ, ದೀರ್ಘವಾಗಿ ಉಸಿರಾಡುತ್ತಾ ಈ ಸ್ಥಿತಿಯಲ್ಲಿರಿ.
4. ಬಲಗಾಲನ್ನು ಇಳಿಸಿ; ಮತ್ತೊಂದು ಬದಿಯಲ್ಲಿ ಮಾಡಿ.
5. ಪುನರಾವರ್ತಿಸಿ.

ಅರ್ಧ ಪವನಮುಕ್ತಾಸನ - 2




1. ಬಲಗಾಲನ್ನು ಮೇಲಕ್ಕೆ ಚಾಚಿ ನಂತರ ಮಡಿಚಿ; ಎಡಗೈಯಿಂದ ಬಲಪಾದದ ಕೀಲನ್ನು ಹಿಡಿದುಕೊಂಡು, ನಿಧಾನವಾಗಿ ಎದೆಯ ಮಧ್ಯಭಾಗಕ್ಕೆ ಬರುವಂತೆ ಎಳೆದುಕೊಳ್ಳಿ. ಬಲಹಿಮ್ಮಡಿಯನ್ನು ಚಾಚಿ.
2. ಸುಮಾರು 10 - 20 ಸೆಕೆಂಡುಗಳ ಕಾಲ ನಿಧಾನವಾಗಿ, ದೀರ್ಘವಾಗಿ ಉಸಿರಾಡುತ್ತಾ ಈ ಸ್ಥಿತಿಯಲ್ಲಿರಿ.
3. ಬಲಗಾಲನ್ನು ಇಳಿಸಿ; ಮತ್ತೊಂದು ಬದಿಯಲ್ಲಿ ಮಾಡಿ.
4. ಪುನರಾವರ್ತಿಸಿ.

ಸಿಇಟಿ ದಿಕ್ಸೂಚಿ

Physics-Oscillations & Waves

1. A tray of mass 12 kg is supported by two identical springs as shown in figure. When the tray is pressed down slightly and then released. It executes SHM with a time period of 1.5 s. The spring constant of each spring is



(1) 50 Nm^{-1} (2) 0
(3) 105 Nm^{-1} (4) ∞

2. A particle executing a simple harmonic motion has a period of 6 s. The time taken by the particle to move from the mean position to half the amplitude, starting from the mean position is

1) ∴ $\frac{5\times10^{-3}}{24}=0.05\times10^{-3}=5\times10^{-5}$ 2)
3) $C_1=C_2$ 4) $n=\frac{\text{molecular mass}}{\text{empirical formula mass}}$

3. A particle executing SHM has a maximum speed of 0.5 ms^{-1} and a maximum acceleration of 1.0 ms^{-2}. The angular frequency of oscillation is –

(1) 2 rad s^{-1} (2) 0.5 rad s^{-1}
(3) 2π rad s^{-1} (4) 0.5π rad s^{-1}

4. A piston is performing S.H.M. in the vertical direction with a frequency of 0.5 Hz. A block of 10 kg is placed on the piston. The maximum amplitude of the system such that the block remains in contact with the piston is

(1) 1.5 m (2) 1 m
(3) 0.1 m (4) 0.5 m

5. Two simple pendulums A and B are made to oscillate simultaneously and it is found that A completes 10 oscillations in 20 sec and B completes 8 oscillations in 10 sec. The ratio of the lengths of A and B is

(1) $\frac{8}{5}$ (2) $\frac{64}{25}$
(3) $\frac{5}{4}$ (4) $\frac{25}{64}$

6. The circular motion of a particle with constant speed is

(1) periodic but not SHM
(2) SHM but not periodic
(3) periodic and also SHM
(4) neither periodic nor SHM

7. A particle executes SHM with amplitude 0.2 m and time period 24 s. The lime required for it to move from the mean position to a point 0.1 m from the mean position is

(1) 2 s (2) 3 s
(3) 8 s (4) 12 s


8. The ratio of kinetic energy to the potential energy of a particle executing SHM at a distance is equal to half of its amplitude, the distance being measured from its equilibrium position will be

(1) 3 : 1 (2) 4 : 1
(3) 2 : 1 (4) 8 : 1

9. First overtone frequency of a closed pipe of length ‘l_1’ is equal to the 2nd harmonic frequency of an open pipe of length ‘l_2’. The ratio $\frac{l1}{l2}$ =

(1) $\frac{3}{4}$ (2) $\frac{4}{3}$
(3) $\frac{3}{2}$ (4) $\frac{2}{3}$

10. A train whistling at constant frequency ‘n’ is moving towards a station at a constant speed V. The train goes past a stationary observer on the station. The frequency ‘n’ of the sound as heard by the observer is plotted as a function of time ‘t’. Identify the correct curve



11. Two tuning forks A & B, produce notes of frequencies 258 Hz and 262 Hz. An unknown note sounded with A produces certain beats. When the same note is sounded with B, the beat frequency gets doubled. The unknown frequency is

(1) 250 Hz (2) 252 Hz
(3) 254 Hz (4) 256 Hz

12. A wire under tension vibrates with a fundamental frequency of 600 Hz. If the length of the wire is doubled, the radius is halved and the wire is made to vibrate under one-ninth the tension. Then the fundamental frequency will become

(1) 200 Hz (2) 300 Hz
(3) 600 Hz (4) 400 Hz

13. A metallic wire of 1 m length has a mass of 10×10^{-3} kg. If a tension of 100 N is applied to a wire, what is the speed of transverse wave?

(1) 100 ms^{-1} (2) 10 ms^{-1}
(3) 200 ms^{-1} (4) 0.1 ms^{-1}

14. A train is approaching towards a platform with a speed of 10 ms^{-1} while blowing a whistle of frequency 340 Hz. What is the frequency of whistle heard by a stationary observer on the platform? Given speed of sound = 340 ms^{-1}

(1) 330 Hz (2) 350 Hz
(3) 340 Hz (4) 360 Hz

15. A pipe of 30 cm long and open at both the ends produces harmonics. Which harmonic mode of pipe resonates a 1.1 kHz source? Given speed of sound in air = 330 ms^{-1}

(1) Fifth harmonic (2) Fourth harmonic
(3) Third harmonic (4) Second harmonic

ANSWERS

1. Answer: (3)

Sol:

T = 1.5 s springs are in parallel
$\Rightarrow k_{eq}=2k$

$2\pi\sqrt{\frac{12}{2k}}=1.5\Rightarrow\frac{6}{k}=\left(\frac{3}{4\pi}\right)^2=\frac{9}{16\pi^2}\Rightarrow k=\frac{32\pi^2}{3}$

$\Rightarrow k=105\ Nm^{-1}$

2. Answer: (2)

Sol.: Equation for simple harmonic motion

$y=a\sin\left(\frac{2\pi}{T}\right)t$

$\frac{a}{2}=a\sin\left(\frac{2\pi}{T}\right)t$

$t=\frac{T}{12}=\frac{6}{12}=\frac{1}{2}s$

3. Answer: (1)

Sol. Maximum velocity, $V_{max}=\omega A=0.5$ m/s

Maximum acceleration, $a_{max}=\omega^2A=1\ m/s^2$

Angular frequency $\omega=\frac{a_{max}}{V_{max}}$

$\omega=\frac{1}{0.5}$

ω = 2 rad/s

4. Answer: (2)

Hint:f = 0.5 Hz

$\omega=2\pi f=\pi$

for block to remain in contact with the piston at amplitude position weight A the block = Force due to oscillation.

mg = ma

$mg=m(\omega^2A)$

$A=\frac{g}{\omega^2}=\frac{10}{\pi^2}=1m$

5. Answer: (2)

Sol: $T_1=\frac{20}{10}=2s,\ T_2=\frac{10}{8}=\frac{5}{4}s$

$\therefore T=2\pi\sqrt{\frac{l}{g}}\ \therefore l\propto T^2$

$\therefore\frac{l_A}{l_B}=\left(\frac{T_1}{T_2}\right)^2=\left(2\times\frac{4}{5}\right)^2$

6. Answer: (1)

Sol:- As speed is constant, it is not SHM but periodic

7. Answer: (1)

Sol:- A = 0.2m; T = 24 secs; x=0.1m

$x=A\sin\omega t$

$x=0.2\sin\left(\frac{\pi}{12}t\right)$

$0.1=0.2\sin\left(\frac{\pi}{12}t\right)$

t = 2secs

8. Answer: (1)

Hint : $P.E=\frac{1}{2}Kx^2$

Distance is half its amplitude so

$P.E=\frac{1}{2}K\left(\frac{A^2}{4}\right)$

$K.E-\frac{1}{2}K\left(A^2-X^2\right)$

$K.E.=\frac{1}{2}K\left(A^2-\frac{A^2}{4}\right)=\frac{1}{2}K\left[\frac{4A^2-A^2}{4}\right]$

$K.E.=\frac{1}{2}K\left[\frac{3A^2}{4}\right]$

$\frac{K.E}{P.E}=\frac{3}{1}$


9. Answer: (1)

Solution:For closed pipe $f=\frac{3u}{4l_1}$

Open pipe $f=\frac{u}{l_2}\ \frac{3u}{4l_1}=\frac{u}{l_2}\rightarrow\frac{l_1}{l_2}=\frac{3}{4}$

10. Answer: (4)

Sol:



Train is moving at constant speed.

Frequencies heard will be constant (not variable)

11. Answer: (3)

Sol.: Given, $n_A=258Hz, n_B=262Hz$. If it produces x beats with 258 and 2x with 262.

$262-(258-x)=2x$
$262-258+x=2x$
$x=4$
$n=254Hz$

12. Answer: (1)

Sol.: Frequency of wire, $f=\frac{1}{2lr}\sqrt{\frac{T}{\pi\rho}}$

$\frac{f_1}{f_2}=\frac{l_2}{l_1}\times\frac{r_2}{r_1}\times\sqrt{\frac{T_1}{T_2}}$

$\frac{600}{f_2}=\frac{2}{1}\times\frac{1}{2}\times\sqrt{\frac{T}{T/9}}$

So here, $\frac{600}{f_2}=3$

$\Rightarrow f_2=\frac{600}{3}$

$f_2=200Hz$

13. Answer: (1)

Hint:Given Length of wire, l = 1m : Mass of wire , $m=10\times10^{-1}$kg; tension, T = 100 N

Speed of transverse wave,

$v=\sqrt{\frac{\text{Tension}}{\text{linear density}}}$

Linear density = $\frac{\text{mass}}{\text{length}}=\frac{10\times10^{-3}}{1}=10\times10^{-3}$

$\Rightarrow v=\sqrt{\frac{100}{10\times10^{-3}}}=\sqrt{10^4}=100ms^{-1}$

Therefore, speed of transverse wave = 100ms^{-1}

14. Answer: (2)

Hint:According to Doppler effect there is a change in frequency or wavelength of a wavelength of a wave in relation to observer who is moving relative to the wave source, which is given as

$f^1=\left(\frac{v}{v-v_s}\right)f$

Where f^1 is the apparent frequency: f is frequency of source; v_s is velocity of source; v is velocity of sound.

Given, f = 340Hz , v = 340 ms^{-1}; $v_s=10ms^{-1}$

Therefore,

$f^1=\left(\frac{340}{340-10}\right)\times340=350.303Hz\sim350Hz$

Thus, frequency of whistle heard by a stationary observer on the platform is 350 Hz

15. Answer: (4)

Hint:Given, Length of pipe, L = 30cm = 30×10^{-2}m ; frequency, f = 1.1 kHz = 1.1×10^3Hz ; speed of sound, v = 330 ms^{-1}

We know, $f=n\times\frac{v}{2L}$

$\Rightarrow1.1\times10^3=n\times\frac{330}{2\times30\times10^{-2}}$

$1.1\times10^3=n\times\frac{11}{2\times10^{-2}}$

$\Rightarrow n=\frac{1.1\times10^3\times2\times10^{-2}}{11}=2$

Thus second harmonic mode of pipe resonates a 1.1 kHz source.

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -46

616. ಮೌರ್ಯರ ರಾಜಧಾನಿ ಯಾವುದಾಗಿತ್ತು?
ಎ) ಪಾಟಲೀಪುತ್ರ
ಬಿ) ಕಪಿಲವಸ್ತು
ಸಿ) ಬನಾರಸ್
ಡಿ) ಇಂದೋರ್

617. ‘ಶಕ್ತಿ ವಿಶಿಷ್ಟಾದ್ವೈತ’ ಸಿದ್ಧಾಂತ ಪ್ರತಿಪಾದಿಸಿದವರು ಯಾರು?
ಎ) ಶಂಕರಾಚಾರ್ಯ
ಬಿ) ರಾಮಾನುಜಾಚಾರ್ಯ
ಸಿ) ಮಧ್ವಾಚಾರ್ಯ
ಡಿ) ಬಸವೇಶ್ವರ

618. ಸೌರಶಕ್ತಿಯನ್ನು ವಿದ್ಯುತ್ ಶಕ್ತಿಯನ್ನಾಗಿ ಪರಿವರ್ತಿಸುವ ಉಪಕರಣ ಯಾವುದು?
ಎ) ಸೌರಕೋಶ
ಬಿ) ಬ್ಯಾಟರಿ
ಸಿ) ಡೈನಮೊ
ಡಿ) ಯುಎಸ್‌ಬಿ

619. ಆಮ್ಲಮಳೆ ಯಾವುದರಿಂದಾಗುತ್ತದೆ?
ಎ) ಹೈಡ್ರೋಕ್ಲೋರಿಕ್ ಆಮ್ಲ
ಬಿ) ಪೊಟ್ಯಾಶಿಯಂ ಕ್ಲೋರೈಡ್
ಸಿ) ನೈಟ್ರಿಕ್ ಆಮ್ಲ
ಡಿ) ಸಲ್ಫ್ಯೂರಿಕ್ ಆಮ್ಲ

620. ಯಾವಾಗ ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು?
ಎ) ನವೆಂಬರ್ 1, 1956
ಬಿ) ನವೆಂಬರ್ 1, 1958
ಸಿ) ನವೆಂಬರ್ 1, 1960
ಡಿ) ನವೆಂಬರ್ 1, 1973

621. ವಿಟಮಿನ್ ಬಿ1 ಕೊರತೆಯಿಂದ ಯಾವ ರೋಗ ಉಂಟಾಗುತ್ತದೆ?
ಎ) ರಿಕೆಟ್ಸ್
ಬಿ) ಬೆರಿಬೆರಿ
ಸಿ) ಗಾಯಿಟರ್
ಡಿ) ಸ್ಕರ್ವಿ

622. ಕುಷ್ಠರೋಗ ಯಾವುದರಿಂದ ಉಂಟಾಗುತ್ತದೆ?
ಎ) ಬ್ಯಾಕ್ಟೀರಿಯಾ
ಬಿ) ವೈರಾಣು
ಸಿ) ಫಂಗಸ್
ಡಿ) ಪ್ರೊಟೊಝೋವಾ

623. ಲೋಕಸಭೆಯ ಈಗಿನ ಸಭಾಪತಿ ಯಾರು?
ಎ) ಮೀರಾ ಕುಮಾರ್
ಬಿ) ಸುಮಿತ್ರಾ ಮಹಾಜನ್
ಸಿ) ಓಂ ಬಿರ್ಲಾ
ಡಿ) ಮೇಲಿನ ಯಾರೂ ಅಲ್ಲ

624. ಭಾರತದ ಸಂವಿಧಾನವನ್ನು ಅಂಗೀಕರಿಸಿದ ದಿನ ಯಾವುದು?
ಎ) ಜನವರಿ 26, 1950
ಬಿ) ಜನವರಿ 26, 1949
ಸಿ) ನವೆಂಬರ್ 26, 1949
ಡಿ) ಆಗಸ್ಟ್ 15, 1947

625. ಭಾರತದ ಸಂವಿಧಾನದ ಯಾವ ವಿಧಿಯನ್ವಯ ಬಿರುದು / ಶಿರೋನಾಮೆಗಳನ್ನು ತೆಗೆದುಹಾಕಲಾಗಿದೆ?
ಎ) 18 ಬಿ) 19
ಸಿ) 21 ಡಿ) 22

626. ಭಾರತ ದೇಶದ ಮುಖ್ಯಸ್ಥರು ಯಾರು?
ಎ) ರಾಷ್ಟ್ರಪತಿ
ಬಿ) ಪ್ರಧಾನಮಂತ್ರಿ
ಸಿ) (ಎ) ಮತ್ತು (ಬಿ) ಎರಡೂ
ಡಿ) ಮೇಲಿನ ಯಾರೂ ಅಲ್ಲ

627. ‘ಲಿಗ್ನೈಟ್’ ಯಾವುದರ ಪ್ರತಿರೂಪ?
ಎ) ಕಬ್ಬಿಣ ಬಿ) ಕಲ್ಲಿದ್ದಲು
ಸಿ) ವಜ್ರ ಡಿ) ಕಟ್ಟಿಗೆ

628. ಬಯೋಗ್ಯಾಸ್‌ನ ಮುಖ್ಯ ಅಂಶ ಯಾವುದು?
ಎ) ಮಿಥೇನ್
ಬಿ) ಇಥೇನ್
ಸಿ) ಪ್ರೊಪೇನ್
ಡಿ) ಬ್ಯುಟೇನ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 45ರ ಉತ್ತರ: 601. ಡಿ, 602. ಸಿ, 603. ಡಿ, 604. ಬಿ, 605. ಸಿ, 606. ಸಿ, 607. ಬಿ, 608. ಸಿ, 609. ಎ, 610. ಸಿ, 611. ಎ, 612. ಬಿ, 613. ಬಿ, 614. ಎ, 615. ಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮುಂದಿರುವ ಹುಣ್ಣಿಮೆಯ ಸೊಬಗನ್ನು ಸವಿಯದೆ ಮುಂಬರಲಿರುವ ಅಮಾವಾಸ್ಯೆಯನ್ನು ನೆನೆದು ಕೊರಗುತ್ತ ಕೂರುವುದು ವಿವೇಕವೆನ್ನಿಸದು.

–ಕೆ.ಎಸ್.ನಿಸಾರ್ ಅಹಮದ್

ಒಲಿಂಪಿಕ್ಸ್‌ನತ್ತ ಸರ್ಕಾರದ ಚಿತ್ತ ಘೋಷಣೆಯಷ್ಟೇ ಗುರಿ ಮುಟ್ಟಿಸದು

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಏಳು ಪದಕಗಳನ್ನು ಜಯಿಸಿರುವ ಭಾರತದ ಕ್ರೀಡಾಪಟುಗಳ ಸಾಧನೆ ದೇಶದಾದ್ಯಂತ ರಾಜ್ಯ ಸರ್ಕಾರಗಳಲ್ಲಿ ಸಂಚಲನ ಮೂಡಿಸಿದೆ. ದೇಶದಲ್ಲಿ ನಿರ್ಲಕ್ಷ್ಯಕ್ಕೊಳಗಾದ ಕ್ರೀಡೆಗೆ ರಾಜ್ಯ ಸರ್ಕಾರಗಳು ಈಗ ಉತ್ತೇಜನ ನೀಡಲು ಮುಂದೆ ಬರುತ್ತಿರುವುದು ಆಶಾದಾಯಕ ಬೆಳವಣಿಗೆ. ಮುಂದಿನ ಪ್ಯಾರಿಸ್ ಒಲಿಂಪಿಕ್ಸ್‌ಗೆ ಕರ್ನಾಟಕದಿಂದ 75 ಅಥ್ಲೀಟ್‌ಗಳು ಭಾರತ ತಂಡದಲ್ಲಿ ಇರುವಂತೆ ನೋಡಿಕೊಳ್ಳುವ ಮಹತ್ವಾಕಾಂಕ್ಷೆ ಹೊಂದಿರುವ ರಾಜ್ಯ ಸರ್ಕಾರ, ಅದಕ್ಕೆ ಪೂರಕವಾದ ಉಪಕ್ರಮ ಕೈಗೊಳ್ಳಲು ಮುಂದಾಗಿದೆ. ಈ ದಿಸೆಯಲ್ಲಿ ಕ್ರೀಡಾ ಸಚಿವರ ನೇತೃತ್ವದಲ್ಲಿ ಉನ್ನತಮಟ್ಟದ ಸಮಿತಿಯೊಂದನ್ನೂ ರಚಿಸಿದೆ. ಒಡಿಶಾ, ಜಾರ್ಖಂಡ್, ಮಣಿಪುರ, ಹರಿಯಾಣ, ಪಂಜಾಬ್ ರಾಜ್ಯಗಳು ಕ್ರೀಡೆಗೆ ನೀಡುತ್ತಿರುವ ಉತ್ತೇಜನವು ಒಲಿಂಪಿಕ್ಸ್‌ನಲ್ಲಿ ಯಶಸ್ಸು ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಅವುಗಳ ಮಾದರಿಯಲ್ಲೇ ಕ್ರೀಡೆಯನ್ನು ಉತ್ತೇಜಿಸಲು ನಮ್ಮ ರಾಜ್ಯದಲ್ಲೂ ವಿಪುಲ ಅವಕಾಶಗಳಿವೆ. ಒಡಿಶಾ, ಜಾರ್ಖಂಡ್‌ನಲ್ಲಿ ಆದಿವಾಸಿ ಹಾಡಿಗಳಲ್ಲಿರುವ ಪ್ರತಿಭೆಗಳನ್ನು ಹುಡುಕಿ ವಸತಿ, ತರಬೇತಿ, ಶಿಕ್ಷಣ ಮತ್ತು ಉದ್ಯೋಗ ಸೌಲಭ್ಯ ನೀಡಲಾಗಿದೆ. ಹರಿಯಾಣ ಸರ್ಕಾರವು ಕುಸ್ತಿ, ಬಾಕ್ಸಿಂಗ್, ಟ್ರ್ಯಾಕ್ ಮತ್ತು ಫೀಲ್ಡ್ ಕ್ರೀಡೆಗಳಿಗೆ ಯಥೇಚ್ಛ ನೆರವು ನೀಡುತ್ತಿದೆ. ಕುರುಕ್ಷೇತ್ರ, ಸೋನಿಪತ್‌ನಲ್ಲಿ ತರಬೇತಿ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿದೆ. ಪಂಜಾಬ್ ಸರ್ಕಾರ ಕೂಡ ಕ್ರೀಡಾಪಟುಗಳ ತರಬೇತಿಗೆ ಅಗತ್ಯ ವ್ಯವಸ್ಥೆ ಮಾಡಿದೆ.



ಅಷ್ಟೇನೂ ಆದ್ಯತೆ ಪಡೆಯದ ಕ್ರೀಡಾ ಕ್ಷೇತ್ರದ ಬಗ್ಗೆ ಈಗ ರಾಜ್ಯ ಸರ್ಕಾರಗಳು ಆಸಕ್ತಿ ತೋರುತ್ತಿರುವುದು ಉತ್ತಮ ಬೆಳವಣಿಗೆ

ನಮ್ಮ ರಾಜ್ಯದಲ್ಲಿ ಸಹ ಕ್ರೀಡಾ ಪ್ರತಿಭೆಗಳಿಗೆ ಕೊರತೆ ಇಲ್ಲ. ಪ್ರತೀ ಜಿಲ್ಲೆಯೂ ಅದರದ್ದೇ ಆದ ಹವಾಮಾನ, ಆಹಾರ ಭಿನ್ನತೆ ಹೊಂದಿರುವಂತೆ ಕ್ರೀಡಾ ವೈವಿಧ್ಯವನ್ನೂ ಹೊಂದಿದೆ. ಉದಾಹರಣೆಗೆ ವಿಜಯಪುರ, ಬಾಗಲಕೋಟೆ ಭಾಗದಲ್ಲಿ ಸೈಕ್ಲಿಂಗ್, ಕಬಡ್ಡಿ; ಧಾರವಾಡ, ಗದಗ, ಕೊಡಗು ಭಾಗದಲ್ಲಿ ಹಾಕಿ; ಬೆಳಗಾವಿ, ಮೈಸೂರು ಭಾಗದಲ್ಲಿ ಕುಸ್ತಿ, ಫುಟ್‌ಬಾಲ್; ಮಂಗಳೂರು, ಉಡುಪಿ, ಉತ್ತರ ಕನ್ನಡದಲ್ಲಿ ಅಥ್ಲೆಟಿಕ್ಸ್, ವೇಟ್‌ಲಿಫ್ಟಿಂಗ್, ಪವರ್‌ಲಿಫ್ಟಿಂಗ್; ಬೆಂಗಳೂರಿನಲ್ಲಿ ಈಜು, ಬ್ಯಾಡ್ಮಿಂಟನ್, ಟೆನಿಸ್ ಕ್ರೀಡೆಯ ಗಟ್ಟಿ ಬೇರುಗಳಿವೆ. ಅವುಗಳಿಗೆ ನೀರೆರೆದು ಪೋಷಿಸುವ ಕೆಲಸ ಆಗಬೇಕಿದೆ. ಬೆಂಗಳೂರಿನಲ್ಲೇನೋ ಅಂತರರಾಷ್ಟ್ರೀಯ ಗುಣಮಟ್ಟದ ಕ್ರೀಡಾ ಸೌಲಭ್ಯಗಳಿವೆ. ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದ ಪುರುಷರ ತಂಡ ಮತ್ತು ನಾಲ್ಕನೇ ಸ್ಥಾನ ಗಳಿಸಿದ ಮಹಿಳೆಯರ ತಂಡವು ಉದ್ಯಾನನಗರಿಯ ಭಾರತೀಯ ಕ್ರೀಡಾ ಪ್ರಾಧಿಕಾರದ ಕೇಂದ್ರದಲ್ಲಿಯೇ ಅಭ್ಯಾಸ ಮಾಡಿದ್ದವು. ಚಿನ್ನದ ಪದಕ ಗೆದ್ದು ಇತಿಹಾಸ ನಿರ್ಮಿಸಿದ ನೀರಜ್ ಚೋಪ್ರಾ ಅವರು ವಿಜಯನಗರದ ಜೆಎಸ್‌ಡಬ್ಲ್ಯು ಅಕಾಡೆಮಿಯಲ್ಲಿ ಬಹುಕಾಲ ಅಭ್ಯಾಸ ಮಾಡಿದ್ದರು. ಒಲಿಂಪಿಯನ್ ಕುಸ್ತಿಪಟುಗಳಿಗೂ ಈ ಅಕಾಡೆಮಿಯೇ ಪ್ರಾಯೋಜಕತ್ವ ನೀಡಿರುವುದು ಗಮನಾರ್ಹ. ರಾಜ್ಯದಲ್ಲಿರುವ ಇಂತಹ ಇನ್ನಷ್ಟು ಉದ್ಯಮಗಳು ಕಾರ್ಪೊರೇಟ್ ಸಾಮಾಜಿಕ ಹೊಣೆಯಡಿ (ಸಿಎಸ್‌ಆರ್) ಕ್ರೀಡೆಯತ್ತ ನೆರವಿನಹಸ್ತ ಚಾಚುವಂತೆ ಮಾಡಲು ಸರ್ಕಾರ ಉತ್ತೇಜಿಸಬೇಕು.

ಕ್ರೀಡಾ ವೈದ್ಯಕೀಯ ಮತ್ತು ವಿಜ್ಞಾನದ ಅತ್ಯಾಧುನಿಕ ಸೌಲಭ್ಯಗಳು ರಾಜ್ಯದಲ್ಲೂ ಅಭಿವೃದ್ಧಿಗೊಳ್ಳಬೇಕು. ಕ್ರೀಡಾ ಆಡಳಿತದಲ್ಲೂ ಇಲಾಖೆ ಮಟ್ಟದಲ್ಲಿ ಕೆಲವು ಸುಧಾರಣೆಗಳನ್ನು ತರಬೇಕು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯನ್ನು ವಿಭಜಿಸಿ, ಕ್ರೀಡಾ ಇಲಾಖೆಯನ್ನು ಪ್ರತ್ಯೇಕಿಸಬೇಕೆಂಬ ಬೇಡಿಕೆ ಬಹುದಿನಗಳಿಂದ ಇದೆ. ಈ ದಿಸೆಯಲ್ಲಿ ಸರ್ಕಾರ ಚಿಂತನೆ ನಡೆಸಬೇಕು. ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಇರುವಂತೆಯೇ ಕರ್ನಾಟಕದಲ್ಲೂ ಕ್ರೀಡಾಪಟುಗಳಿಗೆ ಉದ್ಯೋಗ, ಬಡ್ತಿ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು. ರಾಜ್ಯದ ಕ್ರೀಡಾ ಸಂಸ್ಥೆಗಳಲ್ಲಿ ರಾಜಕೀಯ ಹಸ್ತಕ್ಷೇಪ ಇರದಂತೆ ನೋಡಿಕೊಳ್ಳಬೇಕು. ಈ ಸಂಸ್ಥೆಗಳಲ್ಲಿರುವ ಪಟ್ಟಭದ್ರರನ್ನು ಕೆಳಗಿಳಿಸಲು ದಿಟ್ಟಕ್ರಮ ಕೈಗೊಳ್ಳಬೇಕು. ಕ್ರೀಡಾ ಸಂಸ್ಥೆಗಳ ಆಡಳಿತದ ಚುಕ್ಕಾಣಿಯು ಕ್ರೀಡಾತಜ್ಞರು ಇಲ್ಲವೇ ಹಿರಿಯ ಕ್ರೀಡಾಪಟುಗಳಿಗಷ್ಟೇ ಸಿಗುವಂತೆ ನಿಯಮ ರೂಪಿಸಬೇಕು. ಯಾವ ಜಿಲ್ಲೆಯಲ್ಲಿ ಯಾವ ಕ್ರೀಡೆಯ ಪಾರಮ್ಯ ಇದೆಯೋ ಅಲ್ಲಿ ಆ ಕ್ರೀಡೆಯ ತರಬೇತಿಗೆ ಸಕಲ ಸೌಲಭ್ಯವನ್ನೂ ಕಲ್ಪಿಸಬೇಕು. ಕ್ರೀಡಾಚಟುವಟಿಕೆಗಳು ರಾಜ್ಯದ ಎಲ್ಲ ಭಾಗಗಳಲ್ಲೂ ಸಮಾನವಾಗಿ ನಡೆಯಬೇಕು. ತಳಮಟ್ಟದಿಂದಲೇ ಕ್ರೀಡಾ ಪ್ರತಿಭೆಗಳ ಶೋಧಕ್ಕೆ ದಕ್ಷ ವ್ಯವಸ್ಥೆಯೊಂದನ್ನು ರೂಪಿಸಬೇಕು. ಅದರ ಮೂಲಕ ಗ್ರಾಮಗಳು ಹಾಗೂ ಹಾಡಿಗಳಲ್ಲಿರುವ ಅನನ್ಯ ಪ್ರತಿಭೆಗಳನ್ನು ಗುರುತಿಸುವ ಕೆಲಸ ಆಗಬೇಕು. ವಿವಿಧ ವಯೋಮಾನದ ಹಂತಗಳಲ್ಲಿ ನಿರಂತರವಾಗಿ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸಬೇಕು. ಸದ್ಯ ನಮ್ಮ ರಾಜ್ಯದಲ್ಲಿ ದಸರಾ ಕ್ರೀಡಾಕೂಟವೊಂದೇ ದೊಡ್ಡ ಪ್ರಮಾಣದಲ್ಲಿ ನಡೆಯುತ್ತದೆ. ಆದರೆ, ಅಲ್ಲಿ ಪ್ರತಿವರ್ಷ ಕ್ರೀಡಾಪಟುಗಳ ಸಾಧನೆಗಿಂತ ಅವ್ಯವಸ್ಥೆಯೇ ಹೆಚ್ಚು ಸದ್ದು ಮಾಡುತ್ತದೆ. ಪಾರದರ್ಶಕತೆ ಹೆಚ್ಚಿಸಲು ಪ್ರತಿಯೊಂದು ಕ್ರೀಡೆಯಲ್ಲಿ ಭಾಗವಹಿಸುವ ಸ್ಪರ್ಧಿಗಳ ಸಾಧನೆ, ವೈಫಲ್ಯಗಳ ದತ್ತಾಂಶಗಳು ದಾಖಲಾಗಬೇಕು. ಶಾಲೆಗಳು, ಕಾಲೇಜು ಮತ್ತು ವಿಶ್ವವಿದ್ಯಾಲಯಗಳಲ್ಲಿ ಮಂಕಾಗಿರುವ ಕ್ರೀಡಾ ಚಟುವಟಿಕೆಗಳನ್ನು ಚುರುಕುಗೊಳಿಸಬೇಕು. ಮಧ್ಯಮ ವರ್ಗದ ಬಹುತೇಕ ಕುಟುಂಬಗಳ ಮಕ್ಕಳಲ್ಲಿ ವೃತ್ತಿಪರ ಶಿಕ್ಷಣದ ಕಡೆಗೇ ಹೆಚ್ಚಿನ ಒಲವು. ಕ್ರೀಡೆಯಲ್ಲಿಯೂ ತಮ್ಮ ಮಕ್ಕಳ ಭವಿಷ್ಯ ರೂಪುಗೊಳ್ಳಬಹುದು ಎಂಬ ಭರವಸೆ ಪಾಲಕರಲ್ಲಿ ಮೂಡುವಂತೆ ಕ್ರೀಡಾಪಟುಗಳಿಗೆ ಸೌಲಭ್ಯಗಳು ಸಿಗಬೇಕು. ಕ್ರೀಡಾಪಟುಗಳನ್ನು ತಯಾರು ಮಾಡುವುದೆಂದರೆ ಸಸಿ ನೆಟ್ಟು ಮರವಾಗಿ ಬೆಳೆಸಿದಂತೆ. ಫಲ ಕೊಡಲು ವರ್ಷಗಳಷ್ಟು ಸಮಯಾವಕಾಶ ಬೇಕು. ಅಲ್ಲಿಯವರೆಗೆ ಕ್ರೀಡಾಪ್ರತಿಭೆ ಸೊರಗದಂತೆ ನಿರಂತರವಾಗಿ ನೀರೆರೆಯಲು ಪ್ರಬಲ ಇಚ್ಛಾಶಕ್ತಿಯನ್ನೂ ತೋರಬೇಕು.

ದಿನದ ಟ್ವೀಟ್


ಶಾಲೆಗೆ ಕರೆತರೋಣ

ಕೋವಿಡ್-19 ಕಾಲಘಟ್ಟದಲ್ಲಿ ಬಹಳಷ್ಟು ಮಕ್ಕಳಿಗೆ ದೂರಶಿಕ್ಷಣವೇ ಜೀವಸೆಲೆಯಾಗಿದ್ದರೂ, ಅತ್ಯಂತ ದುರ್ಬಲ ವರ್ಗದವರಿಗೆ ಅದು ಸಹ ಕೈಗೆಟುಕಲಿಲ್ಲ. ಎಷ್ಟು ಸಾಧ್ಯವೋ ಅಷ್ಟು ಬೇಗ ನಾವು ವಿದ್ಯಾರ್ಥಿಗಳನ್ನು ಶಾಲೆಗೆ ವಾಪಸ್ ಕರೆತರಬೇಕು ಮತ್ತು ಅವರು ಪುನಃ ಅಲ್ಲಿಗೆ ಹೊಂದಿಕೊಳ್ಳಲು ಅಗತ್ಯವಿರುವ ಬೆಂಬಲ ನೀಡಬೇಕು.

ಯುನಿಸೆಫ್

ಕಿಡಿನುಡಿ

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆದ ಬಳಿಕ, ತಾವು ಜನತಾ ಪರಿವಾರದವರು ಎಂಬುದನ್ನು ನೆನಪಿಸಿಕೊಂಡರು. ಹಾಗಾಗಿಯೇ, ಎಚ್.ಡಿ.ದೇವೇಗೌಡ ಅವರನ್ನು ಭೇಟಿ ಮಾಡಿದರು. ಆದರೆ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದಾಗ, ಎಂದೂ ತಾವು ಜನತಾ ಪರಿವಾರಕ್ಕೆ ಸೇರಿದವರು ಎಂದು ಹೇಳಿಕೊಳ್ಳಲಿಲ್ಲ. ಜೆಡಿಎಸ್ ಅನ್ನು ಮುಗಿಸುವುದೇ ಅವರ ಮೊದಲ ಅಜೆಂಡಾ ಆಗಿತ್ತು.



ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 24-8-1996

● **ಕಾಶ್ಮೀರ: ವಿಶ್ವಾಸ ಸ್ಥಾಪನೆಗೆ ಯತ್ನ- ದೇವೇಗೌಡ**

ಬೆಂಗಳೂರು, ಆ. 23– ಸಂಯುಕ್ತ ರಂಗ ಸರ್ಕಾರಕ್ಕೆ ಜಮ್ಮು-ಕಾಶ್ಮೀರದಲ್ಲಿ ಹಿಂದೆ ಇದ್ದ ಒಳ್ಳೆಯ ವಾತಾವರಣ ಸೃಷ್ಟಿಸಿ ಜನತೆಯಲ್ಲಿ ವಿಶ್ವಾಸ ಪುನರ್ ಪ್ರತಿಷ್ಠಾಪಿಸುವ ಬಗ್ಗೆ ಕಾಳಜಿ ಇದೆಯೇ ಹೊರತು ಅಲ್ಲಿನ ವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷ ಗೆಲ್ಲುತ್ತದೆ ಎಂಬುದರಲ್ಲಿ ಅಲ್ಲ ಎಂದು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

● **ಹುಬ್ಬಳ್ಳಿಯಲ್ಲಿ ಚಳವಳಿ ತೀವ್ರ: ಬಿಜೆಪಿ ಘೋಷಣೆ**

ಹುಬ್ಬಳ್ಳಿ, ಆ. 23– ಹುಬ್ಬಳ್ಳಿಗೆ ಭೇಟಿ ನೀಡಿದ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ನೈರುತ್ಯ ರೈಲ್ವೆ ವಲಯ ಹಾಗೂ ಹೈಕೋರ್ಟ್ ಪೀಠ ಸ್ಥಾಪನೆ ಸೇರಿದಂತೆ ಈ ಭಾಗದ ಪ್ರಮುಖ ಬೇಡಿಕೆಗಳ ಬಗ್ಗೆ ತುಟಿ ಬಿಚ್ಚದ ಹಿನ್ನೆಲೆಯಲ್ಲಿ ಚಳವಳಿಯನ್ನು ಇನ್ನಷ್ಟು ಉಗ್ರಗೊಳಿಸಲಾಗುವುದು ಎಂದು ಬಿಜೆಪಿ ಇಂದು ಇಲ್ಲಿ ಘೋಷಿಸಿದೆ.

50 ವರ್ಷಗಳ ಹಿಂದೆ

ಮಂಗಳವಾರ, 24-8-1971

● **ರಾವಣನ ಶವ ಸುರಕ್ಷಿತವಾಗಿದೆಯೆ?**

ಕೊಲಂಬೊ, ಆ. 23– ಸಿಂಹಳದಲ್ಲಿನ ದುರ್ಗಮವಾದ ಪರ್ವತವೊಂದರ ಮೇಲೆ ಲಂಕೆಯ ದೊರೆ ರಾವಣನ ಮೃತದೇಹವನ್ನು ಸುವಾಸನಾ ದ್ರವ್ಯಗಳಿಂದ ಪರಿಷ್ಕರಿಸಿ ರಕ್ಷಿಸಿಡಲಾಗಿದೆ ಎಂಬ ಬೌದ್ಧ ಪುರೋಹಿತರೊಬ್ಬರ ಮಾತು 'ಭಾರಿ ಕೀಟಲೆಯ ಮೋಸ' ಎಂದು ಸಿಂಹಳದ ಪ್ರಮುಖ ವಿದ್ವಾಂಸರು ತಿಳಿಸಿದ್ದಾರೆ.

ಆದರೆ, ಈ ಪುರೋಹಿತರ ಮಾತಿನಲ್ಲಿ ವಿಶ್ವಾಸವಿಟ್ಟಿರುವ ಅನೇಕ ಮಂದಿ ಇದ್ದಾರೆ. ಅವರು 'ಶ್ರೀ ರಾವಣನ ಮೃತದೇಹದ ಶೋಧನೆಗಾಗಿ ಸಮಿತಿ'ಯೊಂದನ್ನು ರಚಿಸಿದ್ದಾರೆ.

● **ಭಾರತದ ಕಾಫಿಗೆ ಜಪಾನ್ ಆಸಕ್ತಿ**

ನವದೆಹಲಿ, ಆ. 23– ಭಾರತದಿಂದ ಜಪಾನ್ ಹತ್ತು ಸಾವಿರ ಟನ್ ಕಾಫಿ ಖರೀದಿ ಮಾಡಲು ಆಸಕ್ತಿ ವ್ಯಕ್ತಪಡಿಸಿದೆ ಎಂದು ತಿಳಿದುಬಂದಿದೆ.

ಜಪಾನಿನ ಸಂಸ್ಥೆಯೊಂದು ವಿದೇಶ ವಾಣಿಜ್ಯ ಸಚಿವ ಶಾಖೆಗೆ ಪತ್ರ ಬರೆದು, ಕಾಫಿ ಕೊಳ್ಳಲು ಮುಂದೆ ಬಂದಿದೆ. ಜಪಾನಿಗೆ ಕಾಫಿಬೀಜದ ಮಾದರಿಗಳನ್ನು ಕಳುಹಿಸಿ ಕೊಡುವಂತೆ ವಿದೇಶ ವಾಣಿಜ್ಯ ಶಾಖೆ ಆದೇಶ ನೀಡಿದೆಯೆಂದು ಗೊತ್ತಾಗಿದೆ.

ಹೆಸರು ಇರಿಸುವ ವಿಚಾರದಲ್ಲಿ ತರ್ಕಹೀನವಾಗಿ ವರ್ತಿಸಿದ್ದರ ಬಗ್ಗೆ ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳಲಿ

ಪ್ರಶಸ್ತಿ ಹೆಸರು ನಾವೇಕೆ ಬದಲಿಸಬೇಕು?



ಸೂರ್ಯ-ನಮಸ್ಕಾರ

ಎ.ಸೂರ್ಯ ಪ್ರಕಾಶ್

ದೇಶದ ಅತ್ಯುನ್ನತ ಕ್ರೀಡಾ ಪ್ರಶಸ್ತಿಯಾದ 'ರಾಜೀವ್ ಗಾಂಧಿ ಖೇಲ್ ರತ್ನ'ದ ಹೆಸರನ್ನು 'ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ' ಎಂದು ಬದಲಾಯಿಸಿದ್ದನ್ನು ಜೀರ್ಣಿಸಿಕೊಳ್ಳಲು ಕಾಂಗ್ರೆಸ್ ಪಕ್ಷಕ್ಕೆ ಕಷ್ಟವಾಗುತ್ತಿದೆ. ಧ್ಯಾನ್ ಚಂದ್ ಅವರು ದಂತಕಥೆಯಾಗಿ ಬೆಳೆದುನಿಂತ ಹಾಕಿ ಆಟಗಾರ. ಈಚೆಗೆ ಮುಕ್ತಾಯವಾದ ಟೋಕಿಯೊ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ದೇಶದ ಮಹಿಳೆಯರ ಮತ್ತು ಪುರುಷರ ಹಾಕಿ ತಂಡವು ಅದ್ಭುತ ಸಾಧನೆ ತೋರಿದ ನಂತರದಲ್ಲಿ ಪ್ರಶಸ್ತಿಯ ಹೆಸರು ಬದಲಾವಣೆಯ ಘೋಷಣೆಯನ್ನು ಸರ್ಕಾರ ಮಾಡಿತು. ಮೇಜರ್ ಧ್ಯಾನ್ ಚಂದ್ ಅವರು ದೇಶದ ಕ್ರೀಡಾಲೋಕದ ಅತಿದೊಡ್ಡ ಹೀರೊಗಳಲ್ಲಿ ಒಬ್ಬರು. ಅವರು ಒಲಿಂಪಿಕ್ಸ್‌ನಲ್ಲಿ ಮೂರು ಬಾರಿ ಚಿನ್ನದ ಪದಕ ಗೆದ್ದಿದ್ದಾರೆ. 1928ರ ಒಲಿಂಪಿಕ್ಸ್‌ನಲ್ಲಿ ದೇಶದ ಹಾಕಿ ತಂಡವು ಚಿನ್ನ ಗೆದ್ದಾಗ ಅತಿಹೆಚ್ಚಿನ ಸಂಖ್ಯೆಯಲ್ಲಿ ಗೋಲು ಬಾರಿಸಿದ್ದವರು ಧ್ಯಾನ್ ಚಂದ್.

ಖೇಲ್ ರತ್ನ ಪ್ರಶಸ್ತಿಯ ಹೆಸರನ್ನು ಬದಲಾಯಿಸಿದ್ದಕ್ಕೆ ಇಷ್ಟೊಂದು ಸಿಟ್ಟಾಗುವ ಬದಲು ಕಾಂಗ್ರೆಸ್ ಪಕ್ಷವು ತಾನು ಅಧಿಕಾರದಲ್ಲಿ ಇದ್ದಾಗ ಎಷ್ಟು ತರ್ಕಹೀನವಾಗಿ ವರ್ತಿಸಿದ್ದೆ, ತಾನು ತೆಗೆದುಕೊಂಡ ನಿರ್ಧಾರಗಳು ಹೇಗಿದ್ದವು ಎಂಬ ಬಗ್ಗೆ ಅವಲೋಕನ ನಡೆಸಬೇಕು. ಅದರಲ್ಲೂ ಮುಖ್ಯವಾಗಿ ರಾಷ್ಟ್ರ ಮಟ್ಟದ ಪ್ರತೀ ಯೋಜನೆ, ಸಂಸ್ಥೆ, ಪ್ರಶಸ್ತಿ, ಫೆಲೋಶಿಪ್‌ಗಳಿಗೆ ನೆಹರೂ- ಗಾಂಧಿ ಕುಟುಂಬದ ಮೂವರು ವ್ಯಕ್ತಿಗಳ- ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ – ಹೆಸರನ್ನು ಇರಿಸಿದ್ದರ ಬಗ್ಗೆ ಅವಲೋಕನ ನಡೆಸಬೇಕು. ಈ ಕುಟುಂಬವೇ ಕಾಂಗ್ರೆಸ್ಸಿನ ಮಾಲೀಕತ್ವ ಹೊಂದಿದೆ, ಪಕ್ಷವನ್ನು ನಿಯಂತ್ರಿಸುತ್ತಿದೆ.

ಖೇಲ್ ರತ್ನ ಪ್ರಶಸ್ತಿಯ ಹೆಸರನ್ನು ಬದಲಿಸಿದ್ದಕ್ಕಾಗಿ ಪಕ್ಷವು ಇಷ್ಟೊಂದು ವಿರೋಧ ವ್ಯಕ್ತಪಡಿಸುತ್ತಿರುವ ಕಾರಣ, ಪ್ರತೀ ಯೋಜನೆ, ಪ್ರಶಸ್ತಿಗೆ ಒಂದು ಕುಟುಂಬದ ಸದಸ್ಯರ ಹೆಸರನ್ನು ಇತ್ತಿದ್ದರ ಹಿಂದಿನ ವಿಪರೀತ ಬುದ್ಧಿಯನ್ನು ಹಾಗೂ ದುರಹಂಕಾರವನ್ನು ಬಯಲುಗೊಳಿಸಬೇಕಾಗಿದೆ. ನಮ್ಮ ಅರಿವಿಗೆ ಬಂದಿರುವಂತೆ, ನೆಹರೂ, ಇಂದಿರಾ ಹಾಗೂ ರಾಜೀವ್ ಅವರಿಗೆ ಕ್ರೀಡೆಯ ಜೊತೆ ದೊಡ್ಡ ನಂಟು ಇರಲಿಲ್ಲ. ಹೀಗಿದ್ದರೂ, ಬಹಳಷ್ಟು ಕ್ರೀಡಾಕೂಟಗಳಿಗೆ ಮತ್ತು ಕ್ರೀಡಾ ಟ್ರೋಫಿಗಳಿಗೆ ಅವರ ಹೆಸರು ಇರಿಸಲಾಗಿದೆ. ರಾಜೀವ್ ಗಾಂಧಿ ಅವರ ಹೆಸರು ಹೊತ್ತಿರುವ ಕೆಲವು ಕ್ರೀಡಾಕೂಟಗಳ ಉದಾಹರಣೆ ಇಲ್ಲಿದೆ. ಬಹುತೇಕ ಎಲ್ಲ ಬಗೆಯ ಕ್ರೀಡೆಗಳಿಗೂ ಅವರ ಹೆಸರು ಬಳಸಿಕೊಳ್ಳಲಾಗಿದೆ.

ರಾಜೀವ್ ಗಾಂಧಿ ಗೋಲ್ಡ್ ಕಪ್ ಕಬಡ್ಡಿ ಪಂದ್ಯಾಟ; ರಾಜೀವ್ ಗಾಂಧಿ ಫೆಡರೇಶನ್ ಕಪ್ ಬಾಕ್ಸಿಂಗ್ ಚಾಂಪಿಯನ್‌ಶಿಪ್; ರಾಜೀವ್ ಗಾಂಧಿ ಮೆಮೋರಿಯಲ್ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್; ರಾಜೀವ್ ಗಾಂಧಿ ಸ್ಮಾರಕ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್; ಅಖಿಲ ಭಾರತ ರಾಜೀವ್ ಗಾಂಧಿ ಬ್ಯಾಸ್ಕೆಟ್‌ಬಾಲ್ (ಹೆಣ್ಣುಮಕ್ಕಳ) ಪಂದ್ಯಾಟ; ರಾಜೀವ್ ಗಾಂಧಿ ದೋಣಿ ಸ್ಪರ್ಧೆ, ಕೇರಳ; ರಾಜೀವ್ ಗಾಂಧಿ ರೋಡ್ ರೇಸ್, ನವದೆಹಲಿ; ಅಖಿಲ ಭಾರತ ರಾಜೀವ್ ಗಾಂಧಿ ಕುಸ್ತಿ ಗೋಲ್ಡ್ ಕಪ್... ಇವು ಉದಾಹರಣೆ ಮಾತ್ರ. ಇಲ್ಲಿ ಸ್ಥಳಾವಕಾಶದ ಮಿತಿಯ ಕಾರಣದಿಂದಾಗಿ ಹಲವು ಟ್ರೋಫಿಗಳ ಹೆಸರು ಉಲ್ಲೇಖಿಸಿಲ್ಲ.

ರಾಷ್ಟ್ರಮಟ್ಟದ ಪ್ರಮುಖ ಕ್ರೀಡಾಕೂಟಗಳ ವಿಚಾರದಲ್ಲಿ ಇಂದಿರಾ ಗಾಂಧಿ ಹಾಗೂ ಜವಾಹರಲಾಲ್ ನೆಹರೂ ಅವರ ಹೆಸರು ಕೂಡ ಪ್ರಮುಖವಾಗಿ ಕಾಣಿಸುತ್ತವೆ. ಇಂದಿರಾ ಗಾಂಧಿ ಅಂತರರಾಷ್ಟ್ರೀಯ ಮಹಿಳಾ ಹಾಕಿ ಗೋಲ್ಡ್ ಕಪ್ ಕ್ರೀಡಾಕೂಟ; ಇಂದಿರಾ ಗಾಂಧಿ ದೋಣಿ ಸ್ಪರ್ಧೆ, ಕೇರಳ; ನೆಹರೂ ಕಪ್- ಅಂತರರಾಷ್ಟ್ರೀಯ ಫುಟ್‌ಬಾಲ್ ಕ್ರೀಡಾಕೂಟ; ಜವಾಹರಲಾಲ್ ನೆಹರೂ ಹಾಕಿ ಕ್ರೀಡಾಕೂಟ ಇವು ಕೆಲವು ಉದಾಹರಣೆಗಳು. ಕಾಂಗ್ರೆಸ್ ಪಕ್ಷವು ಇದನ್ನು ಕ್ರೀಡಾಕೂಟಗಳಿಗೆ, ಟ್ರೋಫಿಗಳಿಗೆ ಸೀಮಿತಗೊಳಿಸಿಲ್ಲ. ಇದು ರಾಷ್ಟ್ರ ರಾಜಧಾನಿಯ ಪ್ರಮುಖ ಕ್ರೀಡಾಂಗಣಗಳಿಗೂ ವಿಸ್ತರಣೆ ಆಗಿದೆ. ಜವಾಹರಲಾಲ್ ನೆಹರೂ ಕ್ರೀಡಾಂಗಣ, ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣ ಇದಕ್ಕೆ ಉದಾಹರಣೆ. ಇಂತಹ ಹೆಸರು ಹಲವಿವೆ.

ಕೊನೆಯ ಬಾರಿ ಲೆಕ್ಕಹಾಕಿದ್ದ ಸಂದರ್ಭದಲ್ಲಿ ದೇಶದ 26 ಕ್ರೀಡಾಕೂಟಗಳು, 17 ಕ್ರೀಡಾಂಗಣಗಳಿಗೆ ನೆಹರೂ-ಗಾಂಧಿ ಕುಟುಂಬದ ಈ ಮೂವರ ಹೆಸರು ಇರಿಸಲಾಗಿತ್ತು. ದೇಶದ ಕ್ರೀಡಾಲೋಕದ ತಾರೆಗಳನ್ನೂ, ಇತರ ಖ್ಯಾತ ವ್ಯಕ್ತಿಗಳನ್ನೂ ನಿರ್ಲಕ್ಷಿಸಲಾಗಿತ್ತು. ಇದು ಕ್ರೀಡೆಗೆ ಮಾತ್ರ ಸೀಮಿತ ಆಗಿಲ್ಲ. ಈ ಲೇಖಕ ಮೊದಲ ಬಾರಿ ಪಟ್ಟಿ ಮಾಡಿದ್ದಾಗ, ಸರ್ಕಾರದ ಒಟ್ಟು 450 ಯೋಜನೆಗಳು, ಕಟ್ಟಡಗಳು, ಫೆಲೋಶಿಪ್‌ಗಳು ಕಾಂಗ್ರೆಸ್ ಪಕ್ಷದ ಈ ಮೂವರು ಐಕಾನ್‌ಗಳ ಹೆಸರು ಹೊತ್ತಿದ್ದವು. ವಿಮಾನ ನಿಲ್ದಾಣಗಳು, ಬಂದರುಗಳು, ವಿಶ್ವವಿದ್ಯಾಲಯಗಳು, ಅಕಾಡೆಮಿಗಳು ಇದರಲ್ಲಿ ಸೇರಿವೆ. ಅತ್ಯಂತ ಎತ್ತರದ ಸ್ಥಳಗಳು, ಭೌಗೋಳಿಕ ಗುರುತುಗಳು ಕೂಡ ಈ ಹೆಸರುಗಳಿಂದ ಹೊರತಾಗಿಲ್ಲ. ಈ ಕುಟುಂಬದ ಸದಸ್ಯರನ್ನು ಹೊರತುಪಡಿಸಿದರೆ ಬೇರೆ ಯಾರೂ ಲೆಕ್ಕಕ್ಕೇ ಇರಲಿಲ್ಲ. ಕಾಂಗ್ರೆಸ್ ಪಕ್ಷದ ಹಾಗೂ ದೇಶದ ಸ್ವಾತಂತ್ರ್ಯ ಹೋರಾಟದ ಮಹಾನ್ ನಾಯಕರಾದ ಸರ್ದಾರ್ ವಲ್ಲಭಭಾಯ್ ಪಟೇಲ್, ಡಾ. ಬಿ.ಆರ್.ಅಂಬೇಡ್ಕರ್, ಸುಭಾಷ್‌ಚಂದ್ರ ಬೋಸ್, ಲಾಲ್ ಬಹದ್ದೂರ್ ಶಾಸ್ತ್ರಿ, ಪಿ.ವಿ.ನರಸಿಂಹ ರಾವ್ ಅವರ ಹೆಸರನ್ನೂ ನಿರ್ಲಕ್ಷಿಸಲಾಗಿದೆ.


ಹೆಸರು ಇರಿಸಿರುವ ಈ ಕಾಯಕದಲ್ಲಿ ಪಕ್ಷವು ಕಾಲಾನಂತರದಲ್ಲಿ ಯಾವುದು ಯುಕ್ತ, ಯಾವುದು ಯುಕ್ತವಲ್ಲ ಎಂಬ ಅರಿವನ್ನೂ ಕಳೆದುಕೊಂಡಿತು. ಹೆಸರು ಇರಿಸುವುದಕ್ಕೆ ತರ್ಕವೇ ಇರುತ್ತಿರಲಿಲ್ಲ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಫೆಲೊಶಿಪ್‌ಗೆ ರಾಜೀವ್ ಗಾಂಧಿ ಅವರ ಹೆಸರು ಇರಿಸಲಾಯಿತು; ಡಾ. ಅಂಬೇಡ್ಕರ್ ಅವರ ಹೆಸರನ್ನಲ್ಲ.

ಹೈದರಾಬಾದ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು ಎನ್.ಟಿ. ರಾಮರಾವ್ ಎಂದು ಇದ್ದಿದ್ದನ್ನು ರಾಜೀವ್ ಗಾಂಧಿ ಎಂದು ಬದಲಿಸಲಾಯಿತು. ಆಂಧ್ರಪ್ರದೇಶ ಹಾಗೂ ತೆಲಂಗಾಣದಲ್ಲಿ ಕಾಂಗ್ರೆಸ್ ಪಕ್ಷವು ಕುಸಿದಿರುವುದಕ್ಕೆ ಒಂದು ಕಾರಣ ಏನಿರಬಹುದು ಎಂಬುದರ ಚಿತ್ರಣವನ್ನು ಇದು ನಿಮಗೆ ನೀಡಬಹುದು. ಅದೃಷ್ಟವಶಾತ್, ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ಇದರಿಂದ ತಪ್ಪಿಸಿಕೊಂಡಿತು. ಈ ವಿಮಾನ ನಿಲ್ದಾಣಕ್ಕೆ ನಗರದ ನಿರ್ಮಾತೃ ಕೆಂಪೇಗೌಡರ ಹೆಸರನ್ನು ಇರಿಸಿದ್ದು ಸೂಕ್ತವಾಗಿದೆ.

ಕಾಂಗ್ರೆಸ್ ಪಕ್ಷವು ತೀರಾ ಅಸಹ್ಯಕರ ರೀತಿಯಲ್ಲಿ ಹೆಸರುಗಳನ್ನು ಇರಿಸಿತು. ತಪ್ಪು ಸರಿಪಡಿಸುವ ಕೆಲಸ ಈಗ ಶುರುವಾಗಿದ್ದು, ಇದು ವೇಗ ಪಡೆದುಕೊಳ್ಳಬೇಕಿದೆ. ಈ ಕೆಳಗಿನ ಕಾರಣಗಳಿಗಾಗಿ, ತಪ್ಪು ಸರಿಪಡಿಸುವ ಕೆಲಸ ಆಗಬೇಕಿದೆ: ಮೊದಲನೆಯದು, ಭಾರತವು ರಾಜನ ಆಡಳಿತ ಇರುವ ದೇಶವಲ್ಲ. ರಾಜನ ಆಡಳಿತದ ದೇಶಗಳಲ್ಲಿ ಮಾತ್ರ ಯೋಜನೆಗಳು, ಸಂಸ್ಥೆಗಳನ್ನು ರಾಜನ ಹೆಸರಿನಲ್ಲಿ ಅಥವಾ ಅವನ ಕುಟುಂಬದ ಸದಸ್ಯರ ಹೆಸರಿನಲ್ಲಿ ರೂಪಿಸಲಾಗುತ್ತದೆ. ಬ್ರಿಟನ್ನಿನಲ್ಲಿ ಇಂತಹ ಸಂಸ್ಥೆಗಳು ಹೇರಳವಾಗಿವೆ. ಭಾರತವು ಪ್ರಜಾತಂತ್ರ ಗಣರಾಜ್ಯ. ನಮ್ಮ ದೇಶದ ಮುಖ್ಯಸ್ಥರನ್ನು ನಾವು ಚುನಾಯಿಸುತ್ತೇವೆ.

ಎರಡನೆಯದಾಗಿ, ದೇಶದಲ್ಲಿ ಪ್ರಮುಖವಾದ ಎಲ್ಲವುಗಳಿಗೂ ಒಂದೇ ಕುಟುಂಬದವರ ಹೆಸರು ಇರಿಸುವುದರಿಂದ ಇತರರ ಕೊಡುಗೆಗಳನ್ನು ಗುರುತಿಸದಂತೆ ಆಗುತ್ತದೆ. ಎಲ್ಲವುಗಳಿಗೂ ತಮ್ಮ ಹೆಸರನ್ನೇ ಇರಿಸಬೇಕು ಎಂಬ ಬಯಕೆಯ ಕಾರಣದಿಂದಾಗಿ ನೆಹರೂ-ಗಾಂಧಿಗಳು ನಮ್ಮ ದೇಶವನ್ನು 'ಕೃತಘ್ನ'ವಾಗಿಸಿದ್ದಾರೆ. ನಾವು ದೇಶಕ್ಕಾಗಿ ದೊಡ್ಡ ತ್ಯಾಗ ಮಾಡಿರುವ ನಮ್ಮ ಶಿಕ್ಷಕರು, ಕೃಷಿಕರು, ವಿಜ್ಞಾನಿಗಳು, ವೈದ್ಯರು, ನ್ಯಾಯಮೂರ್ತಿಗಳು ಹಾಗೂ ಬೇರೆ ಬೇರೆ ರಂಗಗಳ ಹಿರಿಯರನ್ನು ಸರಿಯಾಗಿ ಗುರುತಿಸಿಲ್ಲ. ಮೂರನೆಯದಾಗಿ, ನಮ್ಮದು ವಿಶ್ವದ ಅತ್ಯಂತ ವೈವಿಧ್ಯಮಯ ದೇಶ; ಇಲ್ಲಿನ ಪ್ರತೀ ಸಮುದಾಯವೂ ದೇಶದ ಪ್ರಗತಿಗಾಗಿ ಕೆಲಸ ಮಾಡಿದೆ. ದೇಶದ ವಿವಿಧ ಸಂಸ್ಥೆಗಳಿಗೆ, ವಿವಿಧ ಸಮುದಾಯಗಳಿಗೆ ಸೇರಿದ ವ್ಯಕ್ತಿಗಳ ಹೆಸರು ಇರಿಸಿದರೆ, ನಾವು ನಮ್ಮ ಜನರಿಗೆ ನಮ್ಮ ಸಾಮಾಜಿಕ ವಾಸ್ತವವನ್ನು ನೆನಪಿಸಿಕೊಟ್ಟಂತೆ ಆಗುತ್ತದೆ, ಬೇರೆ ಬೇರೆ ಹಿನ್ನೆಲೆಗಳ ಜನರ ದೊಡ್ಡ ಕೊಡುಗೆಗಳನ್ನು ತಿಳಿಸಿದಂತೆ ಆಗುತ್ತದೆ.

ಹೆಸರುಗಳನ್ನು ಸರಿಪಡಿಸುವ ವಿಚಾರದಲ್ಲಿ ಹಿಂಜರಿಕೆ ಇರಬಾರದು. ಇದು ರಾಷ್ಟ್ರೀಯ ಭಾವೈಕ್ಯಕ್ಕೆ ಕೊಡುಗೆ ನೀಡುತ್ತದೆ.



ಚುರುಮುರಿ



ತಲೆಬ್ಯಾನೆ

● ಲಿಂಗರಾಜು ಡಿ.ಎಸ್.

'ಸಾ, ತಾಲಿಬಾನ್ ಅಫ್ಗಾನಿಸ್ತಾನವ ವಶ ಮಾಡಿಕ್ಯಂಡದಂತೆ? ಸಂಘಟನೆಗಳು ಅವುರುದ್ದೇ ಸೈನ್ಯ, ಸೈನಿಕರು, ಆಯುಧ ಮಡಿಕಂಡು ಜಗತ್ತಿಗೆಲ್ಲ ಇರುವಾರದ ಕಾಟ ಕೊಡ್ತಾ ತಲೆಬ್ಯಾನೆ ಆಗ್ಯವರಲ್ಲಾ ಸಾ!' ಅಂತ ತುರೇಮಣೆಗೆ ಕೇಳಿದೆ.

'ತಾಲಿಬಾನ್ ಅನ್ನದು ಮಂಡ್ಯೇದ ಕನ್ನಡ ಪದ ಅಂತ ಯಾರಿಗೂ ಗೊತ್ತಿಲ್ಲ ಕನ್ರೋ! ಇಲ್ಲಿಂದ ಅದು ಅಫ್ಗಾನಿಸ್ತಾನದ ಗಂಟ ಕಡದು ಹೋಗಿ ಈಗ ತಲೆಬ್ಯಾನೆ ಸುರುವಾಗ್ಯದೆ' ಅಂದ್ರು ತುರೇಮಣೆ. ನನಗೆ ಆಶ್ಚರ್ಯ ಆಯ್ತು.

'ಇದೇನ್ಸಾ ಹಿಂಗಂದೀರಿ? ತಾಲಿಬಾನ್ ಅಂದ್ರೆ ಪುಶ್ತೂನ್ ಭಾಷೇಲಿ ವಿದ್ಯಾರ್ಥಿಗಳು ಅಂತ ಅರ್ಥವಂತೆ! ನೀವು ನೋಡಿದ್ರೆ ನಮ್ಮ ಪದ ಅಂತೀರಿ? ನಿಮಗೆ ಯಾವುದೋ ಗಾಳಿ ಮೆಟ್ಟಿಕ್ಯಂಡದೆ. ಹದ್ದಿನಕಲ್ಲು ಹನುಮಂತರಾಯನ ಬೆಟ್ಟಕ್ಕೋಗಿ ಕೋಳಿ ಕೂದು ಕಲ್ಲು ಹುಯ್ಸಿಸಿದರೆ ಆಯಿತ್ತು!' ಅಂದೆ ಗಾಬರಿಯಲ್ಲಿ.

'ಬೊಡ್ಡಿಹೈದ್ನೆ, ಹಳೇ ಕಾಲದೇಲಿ ಮಂಡ್ಯಾದ ನೆರವಿ ಬಾಡೂಟಕ್ಕೆ ತಲೆಬಾನ ಅಂತಿದ್ರು. ತಲೆ ಅಂದ್ರೆ ಕುರಿ ತಲೆ, ಬಾನ ಅಂದ್ರೆ ಮಾಂಸ, ತಲೆಮಾಂಸದ ಬಾಡೂಟ ಅಂತ. ಬಾಡಿನೆಸರು ಕಂಡ ಕಡೇಲೆಲ್ಲಾ ಒಂದು ಸೊಟ್ಟಗ ಬಾಡು ತಿನ್ನೋನಿಗೆ ತಲೆಬಾನ್ ಅಂತ ಆಡಿಕ್ಯತಿದ್ರು. ವಿರೋಧಿಗಳ ತಲೆಕಡಿದು ಹಾಕೋ ಅಫ್ಗನ್ ಉಗ್ರಗಾಮಿಗಳಿಗೆ ತಾಲಿಬಾನ್ ಅಂತ ಅಡ್ಡೆಸರು ಬಂದದೆ!' ಅವರ ಮಾತು ನನಗೇನೂ ಅರ್ಥವಾಗ್ಲಿಲ್ಲ.

'ಸಾ, ತಲೆಮಾಂಸ ತಿನ್ನೋರೆಲ್ಲಾ ತಾಲಿಬಾನುಗಳೆ ಅಂತೀರಾ? ಇವರೆಲ್ಲಾ ಎಲ್ಲೆಲ್ಲಿ ಇರತರೆ?' ನಲ್ಲಿಮೂಳೆ ನೆಕ್ಕತಾ ನನ್ನ ಅನುಮಾನ ಹೇಳಿದೆ.

'ನೋಡ್ಲಾ, ಸಂಬಳಕ್ಕೆ ಸರಿಯಾಗಿ ಕ್ಯಾಮೆ ಮಾಡದಿರೋ ಅಧಿಕಾರಿಗಳು, ಬ್ಯಾಳೆ ಮಾತಾಡಿಕೊಂಡು ಜನಾಶೀರ್ವಾದ, ಕ್ಷೇತ್ರದ ಭೇಟಿ ಅಂತ ಕಳ್ಳಬಿದ್ದಿರೋ ಮಂತ್ರಿಗಳು, ಪ್ರಚಾರಕ್ಕೋಸ್ಕರ ನಾಲಗೆ ತೆವಲು ತೀರಿಸಿಕೊಳ್ಳೋ ರಾಜಕಾರಣಿಗಳು, ಅತೃಪ್ತರು, ಎಲ್ಲದಕ್ಕೂ ಅರ್ಥ ಹುಡುಕೋ ನಿನ್ನಂತಾ ಕೇಮೆ ಇಲ್ಲೋರು ಎಲ್ಲಾರೂ ತಾಲಿಬಾನೀಯರೇ!' ಅಂದಾಗ ಮೂಳೆ ಗಂಟ್ಲಗೆ ಸಿಗಾಕ್ಯಂಡು ವತ್ತರಿಸಿಕೊಂಡು ಬಂದ ಕೆಮ್ಮು ತಡಿನಾರ್ದೆ ಅಫ್ಗಾನಿ ಭಾಷೆಯಲ್ಲಿ ಕೆಮ್ಮಿದೆ.

ಸಂಗತ

ಪರಂಪರೆಯ ಭಂಡಾರಕ್ಕೆ ಕೀಲಿಕೈ

ಸಂಸ್ಕೃತದ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳದಿದ್ದರೆ ಖಂಡಿತ ಆತ್ಮವಂಚನೆಯಾಗುತ್ತದೆ

● ಯೋಗಾನಂದ

ಸಂಸ್ಕೃತವು ಗಣಕೀಕರಣಕ್ಕೆ, ಕೃತಕ ಬುದ್ಧಿಮತ್ತೆಗೆ ಹೇಳಿಮಾಡಿಸಿದ ಭಾಷೆ ಎಂದು ಅಮೆರಿಕದ ನಾಸಾ ಸಂಸ್ಥೆ ಒಕ್ಕೊರಲಿನಿಂದ ಅಭಿಪ್ರಾಯಪಟ್ಟಿದೆ. ಸಂಸ್ಕೃತ ಎಂದರೇನೆ ಸಂಸ್ಕರಿಸಿದ್ದು, ಮಾಗಿದ್ದು ಎಂದರ್ಥ. ಸಂಸ್ಕೃತ ವ್ಯಾಕರಣವು ಸಂದರ್ಭ, ಪರಿಕಲ್ಪನೆ, ಅರ್ಥ, ಭಾವಗಳಿಗೆ ತಕ್ಕಂತೆ ಅಸಂಖ್ಯ ಪದಗಳನ್ನು ಸೃಷ್ಟಿಸಬಹುದಾದಷ್ಟು ಸಮರ್ಥವಾಗಿದೆ. ಸಂಸ್ಕೃತದಲ್ಲಿ ಶಬ್ದಾರ್ಥ ಸಂಬಂಧಗಳ ರಚನೆ ವೈಜ್ಞಾನಿಕ. ನೀರಿಗೆ ಸಂಸ್ಕೃತದಲ್ಲಿ 62 ಪದಗಳಿವೆ. ಮಳೆಗೆ 250, ಭೂಮಿಗೆ 65.

ಒಂದು ವಾಕ್ಯ ಹೇಳುವುದನ್ನು ಒಂದು ಪದ ಹೇಳುತ್ತದೆ. ಬರೆದಂತೆ ಮಾತು, ನಿಯಮದಂತೆ ನಾಜೂಕಿನ ಪದ ವಿಭಜನೆ ಸಂಸ್ಕೃತದಲ್ಲಿ ಮಾತ್ರ ಸಾಧ್ಯ. ಹಾಗಾಗಿಯೇ ಸಹಸ್ರಾರು ವರ್ಷಗಳಿಂದ ಸಂಸ್ಕೃತ ಭಾಷೆ ಬದಲಾಗದೆ ಉಳಿದಿದೆ. ಅಮೆರಿಕ, ಜರ್ಮನಿ, ಬ್ರಿಟನ್, ಆಸ್ಟ್ರೇಲಿಯಾ, ಥಾಯ್ಲೆಂಡ್ ಮುಂತಾದ ದೇಶಗಳಲ್ಲಿ ಸಂಸ್ಕೃತ ವಿಜೃಂಭಿಸಿದೆ. ವಿದೇಶಿ ಶಾಲೆಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಕಲಿಕೆ, ಅಧ್ಯಾಪನ, ಸಂಶೋಧನೆಗಳು ನಿರಾತಂಕ. ಆದರೆ ಅದರ ಜನ್ಮಸ್ಥಾನವಾದ ಭಾರತದಲ್ಲಿ ಸಂಸ್ಕೃತಕ್ಕೆ 'ಮೃತ ಭಾಷೆ' ಎಂಬ ವಿಶೇಷಣ!

ಬ್ಯಾಂಕಾಕ್‌ನಲ್ಲಿ 2015ರಲ್ಲಿ 'ವಿಶ್ವ ಸಂಸ್ಕೃತ ಸಮ್ಮೇಳನ' ನೆರವೇರಿತು. ಉತ್ತರ ಸಿರಿಯಾದ ಮಿಟ್ಟಾನಿ ಎಂಬ ರಾಜವಂಶಸ್ಥರು ಕ್ರಿ.ಪೂ. 1500-1350ರ ಅವಧಿಯಲ್ಲಿ ಋಗ್ವೇದದ ಭಾಷೆ ಹೋಲುವ ಶ್ಲೋಕಗಳನ್ನು ಶಾಸನಗಳಲ್ಲಿ ದಾಖಲಿಸಿದ್ದಾರೆ. ಇಂಥ ಅನುರಣಿಸುವ ಭಾಷೆಗೆ ಮಾರುಹೋದ ವಿದೇಶಿ ವಿದ್ವಾಂಸರ ಸಾಲು ಸಾಲೇ ಇದೆ. ಜೆ.ಗೋಥೆ, ಆರ್ಥರ್ ವಿಲಿಯಂ ರೈಡರ್, ಮ್ಯಾಕ್ಸ್‌ಮುಲ್ಲರ್, ಜಾಕೊಬಿ ಸಂಸ್ಕೃತ ಸಾಹಿತ್ಯವನ್ನು ಮನನ ಮಾಡಿಕೊಂಡಿದ್ದಲ್ಲದೆ ಅನುವಾದ, ವ್ಯಾಖ್ಯಾನ, ವಿಮರ್ಶೆಯ ಕೈಂಕರ್ಯದಲ್ಲಿ ತನ್ಮಯರಾದರೆಂದರೆ ಇನ್ನು ಹೇಳುವುದೇನಿದೆ?

ಸುಮಾರು 2600 ವರ್ಷಗಳ ಹಿಂದೆ ಮಹರ್ಷಿ ಕಣಾದ ತನ್ನ 'ವೈಶೇಷಿಕ ಸೂತ್ರ' ಕೃತಿಯಲ್ಲಿ ಗುರುತ್ವ ಸಿದ್ಧಾಂತವನ್ನು ಸಾದರಪಡಿಸಿದ್ದಾನೆ. 'ಗುರುತ್ವ ಪ್ರಯತ್ನ ಸಂಯೋಗನಾಮ್ ಉತ್ಪ್ರೇಕ್ಷಣಾಮ್'- ವಸ್ತು ಮೇಲಕ್ಕೆ ಎಸೆದಾಗ ಗುರುತ್ವ ಬಲ ಮತ್ತು ಎಸೆತದ ಬಲದ ಫಲಿತಾಂಶವೆ ಅದರ ಮೇಲ್ಮುಖ ಬಲ. ಅಂದರೆ ನ್ಯೂಟನ್‌ಗೆ ಸುಮಾರು 3000 ವರ್ಷಗಳ ಮೊದಲೇ ಭಾರತದಲ್ಲಿ ಗುರುತ್ವಾಕರ್ಷಣ ಸಿದ್ಧಾಂತ ಮನುಷ್ಯನ ಪ್ರತಿಭೆಗೆ ಒಲಿದಿತ್ತೇ? ಇಂತಹ ನಿದರ್ಶನಗಳು ಹಲವು. ಯಾರೇ ಸಂಸ್ಕೃತ ಬಹು ಕಠಿಣ, ಕಷ್ಟ ಎಂದರೆ ಅವರಾಗಲೇ ಮೂರು ಸಂಸ್ಕೃತ ಪದಗಳನ್ನು ಬಳಸಿ ಬಿಟ್ಟಿರುತ್ತಾರೆ! ಸಂಸ್ಕೃತ ಪದಗಳಿಲ್ಲದ ಭಾಷೆಗಳಿಲ್ಲ.

ಪಶ್ಚಿಮದಿಂದ ಬರುವ ಜ್ಞಾನದ್ರವ್ಯ ಇಂಗ್ಲಿಷಿನಲ್ಲಿರುತ್ತದೆ ಎನ್ನುವ ಕಾರಣಕ್ಕೆ ನಮ್ಮ ಮಕ್ಕಳಿಗೆ ಇಂಗ್ಲಿಷ್ ಭರದಿಂದ ಕಲಿಸುತ್ತೇವೆ. ಸಂಸ್ಕೃತದಲ್ಲಿ ಸಮಾಜ ವಿಜ್ಞಾನ, ಇತಿಹಾಸ, ಭೂಗೋಳ, ಗಣಿತ, ವೈದ್ಯಕೀಯ, ವಾಸ್ತು, ತರ್ಕ, ಅರ್ಥಶಾಸ್ತ್ರ, ರಾಜಕೀಯ ವಿಜ್ಞಾನ, ಖಗೋಳ ವಿಜ್ಞಾನ, ಲೋಹವಿಜ್ಞಾನ, ಕೃಷಿ- ಹೀಗೆ ಎಲ್ಲ ಅರಿವಿನ ಶಾಖೆಗಳೂ ಶತಮಾನಗಳಿಂದಲೂ ಇವೆ.

ನಮ್ಮ ಪ್ರಾಚೀನರ ಜ್ಞಾನ ಭಂಡಾರದ ಕೀಲಿಕೈ ಸಂಸ್ಕೃತ. ಅದು ಒಂದು ವರ್ಗದ, ಮತದ ಅಥವಾ ಒಂದು ಧರ್ಮದ ಭಾಷೆಯಲ್ಲ. ತಂತ್ರ ಮಂತ್ರೋಚ್ಚಾರಗಳಿಗೆ ರೂಪಿಸಿಕೊಂಡ ಭಾಷೆಯಾಗಲಿ ಅಲ್ಲ. ಸಂಸ್ಕೃತ ಯಾವುದೇ ಆಹಾರ ಪದ್ಧತಿಯನ್ನು ನಿರ್ದೇಶಿಸುವುದಿಲ್ಲ. 'ಭಾರತದಲ್ಲಿ ನಿಧಿಯುಂಟೆ ಅಂತ ಯಾರಾದರೂ ಪ್ರಶ್ನಿಸಿದರೆ ನಾನಂತೂ ಇದೆ, ಅದು ಸಂಸ್ಕೃತ ಭಾಷೆಯೆಂದು ಉತ್ತರಿಸುವೆ' ಎನ್ನುತ್ತಿದ್ದರು ಪ್ರಧಾನಿಯಾಗಿದ್ದ ನೆಹರೂ.

ಭಾಷೆಗಳು ಸಮಾಜವನ್ನು ಒಗ್ಗೂಡಿಸುತ್ತವೆಯೆ ವಿನಾ ವಿಭಜಿಸುವುದಿಲ್ಲ. ಸಂಸ್ಕೃತದ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳದಿದ್ದರೆ ಖಂಡಿತ ಆತ್ಮವಂಚನೆಯಾಗುತ್ತದೆ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹೆಚ್ಚಿನ ಶೇಕಡಾವಾರು ಅಂಕ ಲಭಿಸುವುದೆಂದು ಸಂಸ್ಕೃತವನ್ನು ಐಚ್ಛಿಕ ಭಾಷೆಯಾಗಿ ಆಯ್ಕೆ ಮಾಡಿಕೊಳ್ಳಬಾರದು. ಶೈಕ್ಷಣಿಕ ವಲಯದಲ್ಲಿ ಅಭ್ಯಾಸ ದೃಷ್ಟಿಯಿಂದ ಸಂಸ್ಕೃತವನ್ನು ನೋಡದಿದ್ದರೆ ಸಂಸ್ಕೃತದಲ್ಲಿ ಲೋಕಾಭಿರಾಮ, ಸಂವಾದ ನಿರೀಕ್ಷಿಸುವುದಾದರೂ ಹೇಗೆ?



ನಮ್ಮ ಶಾಲಾ ಕಾಲೇಜುಗಳಲ್ಲಿ ಸಂಸ್ಕೃತದ ಬೋಧನೆ ಸಂಸ್ಕೃತದಲ್ಲೇ ಆಗಬೇಕು. ಮೊದಮೊದಲು ಮಕ್ಕಳಿಗೆ ತ್ರಾಸವಾದರೂ ಕ್ರಮೇಣ ಹೊಂದಿಕೊಳ್ಳುತ್ತಾರೆ. ಕರ್ನಾಟಕದ ಮತ್ತೂರು, ಮಧ್ಯಪ್ರದೇಶದ ಜಿಹಿರಿ, ಬಾಗುವರ್, ಒಡಿಶಾದ ಸಸಾನ ಮತ್ತು ರಾಜಸ್ಥಾನದ ಗನೋರ- ಇವು ಜನ ಸಂಸ್ಕೃತದಲ್ಲಿ ಮಾತನಾಡುವ ಗ್ರಾಮಗಳು.

ಭಾರತದಲ್ಲಿ ಸಂಸ್ಕೃತ ಮಾತನಾಡುವವರ ಸಂಖ್ಯೆ ಶೇಕಡ 0.05ಕ್ಕೂ ಕಡಿಮೆ. ಸಂಕಲ್ಪಿಸಿದರೆ ಎರಡೇ ವರ್ಷಗಳಲ್ಲಿ ಸಂಸ್ಕೃತ ಕಲಿತು ನಿರರ್ಗಳವಾಗಿ ಮಾತನಾಡಬಹುದು. ಅದೇ ಇಂಗ್ಲಿಷ್‌ಗೆ 8-10 ವರ್ಷಗಳೇ ಬೇಕು. ಪೋಷಕರು ತಮ್ಮ ಮಕ್ಕಳನ್ನು ಸಂಸ್ಕೃತ ಕಲಿಯಲು ಉತ್ತೇಜಿಸಬೇಕು. ಇದರಿಂದ ಏಕಾಗ್ರತೆ, ಧ್ವನಿ ಶುದ್ಧಿ, ಸಹನಶೀಲತೆ ಮಕ್ಕಳಲ್ಲಿ ಪ್ರಾಪ್ತವಾಗುತ್ತದೆ. ದೆಹಲಿ ದೂರದರ್ಶನದಿಂದ 'ವಾರ್ತಾ ವಳಿ' ಸಂಸ್ಕೃತ ಸಾಪ್ತಾಹಿಕ ವಾರ್ತೆ ಪ್ರಸಾರವಾಗುತ್ತದೆ, 'ಸುಧರ್ಮಾ' ಸಂಸ್ಕೃತ ದೈನಿಕ ಪತ್ರಿಕೆ ಮೈಸೂರಿನಿಂದ ಪ್ರಕಟವಾಗುತ್ತದೆ. 'ಸಂಸ್ಕೃತ ಭಾರತಿ' ಎಂಬ ಅಂತರರಾಷ್ಟ್ರೀಯ ಸಂಸ್ಥೆಯಂತೂ ಅವಿರತವಾಗಿ ಸಂಸ್ಕೃತವನ್ನು ಜನಪ್ರಿಯಗೊಳಿಸಲು ಬಹುಮುಖವಾಗಿ ಶ್ರಮಿಸುತ್ತಿದೆ. ವಿಶ್ವ ಸಂಸ್ಕೃತ ದಿನವನ್ನು ಭಾನುವಾರವಷ್ಟೇ ಆಚರಿಸಿದ್ದೇವೆ. ಇದೇನೆ ಇರಲಿ ಅತ್ಯುತ್ಸಾಹದಿಂದ ನಾವು ಸಂಸ್ಕೃತ ಭಾಷೆಯನ್ನು ಆಪ್ತವಾಗಿಸಿಕೊಳ್ಳಬಹುದು.

ಹೌದು, ಕಣ್ತೆರೆಸುವ ಅರಿವುಗಳ ಆಗರವಾದ ಒಂದು ಭಾಷೆ ಪ್ರಾಚೀನವೋ ಅರ್ವಾಚೀನವೋ ಅದರ ಶ್ರೇಷ್ಠತೆಯೇ ನಮಗೆ ಲಾಭ ಅಲ್ಲವೇ?

ವಾಚಕರ ವಾಣಿ

ಮಸೂದೆಗಳ ಮೇಲಿನ ಚರ್ಚೆ: ಇರಲಿ ದೂರಾಲೋಚನೆ

ಹಿಂದೆ ಸಂಸತ್ತಿನಲ್ಲಿ ಸಂವಿಧಾನದ ವಿಧಿ-30ರ ಮೇಲಿನ ಕಲಮುವಾರು ಚರ್ಚೆಯಲ್ಲಿ, ಸಂಸದ ತ್ಯಾಗಿ ಅವರು 'ಶ್ರಮಿಸುವುದು' ಎಂಬ ಶಬ್ದವನ್ನು ಸಂವಿಧಾನದಿಂದ ತೆಗೆದುಹಾಕಲು ವಿನಂತಿಸಿರುತ್ತಾರೆ. ಡಾ. ಬಿ.ಆರ್.ಅಂಬೇಡ್ಕರ್ ಅವರು 'ಈ ಸಂವಿಧಾನದಲ್ಲಿ ಬರುವ 'ಶ್ರಮಿಸುವುದು' ಎಂಬ ಪದ ನನ್ನ ಅಭಿಮತದಲ್ಲಿ ಬಹಳ ಮಹತ್ವದ್ದಾಗಿರುತ್ತದೆ. ಈ ಶಬ್ದವನ್ನು ಉಪಯೋಗಿಸುವಲ್ಲಿ ಇದರ ಹಿಂದೆ ಇದ್ದ ನಮ್ಮ ಉದ್ದೇಶವೇನೆಂದರೆ, ಒಂದು ವೇಳೆ ನಿರ್ದೇಶಿತ ತತ್ವಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಪರಿಸ್ಥಿತಿಗಳು ಪ್ರತಿಕೂಲವಾಗಿದ್ದರೂ ಮತ್ತು ಪರಿಸ್ಥಿತಿ ಕಠಿಣ ಹಾಗೂ ಪ್ರತಿಕೂಲವಾಗಿದ್ದರೂ ಸರ್ಕಾರ ಅವುಗಳನ್ನು ಅನುಷ್ಠಾನದಲ್ಲಿ ತರಲು ಶ್ರಮಿಸಬೇಕು. ಆದುದರಿಂದಲೇ ನಾವು 'ಶ್ರಮಿಸಬೇಕು' ಎಂಬ ಪದವನ್ನು ಉಪಯೋಗಿಸಿದ್ದೇವೆ. ಅನ್ಯಥಾ ಯಾವುದೇ ಸರ್ಕಾರ, ನಾನೇನು ಮಾಡಲಿ ಪರಿಸ್ಥಿತಿ ತುಂಬಾ ಕೆಟ್ಟದೆ ಮತ್ತು ಹಣಕಾಸಿನ ತೊಂದರೆ ಬಹಳ ಇದೆ ಎಂದು ಹೇಳಲಿಕ್ಕೆ ಬರುತ್ತದೆ. ನನ್ನ ಗೆಳೆಯ 'ಶ್ರಮಿಸಬೇಕು' ಎಂಬ ಪದವನ್ನು ಇಂಥ ತುಂಬಾ ಮಹತ್ವದ ಸನ್ನಿವೇಶದಲ್ಲಿ ನೋಡುತ್ತಾರೆಂದು ಮತ್ತು ಇದನ್ನು ತೆಗೆದುಹಾಕುವುದು ಬಹಳ ತಪ್ಪಾಗುತ್ತದೆ ಎಂದು ಭಾವಿಸುತ್ತೇನೆ' (ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು ಸಂಪುಟ 13 ಭಾಗ-2).

ಚರ್ಚೆ ಎಷ್ಟು ಅರ್ಥಗರ್ಭಿತವಾಗಿದೆ ಎಂದರೆ, ಸಂವಿಧಾನ ಜಾರಿಯಾಗಿ ಎಪ್ಪತ್ತನಾಲ್ಕು ವರ್ಷಗಳ ನಂತರ, ಕೋವಿಡ್‌ನಂತಹ ವಿಪತ್ತುಗಳು ಎದುರಾದಾಗ ಸರ್ಕಾರ ಹೇಗೆ ದೇಶದ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲೇಬೇಕು ಎಂಬ ದೂರಾಲೋಚನೆ ಗೋಚರಿಸುತ್ತದೆ. ಆದರೆ ಇಂದು ತದ್ವಿರುದ್ಧ. ಹೆಚ್ಚಿನ ಮಸೂದೆಗಳು ಯಾವುದೇ ಚರ್ಚೆ ಇಲ್ಲದೆ ಅಂಗೀಕಾರವಾಗುತ್ತಿವೆ. ಸರ್ಕಾರವು ಹಿರಿಯರ ಮಾರ್ಗದಲ್ಲಿ ಸಾಗಿದರೆ ದೇಶವು ಭವಿಷ್ಯದಲ್ಲಿ ಸುಭಿಕ್ಷವಾಗುತ್ತದೆ.

ಗಣೇಶ ಆರ್., ಹಾಸನ

ಗುಂಡು!

ಖುಷಿಗೆ ಗುಂಡು
ಹಾರಿಸಬಹುದು!;
(ತಪ್ಪೇನು?)
ಗುಂಡು ಹಾಕಲೂಬಹುದು;
ಗುಂಡು ಹಾಕಿ, ಗುಂಡು
ಹಾರಿಸುವುದು ಮತ್ತೂ ಮೇಲು!
(ಅಂದಹಾಗೆ, ಮೇಲು,
ಫೀಮೇಲುಗಳ ಪ್ರಶ್ನೆ
ಗುಂಡಿನ ವಿಷಯದಲ್ಲಿಲ್ಲ).

ಸಿ.ಪಿ.ಕೆ., ಮೈಸೂರು

ಏನನ್ನಾದರೂ ಸೃಷ್ಟಿಸಬಹುದು, ಆದರೆ...

'ಕೃಷಿ ಭೂಮಿ ಮತ್ತು ನಿವೇಶನ ಹವಣಿಕೆ' ಕುರಿತ ರಾಜಕುಮಾರ ಕುಲಕರ್ಣಿ ಅವರ ಲೇಖನ (ಸಂಗತ, ಆ. 23) ನಮ್ಮನ್ನು ಚಿಂತನೆಗೆ ಹಚ್ಚುವಂತಿದೆ. ನಾವು ಬಟ್ಟೆಗಳನ್ನು ಉತ್ಪಾದಿಸಬಹುದು, ಕೃತಕ ಆಹಾರ ಪದಾರ್ಥಗಳನ್ನು ತಯಾರಿಸಬಹುದು ಮತ್ತು ನಮ್ಮ ಬುದ್ಧಿಗೆ ಕಸರತ್ತು ಒಡ್ಡುವ ಏನನ್ನಾದರೂ ಸೃಷ್ಟಿಸಬಹುದು. ಆದರೆ ಕೃಷಿ ಭೂಮಿಯನ್ನು ಮಾತ್ರ ಸೃಷ್ಟಿಸಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರ್ಥ ಮಾಡಿಕೊಂಡರೆ ಸಾಕು.

ಡಾ. ಕೆ.ಎಸ್.ಗಂಗಾಧರ, ಶಿವಮೊಗ್ಗ

ರಾಜ್ಯಪಾಲರ ನೇಮಕ: ಬದಲಾಗಲಿ ಮಾನದಂಡ

ರಾಜ್ಯಪಾಲರ ಸ್ಥಾನ ಘನತೆವೆತ್ತ ಹುದ್ದೆಯಾಗಿದ್ದು, ಇವರು ರಾಜ್ಯ ಕಾರ್ಯಾಂಗದ ಮುಖ್ಯಸ್ಥರು ಹಾಗೂ ರಾಜ್ಯ ಶಾಸಕಾಂಗದ ಅವಿಭಾಜ್ಯ ಅಂಗವಾಗಿರುತ್ತಾರೆ. ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಸ್ವಾಯತ್ತತೆ ನೀಡಿರುವಾಗ ಒಟ್ಟಾರೆ ರಾಜ್ಯ ಸರ್ಕಾರದ ಸಮಗ್ರ ಆಡಳಿತಾತ್ಮಕ ಚಟುವಟಿಕೆಗಳಿಗೆ ರಾಜ್ಯಪಾಲರು ಮೇಲ್ವಿಚಾರಕರಾಗಿರುತ್ತಾರೆ. ಇಷ್ಟೆಲ್ಲಾ ಜವಾಬ್ದಾರಿಗಳನ್ನು ಹೊಂದಿರುವ ಇವರು ಯಾವುದೇ ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ರಾಗ-ದ್ವೇಷಗಳಿಂದ ಹೊರತಾದ ವ್ಯಕ್ತಿತ್ವ ಹೊಂದಿರುವ ರಾಜಕೀಯ ನಿಪುಣರಾಗಿ ಇರಬೇಕಾಗುತ್ತದೆ.

ಆದರೆ ಸಾಮಾನ್ಯವಾಗಿ ರಾಜ್ಯಪಾಲರ ನೇಮಕಾತಿಗಳಲ್ಲಿ ಸಾಂವಿಧಾನಿಕ ಹುದ್ದೆಯ ಮೂಲ ಆಶಯಗಳನ್ನು ಬದಿಗೊತ್ತಿ, ಕೇವಲ ಏಕಪಕ್ಷೀಯ ನೀತಿ ಅನುಸರಿಸುವುದು ಗೋಚರಿಸುತ್ತದೆ. ಪ್ರಸ್ತುತ ದೇಶದ ಬಹುತೇಕ ರಾಜ್ಯಗಳಲ್ಲಿರುವ ರಾಜ್ಯಪಾಲರುಗಳು ಒಂದೇ ರಾಜಕೀಯ ಪಕ್ಷದ ಹಿರಿಯ ನಾಯಕರಾಗಿರುವುದು ಇದಕ್ಕೊಂದು ಉದಾಹರಣೆ. ಈ ತರಹದ ನೇಮಕಾತಿಗಳು ಒಕ್ಕೂಟ ವ್ಯವಸ್ಥೆಯ ವೈಫಲ್ಯಕ್ಕೆ ದಾರಿ ಮಾಡಿಕೊಡುತ್ತವೆ. ಇಂತಹ ಏಕಪಕ್ಷೀಯ ನೇಮಕಾತಿಗಳು ಇಂದು ನಿನ್ನೆಯವಲ್ಲ, ಹಿಂದಿನಿಂದಲೂ ಕೇಂದ್ರದ ಅಧಿಕಾರಾರೂಢ ರಾಜಕೀಯ ಪಕ್ಷಗಳು ಸಾಂವಿಧಾನಿಕ ಹುದ್ದೆಗಳಿಗೆ ತಮ್ಮ ನಿಷ್ಠರನ್ನು ನೇಮಿಸುತ್ತಾ ಬಂದಿವೆ. ರಾಜಕೀಯ ಪಕ್ಷಗಳ ಈ ಸಂಸ್ಕೃತಿ ಬದಲಾಗಬೇಕಿದೆ.

ಅಂಕಿತ್ ಜಿ.ಎನ್., ತೀರ್ಥಹಳ್ಳಿ

ಅಸ್ಥಿ ಮಡಕೆಯೊಳಗೆ ಜೀವ ವಸ್ತಿ!

ನಮ್ಮೂರ ಜೀವನಾಡಿ ತುಂಗಭದ್ರೆಯನ್ನು ನೋಡಲು ಹೋದಾಗ, ದಡದಲ್ಲಿ ಅಸ್ಥಿ ಮಡಕೆಯೊಂದು ಅನಾಥವಾಗಿ ಬಿದ್ದಿತ್ತು. ಕೆಲವರು ಇಂತಹ ಮಡಕೆಗಳನ್ನು ಕಂಡೊಡನೆ ಕೆರಳಿ, ಅನಿಷ್ಟವೆಂದು ತಿಳಿದು ಒಡೆಯುತ್ತಾರೆ. ಆದರೆ ಅದರ ಹರಿತ ಚೂರುಗಳು ಎಷ್ಟೋ ಬಾರಿ ಚಪ್ಪಲಿ ಮೆಟ್ಟಿರದ ಕೃಷಿ ಕಾರ್ಮಿಕರಿಗೆ ಮತ್ತು ಇತರರಿಗೆ ನೆಟ್ಟು ಗಾಯಗೊಳಿಸುತ್ತವೆ. ಈ ಅಪಾಯವನ್ನು ತಪ್ಪಿಸಲು, ಅದನ್ನು ತೆಗೆದುಕೊಂಡು ದೂರದಲ್ಲಿದ್ದ ಮುಳ್ಳುಕಂಟಿಯೊಳಗೆ ಸಿಲುಕಿಸಿ ಬಂದೆ. ಮುಂದೆ ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರಿಡಲು ಅನುಕೂಲವಾಗಬಹುದೆಂದು ಯೋಚಿಸಿದ್ದೆ. ಕೆಲ ದಿನಗಳ ನಂತರ ಅದೇ ದಾರಿಯಲ್ಲಿ ನಡೆಯುತ್ತಿರುವಾಗ ಕುತೂಹಲಕ್ಕೆ ಮಡಕೆಯೊಳಗೆ ಇಣುಕಿದೆ. ಚಿಟ್ಟು ಮಡಿವಾಳ (Indian Robin) ಹಕ್ಕಿಯೊಂದು ಅದರಲ್ಲಿ ಗೂಡು ಕಟ್ಟುತ್ತಿತ್ತು! ದಿನಗಳುರುಳಿದಂತೆ ಮೊಟ್ಟೆಗಳೊಡೆದು ಮರಿಗಳು ಬೆಳೆದು ಬಾನಲ್ಲಿ ತೇಲಿಹೋಗುವುದನ್ನು ಮನಸಾರೆ ಕಣ್ತುಂಬಿಕೊಂಡೆ.

ಹೇಗಿದೆ ನೋಡಿ ಪ್ರಕೃತಿಯ ಶಕ್ತಿ. ಮನುಷ್ಯನಿರ್ಮಿತ ಸಮಾಜದಲ್ಲಿ ಯಾವುದನ್ನು ಅನಿಷ್ಟವೆಂದು ತಿಳಿಯುತ್ತೇವೆಯೋ ಅದನ್ನು ನಿಸರ್ಗ ಅಗೌರವಿಸದೇ ಸದುಪಯೋಗಪಡಿಸಿಕೊಂಡಿದೆ. ಬದಲಾದ ನೈಸರ್ಗಿಕ ವ್ಯವಸ್ಥೆಯಲ್ಲಿ ಬದುಕುಳಿಯಲು ಕ್ಷುದ್ರ ಜೀವಿಯೊಂದು ಇಷ್ಟೊಂದು ಬದಲಾವಣೆ ಮಾಡಿಕೊಂಡಿದೆ. ಆದರೆ ನಾವಿನ್ನೂ ಅದೇ ಹಳೆಯ ಮೌಢ್ಯದ ಜಾಡ್ಯಕ್ಕೆ ಜೋತುಬಿದ್ದಿದ್ದೇವೆ. ನಿಸರ್ಗವು ಅಸ್ಥಿ ತುಂಬಿದ್ದ ಮಡಕೆಯೊಳಗೆ ಜೀವಸಂಚಾರ ಮಾಡಿಸಿ ಸಾವಿಗೂ ಘನತೆ-ಗೌರವ ತಂದುಕೊಟ್ಟಿದೆ. ಇನ್ನಾದರೂ ನಾವು ಬದಲಾಗೋಣ, ವೈಚಾರಿಕತೆ ಬೆಳೆಸಿಕೊಳ್ಳೋಣ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಪ್ಯಾರಾಲಿಂಪಿಕ್ ಇಲ್ಲಿ ಎಲ್ಲರೂ ವಿಜೇತರೇ!



1960	ಆರಂಭವಾದ ವರ್ಷ, ಸ್ಥಳ: ರೋಮ್

*ಒಂದೇ ಒಲಿಂಪಿಕ್ಸ್‌ನಲ್ಲಿ ಅತಿ ಹೆಚ್ಚು ಪದಕ ಗೆದ್ದವರು: ಇಟಲಿಯ ಮರಿಯಾ ಸ್ಕಟ್ಟ (1960ರ ರೋಮ್ ಕೂಟದಲ್ಲಿ 9 ಚಿನ್ನ ಸೇರಿ 11 ಪದಕಗಳು)

2016ರ ರಿಯೊ ಡಿ ಜನೈರೊ ಕೂಟದಲ್ಲಿ ಹೆಚ್ಚು ಪದಕ ಗೆದ್ದ ದೇಶಗಳು

ದೇಶ	ಚಿನ್ನ	ಬೆಳ್ಳಿ	ಕಂಚು
ಚೀನಾ	107	81	51
ಬ್ರಿಟನ್	64	39	44
ಉಕ್ರೇನ್	41	37	39

ಭಾರತದ ಇದುವರೆಗಿನ ಸಾಧನೆ

1968	ಮೊದಲ ಬಾರಿ ಸ್ಪರ್ಧೆ, ಸ್ಥಳ: ಟೆಲ್ ಅವಿವ್
12	ಇದುವರೆಗೆ ಜಯಿಸಿದ ಪದಕಗಳು (ತಲಾ ನಾಲ್ಕು ಚಿನ್ನ, ಬೆಳ್ಳಿ ಮತ್ತು ಕಂಚು)

ಪದಕ ಗೆದ್ದ ಭಾರತದ ಸ್ಪರ್ಧಿಗಳು

ಸ್ಪರ್ಧಿ	ಕೂಟ	ವಿಭಾಗ	ಪದಕ
ಮುರಳಿಕಾಂತ್ ಪೇಟ್ಕರ್	1972, ಹೈಡಲ್‌ಬರ್ಗ್	50 ಮೀ. ಫ್ರೀಸ್ಟೈಲ್ ಈಜು	ಚಿನ್ನ
ಭೀಮರಾವ್ ಕೇಸರಕರ್	1984, ಸ್ಟೋಕ್ ಮ್ಯಾಂಡ್‌ವಿಲ್ಲೆ	ಜಾವೆಲಿನ್ ಥ್ರೊ	ಬೆಳ್ಳಿ
ಜೋಗಿಂದರ್ ಸಿಂಗ್ ಬೇಡಿ	1984, ಸ್ಟೋಕ್ ಮ್ಯಾಂಡ್‌ವಿಲ್ಲೆ	ಶಾಟ್‌ಪಟ್, ಜಾವೆಲಿನ್ ಥ್ರೊ, ಡಿಸ್ಕಸ್ ಥ್ರೊ	1 ಬೆಳ್ಳಿ, 2 ಕಂಚು
ದೇವೇಂದ್ರ ಜಜಾರಿಯ	2004, ಅಥೆನ್ಸ್	ಜಾವೆಲಿನ್ ಥ್ರೊ	ಚಿನ್ನ
ರಾಜಿಂದರ್ ಸಿಂಗ್ ರಹೇಲು	2004, ಅಥೆನ್ಸ್	ಪವರ್‌ಲಿಫ್ಟಿಂಗ್	ಚಿನ್ನ
ಗಿರೀಶ್ ನಾಗರಾಜೇಗೌಡ	2012, ಲಂಡನ್	ಪುರುಷರ ಹೈಜಂಪ್	ಬೆಳ್ಳಿ
ಮರಿಯಪ್ಪನ್ ತಂಗವೇಲು	2016, ರಿಯೊ	ಪುರುಷರ ಹೈಜಂಪ್	ಚಿನ್ನ
ದೇವೇಂದ್ರ ಜಜಾರಿಯ	2016, ರಿಯೊ	ಜಾವೆಲಿನ್ ಥ್ರೊ	ಚಿನ್ನ
ದೀಪಾ ಮಲಿಕ್	2016, ರಿಯೊ	ಶಾಟ್‌ಪಟ್	ಬೆಳ್ಳಿ
ವರುಣ್ ಸಿಂಗ್ ಭಾಟಿ	2016, ರಿಯೊ	ಪುರುಷರ ಹೈಜಂಪ್	ಕಂಚು

ಪ್ಯಾರಾ ಅಥ್ಲೀಟ್ಸ್ ಹೀರೊಗಳು: ಸಚಿನ್

ಭಾರತದ ಕ್ರೀಡಾಪಟುಗಳನ್ನು ಕೊಂಡಾಡಿರುವ ದಿಗ್ಗಜ ಕ್ರಿಕೆಟರ್ ಸಚಿನ್ ತೆಂಡೂಲ್ಕರ್ 'ಪ್ಯಾರಾಲಿಂಪಿಯನ್ನರು ನಿಜಜೀವನದ ಹೀರೊಗಳು. ಇಚ್ಛಾಶಕ್ತಿ ಮತ್ತು ಬದ್ಧತೆ ಇದ್ದರೆ ಜೀವನದಲ್ಲಿ ಏನನ್ನಾದರೂ ಸಾಧಿಸಬಹುದು ಎಂಬುದನ್ನು ಪ್ಯಾರಾ ಅಥ್ಲೀಟ್‌ಗಳು ತೋರಿಸಿಕೊಟ್ಟಿದ್ದಾರೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಜೀವನ ಒಡ್ಡಿದ ಅತ್ಯಂತ ಕ್ಲಿಷ್ಟ ಪರೀಕ್ಷೆಯನ್ನೇ ಗೆದ್ದವರಿಗೆ ಮತ್ಯಾವ ಸೋಲು ಎದುರಾದೀತು?

ಮಂಗಳವಾರ ಆರಂಭವಾಗಲಿರುವ ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಕಣಕ್ಕಿಳಿಯುವ ಅಂಗವಿಕಲ ಕ್ರೀಡಾಪಟುಗಳನ್ನು ನೋಡಿದಾಗ ಹೀಗೆನ್ನಿಸದೇ ಇರದು. ಜನ್ಮತಃ ಅಂಗವೈಕಲ್ಯ ಇರುವವರು, ಯುದ್ಧ, ಅಪಘಾತ ಮತ್ತು ಅವಘಡಗಳಲ್ಲಿ ಕೈಕಾಲು ಕಳೆದುಕೊಂಡವರೆಲ್ಲರೂ ಇಲ್ಲಿ ತಮ್ಮ ವಿಶೇಷ ಸಾಮರ್ಥ್ಯ ಮೆರೆಯುತ್ತಾರೆ. ಸ್ಪರ್ಧೆಗಳಲ್ಲಿ ಕೆಲವರು ಪದಕ ಜಯಿಸುತ್ತಾರೆ. ಆದರೆ ಎಲ್ಲರೂ ನೋಡುಗರ ಮನಗೆಲ್ಲುತ್ತಾರೆ. ಇಲ್ಲಿ ಯಾರಿಗೂ ಸೋಲು ಎಂಬುದೇ ಇಲ್ಲ.

ಮನುಕುಲದ ಏಕತೆಯನ್ನು ಸಾರುವ ಒಲಿಂಪಿಕ್ ಅಭಿಯಾನದ ಮಹತ್ವದ ಭಾಗ ಇದು. ಮಾನವಕುಲದಲ್ಲಿ ಯಾರೂ ಮೇಲು-ಕೀಳಲ್ಲ. ಎಲ್ಲರಿಗೂ ಅವಕಾಶವುಂಟು ಎಂದು ಸಾರುವ ಕೂಟ ಇದು.


ಅಂಗವೈಕಲ್ಯದಿಂದ ಮುರುಟಿದ ಜೀವನಕ್ಕೆ ಚೈತನ್ಯ ತುಂಬುವ ಶಕ್ತಿ ಕ್ರೀಡೆಗೆ ಇದೆ ಎಂಬುದನ್ನು 1888ರಲ್ಲಿಯೇ ಜಗತ್ತು ಕಂಡುಕೊಂಡಿತ್ತು. ಶ್ರವಣದೋಷವುಳ್ಳವರಿಗಾಗಿ ಬರ್ಲಿನ್‌ನಲ್ಲಿ ಒಂದು ಕ್ರೀಡಾಕ್ಲಬ್ ಈ ಕಾರ್ಯ ಮಾಡುತ್ತಿತ್ತು. ಕೆಲ ವರ್ಷಗಳ ನಂತರ, ಎರಡನೇ ಮಹಾಯುದ್ಧದಲ್ಲಿ ಗಾಯಗೊಂಡು ಅಂಗವಿಕಲರಾದವರಲ್ಲಿ ಜೀವಚೈತನ್ಯವನ್ನು ತುಂಬುವ ಏಕೈಕ ದಾರಿ ಕ್ರೀಡೆಯಾಗಿ ತೋರಿತ್ತು. 1944ರಲ್ಲಿ ಬ್ರಿಟನ್ ಸರ್ಕಾರದ ಮನವಿಯ ಮೇರೆಗೆ ಡಾ. ಲುಡ್ವಿಗ್ ಗುಟ್ಮನ್ ಅವರು ಬೆನ್ನುಹುರಿ ಹಾನಿಗೊಳಗಾದವರಿಗಾಗಿ ಪುನಶ್ಚೇತನ ಶಿಬಿರ ಆರಂಭಿಸಿದರು.

ಸ್ಟೋಕ್ ಮ್ಯಾಂಡವೆಲ್‌ನಲ್ಲಿ ಕೇಂದ್ರ ಕಾರ್ಯಾರಂಭ ಮಾಡಿತು. ಅಲ್ಲಿಯ ರೋಗಿಗಳ ಮನೋಲ್ಲಾಸಕ್ಕಾಗಿ ಡಾ.ಗುಟ್ಮನ್ ಕ್ರೀಡೆಗಳನ್ನು ಆಯೋಜಿಸತೊಡಗಿದರು. ಅವು ಚಿಕಿತ್ಸೆಯ ಭಾಗಗಳಾಗಿದ್ದವು. ಕಾಲಕ್ರಮೇಣ ಸ್ಪರ್ಧಾತ್ಮಕವಾಗಿ ರೂಪುಗೊಂಡವು. 1948ರ ಲಂಡನ್ ಒಲಿಂಪಿಕ್ಸ್ ಉದ್ಘಾಟನೆ ಸಮಾರಂಭದ ದಿನ, ಡಾ. ಗುಟ್ಮನ್ ಅವರು ಗಾಲಿಕುರ್ಚಿ ಸ್ಪರ್ಧೆಗಳನ್ನು ಮೊದಲ ಬಾರಿಗೆ ಆಯೋಜಿಸಿದ್ದರು. ಅದಕ್ಕೆ ಅವರು 'ಸ್ಟೋಕ್ ಮ್ಯಾಂಡೆವಲ್ ಗೇಮ್ಸ್' ಎಂದು ಹೆಸರಿಟ್ಟರು. ಇದು ಪ್ಯಾರಾಲಿಂಪಿಕ್ಸ್ ಕೂಟಕ್ಕೆ ಮುನ್ನುಡಿಯಾಯಿತು. 1952ರಲ್ಲಿಯೂ ಕೂಟ ನಡೆಯಿತು.

ಯುದ್ಧದಲ್ಲಿ ಗಾಯಗೊಂಡು ಚೇತರಿಸಿಕೊಂಡಿದ್ದ 16 ಸೈನಿಕರು ಭಾಗವಹಿಸಿದ್ದರು. ಆರ್ಚರಿಯಲ್ಲಿ ಮಹಿಳೆಯರು ಭಾಗವಹಿಸಿದ್ದರು. 1960ರಲ್ಲಿ ರೋಮ್ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಪ್ಯಾರಾಲಿಂಪಿಕ್ಸ್ (ಸ್ಟೋಕ್ ಮ್ಯಾಂಡೆವಲ್ ಗೇಮ್ಸ್ ಪರಿವರ್ತನೆಯಾಯಿತು) ಸೇರ್ಪಡೆಗೊಂಡಿತು. ಅದರಲ್ಲಿ 23 ದೇಶಗಳ 400 ಅಥ್ಲೀಟ್‌ಗಳು ಭಾಗವಹಿಸಿದ್ದರು.

1976ರಲ್ಲಿ ಟೊರಾಂಟೊದಲ್ಲಿ ನಡೆದ ಪ್ಯಾರಾಲಿಂಪಿಕ್ಸ್‌ನಲ್ಲಿ ಅಂಧತ್ವ ಮತ್ತು ಕಾಲುಗಳನ್ನು ಕಳೆದುಕೊಂಡವರ ವಿಭಾಗಗಳನ್ನು ಸೇರ್ಪಡೆ ಮಾಡಲಾಯಿತು. ನಂತರದ ವರ್ಷಗಳಲ್ಲಿ ಸೆರೆಬ್ರಲ್ ಪಾಲ್ಸಿ, ಶ್ರವಣ ದೋಷ ಮತ್ತು ಅಂಗವೈಕಲ್ಯದ ಇನ್ನುಳಿದ ವಿಭಾಗಗಳಲ್ಲಿಯೂ ಸ್ಪರ್ಧೆಗಳು ಆರಂಭವಾದವು.

ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ಸ್ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆಗಳು ಒಪ್ಪಂದ ಮಾಡಿಕೊಂಡ ನಂತರ 90ರ ದಶಕದಿಂದ ಈಚೆಗೆ ಒಲಿಂಪಿಕ್ಸ್ ನಡೆದ ವರ್ಷ ಮತ್ತು ತಾಣದಲ್ಲಿಯೇ ಪ್ಯಾರಾಲಿಂಪಿಕ್ಸ್ ನಡೆಯುತ್ತಿದೆ.



ಮಾರಿಯಪ್ಪನ್ ತಂಗವೇಲು –ರಾಯಿಟರ್ಸ್ ಚಿತ್ರ

ಅಂದು ಅಥ್ಲೀಟ್; ಇಂದು ಆಡಳಿತದ ಮುಖ್ಯಸ್ಥೆ

ರಿಯೊ ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ ಶಾಟ್‌ಪಟ್ ವಿಭಾಗದಲ್ಲಿ ಬೆಳ್ಳಿ ಬೆಳಕು ಮೂಡಿಸಿದ ಹರಿಯಾಣದ ದೀಪಾ ಮಲಿಕ್ ಈಗ ಭಾರತ ಪ್ಯಾರಾಲಿಂಪಿಕ್ ಸಮಿತಿಯ ಅಧ್ಯಕ್ಷೆ. ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಮಹಿಳಾ ಕ್ರೀಡಾಪಟು ಎಂಬ ಹೆಗ್ಗಳಿಕೆ ಇರುವ ಅವರು ಈ ಬಾರಿ ದೇಶದಿಂದ ಗರಿಷ್ಠ ಸಂಖ್ಯೆಯಲ್ಲಿ ಕ್ರೀಡಾಪಟುಗಳನ್ನು ಕಳುಹಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಟೋಕಿಯೊದಲ್ಲಿ 40 ಪುರುಷರು ಮತ್ತು 14 ಮಹಿಳೆಯರು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಅಥ್ಲೆಟಿಕ್ಸ್‌ನಲ್ಲಿ 20 ಪುರುಷರು ಒಳಗೊಂಡಂತೆ ಗರಿಷ್ಠ 24 ಮಂದಿ ಸ್ಪರ್ಧಿಸಲಿದ್ದು ಶೂಟಿಂಗ್‌ನಲ್ಲಿ ಒಟ್ಟು 10 ಮತ್ತು ಬ್ಯಾಡ್ಮಿಂಟನ್‌ನಲ್ಲಿ ಏಳು ಮಂದಿ ಸ್ಪರ್ಧಿಸುವರು.



ಈ ಬಾರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಇತಿಹಾಸ ನಿರ್ಮಿಸಲಿದೆ. ಗರಿಷ್ಠ ಸಂಖ್ಯೆಯಲ್ಲಿ ಕ್ರೀಡಾಪಟುಗಳನ್ನು ಕಳುಹಿಸಿದ್ದು ಅತಿ ಹೆಚ್ಚು ಪದಕಗಳನ್ನು ಗೆಲ್ಲುವ ಭರವಸೆ ಇದೆ. ಕಳೆದ ಬಾರಿಗಿಂತ ಈ ಬಾರಿ ನಾಲ್ಕು ಹೆಚ್ಚುವರಿ ಕ್ರೀಡೆಗಳಲ್ಲೂ ದೇಶದ ಅಥ್ಲೀಟ್‌ಗಳು ಪಾಲ್ಗೊಳ್ಳುತ್ತಿದ್ದಾರೆ. ಹೀಗಾಗಿ ನಿರೀಕ್ಷೆಯೂ ದುಪ್ಪಟ್ಟು-ಮೂರು ಪಟ್ಟು ಆಗಿದೆ.

ದೀಪಾ ಮಲಿಕ್, ಭಾರತ ಪ್ಯಾರಾಲಿಂಪಿಕ್ ಸಂಸ್ಥೆಯ ಅಧ್ಯಕ್ಷೆ

ಒಂಬತ್ತು ಕ್ರೀಡೆ; 27ಕ್ಕೆ 'ಆರಂಭ'

ಭಾರತ ಈ ಬಾರಿ ಆರ್ಚರಿ, ಅಥ್ಲೆಟಿಕ್ಸ್, ಬ್ಯಾಡ್ಮಿಂಟನ್, ಕೆನೋಯಿಂಗ್, ಶೂಟಿಂಗ್, ಈಜು, ಪವರ್‌ಲಿಫ್ಟಿಂಗ್, ಟೇಬಲ್ ಟೆನಿಸ್ ಮತ್ತು ಟೇಕ್ವಾಂಡೊದಲ್ಲಿ ಸ್ಪರ್ಧಿಸುತ್ತಿದೆ. ಭಾರತದ ಮೊದಲ ಸ್ಪರ್ಧೆ ಇರುವುದು 27ರಂದು. ಭಾರತೀಯ ಕಾಲಮಾನ ಮುಂಜಾನೆ 5.30ರಿಂದ ನಡೆಯಲಿರುವ ಆರ್ಚರಿ ಮೂಲಕ ದೇಶದ ಅಭಿಯಾನ ಆರಂಭವಾಗಲಿದೆ. ಅಂದಿನಿಂದ ಯೂರೊ ಸ್ಪೋರ್ಟ್ ಚಾನಲ್ ಭಾರತದ ಸ್ಪರ್ಧೆಗಳ ನೇರಪ್ರಸಾರ ಮಾಡಲಿದೆ.

ಟೋಕಿಯೊ ಪ್ಯಾರಾಲಿಂಪಿಕ್ಸ್	ಆಗಸ್ಟ್ 24 ರಿಂದ ಸೆಪ್ಟೆಂಬರ್ 5
ಭಾಗವಹಿಸುತ್ತಿರುವ ದೇಶಗಳು	163
ಅಥ್ಲೀಟ್‌ಗಳು	4,537
ಕ್ರೀಡೆಗಳು	22 ಕ್ರೀಡೆಗಳ 540 ವಿಭಾಗಗಳು
ಹೊಸ ಸೇರ್ಪಡೆ	ಬ್ಯಾಡ್ಮಿಂಟನ್ ಮತ್ತು ಟೇಕ್ವಾಂಡೊ
ಭಾರತದ ಸ್ಪರ್ಧಿಗಳ ಸಂಖ್ಯೆ	54
ಪುರುಷರು	40
ಮಹಿಳೆಯರು	14

ವರದಿ: ಗಿರೀಶ ದೊಡ್ಡಮನಿ, ವಿಕ್ರಂ ಕಾಂತಿಕೆರೆ, ಬಸವರಾಜ ದಳವಾಯಿ



ಬೆಂಗಳೂರಿನಲ್ಲಿ ತರಬೇತಿ ಪಡೆದ ತಂಗವೇಲು, ಸಕೀನಾ; ಕನ್ನಡಿಗ ನಿರಂಜನ್ ಮುಕುಂದನ್ ಮೇಲೆ ಭರವಸೆ

ಹ್ಯಾಟ್ರಿಕ್ ಕನಸಿನಲ್ಲಿ ದೇವೇಂದ್ರ

ಕಳೆದ ಬಾರಿ ಅಮೋಘ ಸಾಧನೆ ಮಾಡಿರುವ ಭಾರತದ ಕ್ರೀಡಾಪಟುಗಳು ಈ ಬಾರಿ 'ಗರಿಷ್ಠ' ಸಾಧನೆಯ ಕನಸು ಹೊತ್ತುಕೊಂಡು ಟೋಕಿಯೊಗೆ ತೆರಳಿದ್ದಾರೆ. ಕಳೆದ ಬಾರಿ ಚಿನ್ನದ ಪದಕ ಗೆದ್ದಿರುವ ಮಾರಿಯಪ್ಪನ್ ತಂಗವೇಲು ಮತ್ತು ದೇವೇಂದ್ರ ಜಜಾರಿಯ ಅವರ ಮೇಲೆ ಈ ಬಾರಿಯೂ ಭಾರತ ನಿರೀಕ್ಷೆ ಇರಿಸಿಕೊಂಡಿದೆ.

ಹೈಜಂಪ್‌ನಲ್ಲಿ 1.89 ಮೀಟರ್‌ಗಳ ಸಾಧನೆ ಮಾಡಿದ್ದ ಮಾರಿಯಪ್ಪನ್ ಭಾರತಕ್ಕೆ ಚಿನ್ನ ಗೆದ್ದುಕೊಟ್ಟಿದ್ದರು. ಈ ಬಾರಿ ಇನ್ನಷ್ಟು 'ಎತ್ತರಕ್ಕೇರುವ' ಉತ್ಸಾಹದಲ್ಲಿದ್ದಾರೆ. ಅಥೆನ್ಸ್‌ನಲ್ಲಿ 62.15 ಮೀಟರ್ಸ್ ದೂರ ಜಾವೆಲಿನ್ ಎಸೆದು ಚಿನ್ನಕ್ಕೆ ಮುತ್ತಿಕ್ಕಿದ್ದ ರಾಜಸ್ಥಾನದ ದೇವೇಂದ್ರ ಜಜಾರಿಯ ಅವರು ರಿಯೊ ಒಲಿಂಪಿಕ್ಸ್‌ನಲ್ಲಿ 63.97 ಮೀಟರ್ಸ್ ದೂರದ ಸಾಧನೆ ಮಾಡಿ ಪ್ಯಾರಾಲಿಂಪಿಕ್ಸ್‌ನಲ್ಲಿ ಎರಡು ಚಿನ್ನ ಗೆದ್ದ ಭಾರತದ ಮೊದಲ ಕ್ರೀಡಾಪಟು ಎನಿಸಿಕೊಂಡಿದ್ದಾರೆ. ಈಗ ಹ್ಯಾಟ್ರಿಕ್ ಸಾಧನೆಯ ಕನಸಿನಲ್ಲಿದ್ದಾರೆ.

ಕನ್ನಡಿಗ, ಬೆಂಗಳೂರಿನ ನಿರಂಜನ್ ಮುಕುಂದನ್ ಪ್ಯಾರಾಲಿಂಪಿಕ್ಸ್‌ನಲ್ಲಿ ಮೊದಲ ಪದಕದ ನಿರೀಕ್ಷೆಯೊಂದಿಗೆ ಟೋಕಿಯೊದಲ್ಲಿ ಈಜು ಸ್ಪರ್ಧೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಬೆಂಗಳೂರಿನಲ್ಲಿ ಅಭ್ಯಾಸ ಮಾಡಿರುವ ಪಶ್ಚಿಮ ಬಂಗಾಳದ ಪವರ್ ಲಿಫ್ಟರ್ ಸಕೀನಾ ಖಾತೂನ್ ಮೇಲೆಯೂ ನಿರೀಕ್ಷೆ ಇದೆ.

11 ಕ್ರೀಡಾಕೂಟಗಳಲ್ಲಿ 12 ಪದಕ: ಭಾರತ ಒಟ್ಟಾರೆ 11 ಬಾರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾಗಿಯಾಗಿದೆ. ಒಟ್ಟು 12 ಪದಕಗಳನ್ನು ಗೆದ್ದುಕೊಂಡಿದೆ. ತಲಾ ನಾಲ್ಕು ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕಗಳು ಭಾರತದ ಕ್ರೀಡಾಪಟುಗಳು ಕೊರಳನ್ನು ಅಲಂಕರಿಸಿವೆ. 1984ರ ನ್ಯೂಯಾರ್ಕ್ ಮತ್ತು ಕಳೆದ ಬಾರಿ ರಿಯೊ ಕೂಟಗಳಲ್ಲಿ ತಲಾ ನಾಲ್ಕು ಪದಕಗಳು ಭಾರತಕ್ಕೆ ಲಭಿಸಿವೆ. ಆದರೆ ರಿಯೊದಲ್ಲಿ ಎರಡು ಚಿನ್ನ ಮತ್ತು ತಲಾ ಒಂದು ಬೆಳ್ಳಿ, ಕಂಚು ಗಳಿಸಿರುವುದರಿಂದ ಅದೇ ಈ ವರೆಗಿನ ಗರಿಷ್ಠ ಸಾಧನೆ. ನ್ಯೂಯಾರ್ಕ್‌ನಲ್ಲಿ ಭಾರತ ಚಿನ್ನ ಗೆದ್ದಿರಲಿಲ್ಲ.

ದೇಶ ಪ್ಯಾರಾಲಿಂಪಿಕ್ಸ್‌ನಲ್ಲಿ ಮೊದಲು ಪಾಲ್ಗೊಂಡದ್ದು 1968ರಲ್ಲಿ. ಆಗ ಪದಕ ಒಲಿದಿರಲಿಲ್ಲ. 1972ರಲ್ಲಿ ಜರ್ಮನಿಯ ಹೈಡಲ್‌ಬರ್ಗ್‌ನಲ್ಲಿ ಪುರುಷರ 50 ಮೀ ಫ್ರೀಸ್ಟೈಲ್ ಈಜಿನಲ್ಲಿ ವಿಶ್ವ ದಾಖಲೆಯೊಂದಿಗೆ ಚಿನ್ನ ಗೆದ್ದ ಮುರಳಿಕಾಂತ್ ಪೇಟ್ಕರ್ ಮೊದಲ ಪದಕ ಗಳಿಸಿಕೊಟ್ಟರು. ನಂತರದ ಎರಡು ಕೂಟಗಳಲ್ಲಿ ಭಾರತ ಪಾಲ್ಗೊಳ್ಳಲಿಲ್ಲ. 1984ರಲ್ಲಿ ಅಥ್ಲೆಟಿಕ್ಸ್‌ನಲ್ಲಿ ಜೋಗಿಂದರ್ ಸಿಂಗ್ ಬೇಡಿ ಮೂರು ವೈಯಕ್ತಿಕ ಪದಕಗಳನ್ನು ಗೆದ್ದು ಮಹತ್ವದ ಸಾಧನೆ ಮಾಡಿದರು.

2004ರ ಅಥೆನ್ಸ್ ಕೂಟದಲ್ಲಿ ರಾಜಿಂದರ್ ಸಿಂಗ್ ರಹೇಲು ಪವರ್‌ಲಿಫ್ಟಿಂಗ್‌ನಲ್ಲಿ (56 ಕೆಜಿ ವಿಭಾಗ) 157.5 ಕೆಜಿ ಭಾರ ಎತ್ತಿ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದರು. 2012ರಲ್ಲಿ ಲಂಡನ್‌ನಲ್ಲಿ ಕನ್ನಡಿಗ ಗಿರೀಶ್ ಎನ್.ಗೌಡ ಹೈಜಂಪ್‌ನಲ್ಲಿ 1.74 ಮೀಟರ್ಸ್ ಸಾಧನೆ ಮಾಡಿ ಬೆಳ್ಳಿ ಪದಕ ಗೆದ್ದುಕೊಂಡರು. ಈ ಮೂಲಕ ಪ್ಯಾರಾಲಿಂಪಿಕ್ಸ್ ಹೈಜಂಪ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಕ್ರೀಡಾಪಟು ಎನಿಸಿಕೊಂಡರು. ರಿಯೊದಲ್ಲಿ ದೀಪಾ ಮಲಿಕ್ ಬೆಳ್ಳಿ ಮತ್ತು ವರುಣ್ ಸಿಂಗ್ ಭಾಟಿ ಕಂಚು ಗೆದ್ದಿದ್ದರು.

ದೇವೇಂದ್ರ ಜಜಾರಿಯ – ಟ್ವಿಟರ್ ಚಿತ್ರ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕಾಂಗ್ರೆಸ್‌ನ ಪ್ರಮುಖ ನಾಯಕರು ಸಭೆ ನಡೆಸುತ್ತಿರುವ ಚಿತ್ರವೊಂದರಲ್ಲಿ ಹಿಂಬದಿಯ ಬ್ಯಾನರ್‌ನ ಬರಹ ಸುದ್ದಿಯಾಗಿದೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಡಾ. ಮನಮೋಹನ್ ಸಿಂಗ್ ಮೊದಲಾದವರು ಚಿತ್ರದಲ್ಲಿದ್ದಾರೆ. ಬ್ಯಾನರ್‌ನಲ್ಲಿ 'ಚೋರ್ (ಕಳ್ಳ) ಗ್ರೂಪ್ ಮೀಟಿಂಗ್' ಎಂದು ಬರೆಯಲಾಗಿದೆ. ಉತ್ತರ ಪ್ರದೇಶ ಭಾರತೀಯ ಜನತಾ ಯುವ ಮೋರ್ಚಾ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥ ಡಾ. ರಿಚಾ ರಜಪೂತ್ ಅವರು ಚಿತ್ರವನ್ನು ಷೇರ್ ಮಾಡಿದ್ದು, 'ಕಣ್ತಪ್ಪಿನಿಂದ ಆಗಿದ್ದರೂ, ಸರಿಯಾದ ಅರ್ಥವನ್ನೇ ನೀಡುತ್ತಿದೆ' ಎಂದು ಕಾಂಗ್ರೆಸ್ ಪಕ್ಷವನ್ನು ಲೇವಡಿ ಮಾಡಿದ್ದಾರೆ.



ಈ ಚಿತ್ರವನ್ನು ತಿರುಚಲಾಗಿದೆ ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. 2019ರಲ್ಲಿ ನಡೆದ ಕಾಂಗ್ರೆಸ್ ಕೋರ್ ಕಮಿಟಿ ಸಭೆ (ಸಿಡಬ್ಲ್ಯುಸಿ) ಇದಾಗಿದ್ದು, ಕೋರ್ ಎಂಬ ಪದವನ್ನು ಚೋರ್ ಎಂಬುದಾಗಿ ವಿಡಂಬನೆ ಮಾಡಲಾಗಿದೆ. ಮೂಲ ಚಿತ್ರದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಎಂದಷ್ಟೇ ಬರೆಯಲಾಗಿತ್ತು. ಅಂದು ಸುದ್ದಿ ಪ್ರಕಟಿಸಿದ್ದ ಎಲ್ಲ ವೆಬ್‌ಸೈಟ್‌ಗಳಲ್ಲೂ ಇದು ಸ್ಪಷ್ಟವಾಗಿದೆ. ಚೋರ್ ಗ್ರೂಪ್ ಮೀಟಿಂಗ್ ಎಂಬುದನ್ನು ಹೊಸದಾಗಿ ಸೇರಿಸಲಾಗಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ




ಹೆಂಡತಿಯ ದಾನ

ಬೋಧಿಸತ್ವ ಮಾದ್ರಿಗೆ ಹೇಳಿದ, 'ಮಾದ್ರಿ, ನಿನ್ನ ಮನೋಧೈರ್ಯ ನನಗೆ ಆಶ್ಚರ್ಯ ತಂದಿದೆ. ಮಕ್ಕಳನ್ನು ಕಾಣದೆ ಕಂಗಾಲಾಗಿ ಓಡಾಡಿದ ನೀನು ಇಷ್ಟು ಸುಲಭವಾಗಿ ಅನುಮೋದನೆ ಮಾಡಿದ್ದು ಅದ್ಭುತ. ನಾನು ಮನಸ್ಸನ್ನು ಗಟ್ಟಿಮಾಡಿಕೊಂಡು ಮಕ್ಕಳನ್ನು ದಾನಕೊಟ್ಟಾಗ ಅನೇಕ ಅದ್ಭುತಗಳಾದವು. ಭೂಮಿ ನಡುಗಿತು, ಗಿರಿಗಳು ಹೊಯ್ದಾಡಿದವು. ಆ ಶಬ್ದ ಮೂರು ಲೋಕಗಳವರೆಗೆ ಹಬ್ಬಿತು. ಆಗಲೂ ನನಗೆ ಇಷ್ಟು ಆಶ್ಚರ್ಯವಾಗಿರಲಿಲ್ಲ'. ಮಾದ್ರಿದೇವಿ ಹೇಳಿದಳು, 'ಆರ್ಯ, ಹಾಗೆ ಅದದ್ದು ಯಾಕೆ ಗೊತ್ತೇ? ಆಗ ಎರಡೂ ನಾರದ-ಪರ್ವತದ ದೇವತೆಗಳು ನಿನ್ನ ದಾನದ ಅನುಮೋದನೆಯನ್ನು ಮಾಡಿದರು. ಇಂದ್ರ, ಬ್ರಹ್ಮ, ಪ್ರಜಾಪತಿ, ಸೋಮ, ಯಮ ಹಾಗೂ ಕುಬೇರರು ಕೂಡ ದಾನದ ಅನುಮೋದನೆ ಮಾಡಿದರು. ಅವರೆಲ್ಲರ ಅನುಮೋದನೆ ನಿನಗೆ ದೊರೆತಿದೆ. ನನ್ನ ಅನುಮೋದನೆ ದೊಡ್ಡದಲ್ಲ' ಎನ್ನುತ್ತ ಶ್ರೇಷ್ಠದೇವಿ, ಯಶಸ್ವಿನಿ, ರಾಜಪುತ್ರಿ ಮಾದ್ರಿ, ವೆಸ್ಸಂತರ ಮಾಡಿದ ಶ್ರೇಷ್ಠ ದಾನವನ್ನು ಅನುಮೋದನೆ ಮಾಡಿದಳು.

ಅವರು ಹೀಗೆ ಮಾತನಾಡುತ್ತಿರುವಾಗ, ಸ್ವರ್ಗದಲ್ಲಿದ್ದ ಶಕ್ರ ಇದನ್ನು ಗಮನಿಸಿದ. 'ವೆಸ್ಸಂತರ ರಾಜ ತನ್ನ ಮಕ್ಕಳನ್ನೇ ಬ್ರಾಹ್ಮಣನೊಬ್ಬನಿಗೆ ದಾನಮಾಡಿ ಭೂಮಿಯನ್ನೇ ನಡುಗಿಸಿಬಿಟ್ಟ. ಯಾರಾದರೂ ಇನ್ನೊಬ್ಬ ದುರಾಸೆಯುಳ್ಳ ಹೀನ ಪುರುಷ ಅವನ ಬಳಿಗೆ ಹೋಗಿ ಸಕಲ ಲಕ್ಷಣಗಳನ್ನು ಹೊಂದಿದ ಸುಂದರಿ ಮಾದ್ರಿಯನ್ನು ಅವನಿಂದ ಬೇಡಿಬಿಟ್ಟಾನು. ಅವನಿಂದ ದಾನಪಡೆದು, ಮಾದ್ರಿಯನ್ನು ಕರೆದುಕೊಂಡು ಹೋಗಿ, ವೆಸ್ಸಂತರನನ್ನು ಏಕಾಂಗಿಯಾಗಿ ಮಾಡಿಬಿಟ್ಟಾನು' ಎಂದು ಯೋಚಿಸಿದ. ರಾಜನನ್ನು ಏಕಾಂಗಿಯಾಗಿ, ಅಸಹಾಯಕನಾಗಿ ಮಾಡುವುದು ಸರಿಯಲ್ಲ ಎಂದು ತೀರ್ಮಾನಿಸಿದ. ಶಕ್ರ ತಾನು ಬ್ರಾಹ್ಮಣನ ವೇಷಧರಿಸಿ ವೆಸ್ಸಂತರನ ಬಳಿಗೆ ಹೋಗಿ ಅವನಿಂದ ಮಾದ್ರಿಯನ್ನು ದಾನವಾಗಿ ಪಡೆದು, ಅವನ ದಾನದ ಪಾರಮಿತವನ್ನು ಶಿಖರಕ್ಕೇರಿಸಿ, ಅವನನ್ನು ಸರ್ವಶ್ರೇಷ್ಠ ದಾನಿಯನ್ನಾಗಿ ಮಾಡಿ, ನಂತರ ಆಕೆಯನ್ನು ಆತನಿಗೇ ಹಿಂತಿರುಗಿಸಿ ಬರುತ್ತೇನೆ ಎಂದು ಯೋಚಿಸಿ, ಸೂರ್ಯೋದಯದ ಸಮಯಕ್ಕೆ ಸರಿಯಾಗಿ ವೆಸ್ಸಂತರನ ಆಶ್ರಮಕ್ಕೆ ಬಂದ. ಅವನನ್ನು ನೋಡಿದೊಡನೆ ವೆಸ್ಸಂತರ, 'ಇದೇನು ಆಶ್ಚರ್ಯ! ಈ ಕಾಡಿನಲ್ಲಿ ವಾಸಿಸುತ್ತ ಏಳು ತಿಂಗಳುಗಳು ಕಳೆದು ಹೋದವು. ಇದುವರೆಗೂ ಒಬ್ಬ ಮನುಷ್ಯನ ದರ್ಶನವೂ ಆಗಿರಲಿಲ್ಲ. ಈಗ ಒಂದು ವಾರದಲ್ಲಿ, ಎರಡನೆಯ ಬಾರಿಗೆ ಜಿಂಕೆ ಚರ್ಮ ಧರಿಸಿದ, ಬಂಗಾರದ ಬಣ್ಣದ ಬ್ರಾಹ್ಮಣನ ದರ್ಶನವಾಗುತ್ತಿದೆ' ಎಂದುಕೊಂಡ. ಮುಂದೆ ಬಂದ ಮುದುಕ ಬ್ರಾಹ್ಮಣ ಹೇಳಿದ, 'ಮಹಾರಾಜಾ, ನಾನು ತುಂಬ ಮುದುಕನಾಗಿದ್ದೇನೆ. ನನಗೆ ಸಹಾಯ ಮತ್ತು ಸೇವೆ ಮಾಡುವವರು ಯಾರೂ ಇಲ್ಲ. ಅದಕ್ಕೆ ನಿನ್ನ ಪ್ರಿಯ ಹೆಂಡತಿ ಮಾದ್ರಿಯನ್ನು ಬೇಡಲು ಬಂದಿದ್ದೇನೆ. ಆಕೆಯನ್ನು ನನಗೆ ಕೊಡು' ಎಂದು ಬೇಡಿದ. ಬೋಧಿಸತ್ವ ಮಾತನಾಡುವ ಮೊದಲೇ ಮುದಿಬ್ರಾಹ್ಮಣ ಮತ್ತೆ ಕೇಳಿಕೊಂಡ, 'ಮಹಾರಾಜಾ, ನೀನು ಒಂದು ಸರ್ವಕಾಲದಲ್ಲೂ ತುಂಬಿದ ನದಿ ಇದ್ದಂತೆ. ಅದು ಎಂದಿಗೂ ಕ್ಷೀಣಿಸುವುದಿಲ್ಲ. ನೀನು ದಾನದಲ್ಲಿ ಬಹುದೊಡ್ಡ ಹೆಸರು ಮಾಡಿದವನು. ನಾನು ಬೇಡಿದಂತೆ ನಿನ್ನ ಪತ್ನಿಯನ್ನು ನನಗೆ ದಾನವಾಗಿ ಕೊಡು'. 'ಹೇ ಬ್ರಾಹ್ಮಣ, ದಾನ ನೀಡುವುದಕ್ಕೆ ನನಗೆ ದುಃಖವಿಲ್ಲ. ಇಗೋ, ಆಕೆಯನ್ನು ದಾನವಾಗಿ ಕೊಟ್ಟುಬಿಟ್ಟೆ' ಎಂದು ಬೋಧಿಸತ್ವ ಕಮಂಡಲುವಿನಲ್ಲಿದ್ದ ನೀರನ್ನು ಹಾಕಿ ಹೇಳಿಬಿಟ್ಟ. ❖

ಗುಂಡಣ್ಣ



ದಿನ ಭವಿಷ್ಯ

ಮಂಗಳವಾರ ಆಗಸ್ಟ್ 24, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಮಖಾ ದ್ವಿತೀಯ ಗಂ. 24-59 ಹ. 4-14) ಮಂಗಳವಾರ ನಿತ್ಯ ನಕ್ಷತ್ರ ಪೂರ್ವಾಭಾದ್ರ ಗಂ. 36-37 (ರಾ. 8-53) ಸುಕರ್ಮ ನಾಮ ಯೋಗ ಗಂ. 6-14 ಗರಜ ಕರಣ ಗಂ. 24-59 ವಿಷಾಭಾವಃ ಅಮೃತ ಗಂ. 16-45 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-11 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 1 5

ಮೇಷ: ಮಹಿಳೆಯರು ಸಾಮಾಜಿಕ ಕ್ಷೇತ್ರದಲ್ಲಿ ದುಡಿಯುವ ಅವಕಾಶ ಹೊಂದಲಿದ್ದೀರಿ. ಹಣಕಾಸು ವ್ಯವಹಾರದಲ್ಲಿ ಎಚ್ಚರಿಕೆ ವಹಿಸುವುದು ಕ್ಷೇಮ. ಆರ್ಥಿಕ ಸ್ಥಿತಿ ಉತ್ತಮಗೊಳ್ಳಿದೆ.

ವೃಷಭ: ಆಸ್ತಿ ವಿಷಯಕ್ಕೆ ಸಂಬಂಧಿಸಿದಂತೆ ವಿವಾದ – ಮನಸ್ತಾಪಗಳು ಎದುರಾಗುವ ಸಾಧ್ಯತೆ. ಮಹಿಳೆಯರು ಧಾರ್ಮಿಕ ಸಮಾರಂಭಗಳಲ್ಲಿ ಪಾಲ್ಗೊಳ್ಳುವ ಸಾಧ್ಯತೆ.

ಮಿಥುನ: ಉನ್ನತ ಹುದ್ದೆಯಲ್ಲಿರುವವರಿಂದ ಅಭಿಮಾನದ ಮಾತುಗಳನ್ನು ಕೇಳಲಿದ್ದೀರಿ. ಮಹಿಳೆಯರ ಇಷ್ಟಾರ್ಥಗಳು ಸಿದ್ಧಿಗೊಂಡು ಮನೋಲ್ಲಾಸ ಉಂಟಾಗಲಿದೆ.

ಕರ್ಕಾಟಕ: ಮನೆ ಅಥವಾ ಆಸ್ತಿಯಲ್ಲಿ ವೃದ್ಧಿಯಾಗಲಿದೆ. ಆರ್ಥಿಕ ತೊಂದರೆಯಲ್ಲಿರುವವರಿಗೆ ಜೀವನೋಪಾಯಕ್ಕೆ ಹೊಸ ಮಾರ್ಗವೊಂದು ಗೋಚರವಾಗಲಿದೆ.

ಸಿಂಹ: ಆಪ್ತರೆನಿಸಿಕೊಂಡವರಿಂದ ಉದ್ಯೋಗ ಕ್ಷೇತ್ರದಲ್ಲಿ ಹೆಚ್ಚಿನ ತೊಂದರೆ ಅನುಭವಿಸುವ ಸಾಧ್ಯತೆ. ತಾಯಿಯ ಆಶೀರ್ವಾದದಿಂದ ಜೀವನದಲ್ಲಿ ಅಭಿವೃದ್ಧಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾತ್ರ ವಹಿಸಲಿದ್ದೀರಿ.

ಕನ್ಯಾ: ಉದ್ಯೋಗ ವ್ಯವಹಾರಗಳು ಉತ್ತಮಗೊಂಡು ಆರ್ಥಿಕ ಬಲವರ್ಧನೆ ಹೊಂದಲಿದ್ದೀರಿ. ಯಂತ್ರೋಪಕರಣಗಳನ್ನು ಖರೀದಿಸುವ ಸಾಧ್ಯತೆ. ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ ಅಥವಾ ಬಡ್ತಿ ಸಾಧ್ಯತೆ.

ತುಲಾ: ಸಾಮಾಜಿಕ ಗೌರವಗಳು ಪ್ರಾಪ್ತವಾಗುವ ಲಕ್ಷಣ ಕಂಡುಬರುವುದು. ಮಿತ್ರರಿಂದ ಸಹಕಾರ ದೊರಕಲಿದೆ. ಅಮೂಲ್ಯ ವಸ್ತುಗಳ ಸಂಗ್ರಹ ಮಾಡಲಿದ್ದೀರಿ.

ವೃಶ್ಚಿಕ: ಆರ್ಥಿಕ ಅಭಿವೃದ್ಧಿಯನ್ನು ಕಾಣಲಿದ್ದೀರಿ. ಅತಿಯಾದ ಕೆಲಸ ಕಾರ್ಯಗಳಿಂದಾಗಿ ನೇತ್ರ ಸಂಬಂಧಿ ತೊಂದರೆಯು ಕಾಣಿಸಿಕೊಳ್ಳುವ ಸಾಧ್ಯತೆ.

ಧನು: ನೆರೆಹೊರೆಯವರೊಂದಿಗೆ ವಿನಾಕಾರಣ ವೈಮನಸ್ಸು ಉಂಟಾಗುವ ಸಾಧ್ಯತೆ. ಸಂಯಮದ ಮಾತುಗಳಿಂದ ಗೌರವ ಪ್ರಾಪ್ತವಾಗಲಿದೆ. ಮಕ್ಕಳನ್ನು ದಿನದ ಮಟ್ಟಿಗೆ ಅತ್ಯಂತ ಜತನದಿಂದ ನೋಡಿಕೊಳ್ಳಿ.

ಮಕರ: ರಕ್ಷಣಾ ಕಾರ್ಯದಲ್ಲಿ ತೊಡಗಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದ ಬಳಲಿಕೆ ಉಂಟಾಗುವ ಸಾಧ್ಯತೆ. ಜವಾಬ್ದಾರಿಯುತ ಕಾರ್ಯನಿರ್ವಹಣೆಯಿಂದಾಗಿ ಪ್ರಶಂಸೆಗೆ ಪಾತ್ರರಾಗಲಿದ್ದೀರಿ.

ಕುಂಭ: ಉದ್ಯೋಗಸ್ಥರಿಗೆ ಮೇಲಾಧಿಕಾರಿಗಳ ಪ್ರಶಂಸೆ. ವಿದ್ಯಾಭ್ಯಾಸದ ಬಗ್ಗೆ ಮಕ್ಕಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ಉತ್ತಮ ಫಲಿತಾಂಶ ನಿರೀಕ್ಷಿಸಿ. ವಾಹನ ಚಾಲನೆಯಲ್ಲಿ ಜಾಗರೂಕರಾಗಿರುವುದು ಕ್ಷೇಮ.

ಮೀನ: ಗುತ್ತಿಗೆದಾರರಿಗೆ ಕೆಲಸ ಕಾರ್ಯಗಳಲ್ಲಿ ಕಾರ್ಮಿಕರಿಂದ ಅಡಚಣೆಯನ್ನು ಎದುರಿಸಬೇಕಾದೀತು. ಕೃಷಿ ಕ್ಷೇತ್ರದಲ್ಲಿ ಯಂತ್ರೋಪಕರಣಗಳ ಬಳಕೆ ಬಗ್ಗೆ ಪ್ರಯತ್ನ ಸಫಲವಾಗಲಿದೆ.

ನಿಮ್ಮ ಜನ್ಮದಿನ 24-ಆಗಸ್ಟ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಪುಕ್ಕಲು ಸ್ವಭಾವವನ್ನು ಬಿಟ್ಟು ಧೈರ್ಯದಿಂದ ಮುನ್ನುಗ್ಗಿದಲ್ಲಿ ನಿಮ್ಮ ಕೆಲಸಗಳು ಸುಗಮವಾಗಲಿವೆ. ನಿಮ್ಮ ದೌರ್ಬಲ್ಯಗಳನ್ನು ಇತರರು ದುರುಪಯೋಗ ಮಾಡಿಕೊಳ್ಳವ ಸಾಧ್ಯತೆ. ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಪಡೆಯಲಿದ್ದೀರಿ. ಆರ್ಥಿಕ ಅನುಕೂಲಗಳು ಕಾಲಕಾಲಕ್ಕೆ ಕೂಡಿ ಬರಲಿವೆ.

ಪದಬಂಧ 4698


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾದ್ಯವನ್ನು ನುಡಿಸುವವನು (3)
3. ಈತ ಚಿಕ್ಕ ಹುಡುಗ (3)
5.ವಿಕಿರಣವಲ್ಲ! ಸೂರ್ಯನ ರಶ್ಮಿ (5)
7.ತಿರುಗಿರುವ ಸ್ನೇಹಿತ (2)
9.ಎರಕ ಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ (2)
10.ಹಾಯಲು ಬಂದ ಹಸು ನೀಡಿದ ಕ್ಷೀರ (2)
12. ವಾಸಸ್ಥಳವಿಲ್ಲಿ ಉಲ್ಟಾ ಆಗಿಬಿಟ್ಟಿದೆ (2)
14.ಅಶ್ವದ ಮೊಗವಿದು (5)
16.ಲವ ತಂದಿರುವ ಉಪ್ಪು (3)
17.ಸಾಗಿಸುವಿಕೆಯನ್ನು ಹೀಗೆನ್ನಿ (3)

ಮೇಲಿಂದ ಕೆಳಕ್ಕೆ

1.ಹನುಮಂತನ ಇನ್ನೊಂದು ಹೆಸರು (4)
2.ಕೈ ಇಲ್ಲಿ ಕಾಣುತ್ತಿದೆ (2)
3.ಬಾದಾರಾಯಣ ಕಾಲದ ಶರ (2)
5.ಅಕ್ಕಿ ತೊಳೆದ ನೀರು (4)
6.ವಾತಾಯನ ಇಲ್ಲಿದೆ (3)
8.ಅಧಿಕವಾದುದನ್ನು ಹೀಗೆ ಹೇಳಿ (3)
9.ಅಲೆಯೊಳಗೆ ಸಿಕ್ಕಿಕೊಂಡಿರುವಳು ಬಲಹೀನೆ (3)
10.ಅತಿ ಘೋರವಾದ ವಿಷ (4)
11.ಸಾಧ್ಯತೆ ಅಥವಾ ಹುಟ್ಟು (3)
13.ಪಕ್ಕದ ಮನೆಯಿದು (4)
12.ಹಗರಣದಲ್ಲಿ ಸಿಕ್ಕಿರುವ ದುಡ್ಡು (2)
13.ನರಕದಲ್ಲಿರುವ ಮನುಷ್ಯ (2)



4697ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 3.ಹತ್ಯಾಕಾಂಡ 5.ನಡುಕ 6.ಗುರಿ 7.ಕಡಿವಾಣ 9.ಮನೆತನ 12.ಗಿಣ್ಣು 13.ಸುಗಮ 14.ಗರಗಸ

ಮೇಲಿಂದ ಕೆಳಕ್ಕೆ: 1.ವಾನಪ್ರಸ್ಥ 2.ಆಕಸ್ಮಿಕ 3.ಹಗರಣ 4.ಡಬರಿ 8.ವಾಸನೆ 9.ಮಧುಮಾಸ 10.ನವಸುಮ 11.ಅರಮನೆ 12.ಗಿಡಗ

ಸುಡೊಕು 5084

	9				5		6	
2	7		4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5083 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ದೆಹಲಿಯಲ್ಲಿ ದೇಶದ ಮೊದಲ 'ಸ್ಮಾಗ್ ಟವರ್' ಉದ್ಘಾಟನೆ



ದೆಹಲಿಯ ಕನಾಟ್ ಪ್ರದೇಶದಲ್ಲಿ ನಿರ್ಮಿಸಲಾಗಿರುವ ದೇಶದ ಮೊದಲ ಸ್ಮಾಗ್ ಟವರ್ ಅನ್ನು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸೋಮವಾರ ಉದ್ಘಾಟಿಸಿದರು —ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯ ಗಾಳಿಯ ಗುಣಮಟ್ಟವನ್ನು ಸುಧಾರಿಸುವ ಉದ್ದೇಶದೊಂದಿಗೆ ಕನಾಟ್ ಪ್ರದೇಶದಲ್ಲಿ ನಿರ್ಮಿಸಲಾಗಿರುವ ದೇಶದ ಮೊದಲ ಸ್ಮಾಗ್ ಟವರ್ ಅನ್ನು (ಗಾಳಿ ಶುದ್ಧೀಕರಣ ಯಂತ್ರ) ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸೋಮವಾರ ಉದ್ಘಾಟಿಸಿದರು.

ಈ ಟವರ್ ಸುಮಾರು 1 ಕಿ.ಮೀ ವ್ಯಾಪ್ತಿಯಲ್ಲಿ ಪ್ರತಿ ಸೆಕೆಂಡಿಗೆ 1,000 ಘನ ಮೀಟರ್‌ನಷ್ಟು ಗಾಳಿಯನ್ನು ಶುದ್ಧೀಕರಿಸಲಿದೆ.

'ಈ ಗಾಳಿ ಶುದ್ಧೀಕರಣ ಯಂತ್ರವನ್ನು ಪ್ರಾಯೋಗಿಕ ಯೋಜನೆ ರೂಪದಲ್ಲಿ ಸ್ಥಾಪಿಸಲಾಗಿದೆ. ಒಂದು ತಿಂಗಳೊಳಗೆ ಆರಂಭಿಕ ಗುಣಲಕ್ಷಣಗಳು ಲಭ್ಯವಾಗಲಿದೆ. ಈ ಯೋಜನೆ ಯಶಸ್ವಿಯಾದರೆ, ದೆಹಲಿಯ ಇತರೆ ಭಾಗಗಳಲ್ಲೂ ಸ್ಮಾಗ್ ಟವರ್ ಅನ್ನು ಸ್ಥಾಪಿಸಲಾಗುವುದು' ಎಂದು ಅವರು ಮಾಹಿತಿ ನೀಡಿದರು.

'ಗಾಳಿ ಶುದ್ಧೀಕರಣ ಯಂತ್ರದ ಪರಿಣಾಮಕಾರಿತ್ವವನ್ನು ಪರಿಶೀಲಿಸಲು ಎರಡು ವರ್ಷಗಳ ಪ್ರಾಯೋಗಿಕ ಅಧ್ಯಯನವನ್ನು ನಡೆಸಲಾಗುವುದು' ಎಂದು ಈ ಹಿಂದೆ ಅಧಿಕಾರಿಗಳು ಹೇಳಿದ್ದರು.

ಈ ಟವರ್‌ನ ಕಾರ್ಯಕ್ಷಮತೆ ಮೇಲೆ ನಿಗಾವಹಿಸಲು ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದೆ.

ನಂಬಿದವರ ಕೈಬಿಡದ ಗುರುರಾಯರು

• ಯು.ಪಿ.ಪುರಾಣಿಕ್



ರಾಘವೇಂದ್ರ ಸ್ವಾಮಿಗಳ 350ನೇ ಆರಾಧನೆ

ರಾಘವೇಂದ್ರ ಸ್ವಾಮಿಗಳು ಕ್ರಿ.ಶ. 1671 ವಿರೋಧಿಕೃತ ನಾಮ ಸಂವತ್ಸರ, ಶ್ರಾವಣ ಕೃಷ್ಣ ಬಿದಿಗೆಯಂದು, ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ, ಆದವಾನಿ ತಾಲ್ಲೂಕು, ಮಂಚಾಲೆ ಗ್ರಾಮದ 'ಮಂತ್ರಾಲಯ'ದಲ್ಲಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಸಶರೀರ ಬೃಂದಾವನಸ್ಥರಾದರು. ಇದೇ 24ರಂದು (ಮಂಗಳವಾರ) ಪ್ಲವನಾಮ ಸಂವತ್ಸರ, ಶ್ರಾವಣ ಕೃಷ್ಣ ಬಿದಿಗೆ ರಾಯರ 350ನೇ ಆರಾಧನೆಯನ್ನು ವಿಶ್ವದಾದ್ಯಂತ ಆಚರಿಸಲಾಗುತ್ತಿದೆ. ಜನರ ಕಷ್ಟಕಾರ್ಪಣ್ಯಗಳನ್ನು ನೀಗಿಸಲೆಂದೇ ಅವತರಿಸಿದ ಯತಿ ಎಂದೇ ನಂಬಿದ ಭಕ್ತರು ರಾಘವೇಂದ್ರಸ್ವಾಮಿಗಳನ್ನು ಕೃತಯುಗದಲ್ಲಿ ಪ್ರಹ್ಲಾದ, ದ್ವಾಪರದಲ್ಲಿ ಬಾಹ್ಲಿಕ ರಾಜ ನಾಗಿ, ಕಲಿಯುಗದಲ್ಲಿ ವ್ಯಾಸರಾಯರು ಹಾಗೂ ರಾಘವೇಂದ್ರರಾಗಿ ಅವತರಿಸಿದ್ದಾರೆ ಎಂದು ಭಾವಿಸಿದ್ದಾರೆ.

ರಾಘವೇಂದ್ರ ಸ್ವಾಮಿಗಳು ಕ್ರಿ.ಶ.1595 ಮನ್ಮಥನಾಮ ಸಂವತ್ಸರ, ಫಾಲ್ಗುಣ ಶುದ್ಧ ಸಪ್ತಮಿ ಗುರುವಾರ ತಮಿಳುನಾಡಿನ ಭುವನಗಿರಿಯಲ್ಲಿ ಜನ್ಮ ತಾಳಿದರು. ತಂದೆ ತಿಮ್ಮಣ್ಣ ಭಟ್ಟರು, ತಾಯಿ ಗೋಪಮ್ಮ, ಪೂರ್ವಾಶ್ರದ ಹೆಸರು ವೆಂಕಟನಾಥ. ಸನ್ಯಾಸ ಸ್ವೀಕಾರ ನಡೆದದ್ದು ಕ್ರಿ.ಶ. 1621ರಲ್ಲಿ.

ಪ್ರಹ್ಲಾದ ರಾಜರಾಗಿದ್ದಾಗ 'ಹರಿ ಸರ್ವೋತ್ತಮ, ವಿಶ್ವವ್ಯಾಪಿ, ಆತನಿಲ್ಲದ ಸ್ಥಳಗಳಿಲ್ಲ, ಅವನ ಆಜ್ಞೆ ಇಲ್ಲದೆ ಒಂದು ಹುಲ್ಲು ಕಡ್ಡಿ ಕೂಡ ಅಲುಗಾಡದು – 'ತೇನ ವಿನಾ ತೃಣಮಪಿ ನಚಲತಿ' – ಎನ್ನುವ ನಿಚ್ಚಳ ಸತ್ಯವನ್ನು ಶ್ರೀಹರಿಯನ್ನೇ ಕಂಬದಿಂದ ಬರಮಾಡಿ ಲೋಕಕ್ಕೆ ದೃಢಪಡಿಸಿದ ಮಹಾಮಹಿಮರು ಹಾಗೂ ಹತ್ತು ಸಹಸ್ರ ವರ್ಷ ಹರಿನಾಮಸ್ಮರಣೆ ಮಾಡಿ ಪುಣ್ಯದ ಕಣಜವನ್ನೇ ಸಂಗ್ರಹಿಸಿದವರು ಎಂದು ಪುರಾಣ ಹೇಳುತ್ತದೆ. ಜನರನ್ನು ಸಂಕಷ್ಟದಿಂದ ಪಾರು ಮಾಡಲು, ಮುಕ್ತಿಯನ್ನು ತಿರಸ್ಕರಿಸಿ ಭೂಮಿಯ ಮೇಲೆ ಅವತಾರವೆತ್ತುತ್ತಾ, ಕೊನೆಯಲ್ಲಿ ಶ್ರೀರಾಘವೇಂದ್ರರಾಗಿ ಬಂದು ಮಂತ್ರಾಲಯದಲ್ಲಿ ನೆಲೆಸಿ ಕೋಟಿ ಕೋಟಿ ಭಕ್ತರಿಗೆ ಆಸರೆಯಾಗಿದ್ದಾರೆ.

ರಾಯರು 700 ವರ್ಷಗಳ ಕಾಲ ಬೃಂದಾವನದಲ್ಲಿ ನೆಲೆಸಿರುವ ರಹಸ್ಯ ತಿಳಿಯಲು ಭಕ್ತಾದಿಗಳು ಕಾತುರರಾಗಿರುವುದು ಸಹಜ. ರಾಯರು ಒಮ್ಮೆ ಕುಂಭಕೋಣದಲ್ಲಿದ್ದಾಗ ಅವರ ಸನ್ನಿಧಿಗೆ ಮೂವರು ಮಲಯಾಳಿ ಜ್ಯೋತಿಷಿಗಳು ಆಗಮಿಸುತ್ತಾರೆ. ಶಿಷ್ಯರ ಒತ್ತಾಯದ ಮೇರೆಗೆ ಗುರುಗಳ ಕುಂಡಲಿಯನ್ನು ಅವರಿಗೆ ತೋರಿಸಲಾಗುತ್ತದೆ. ಮೂವರು ಪ್ರತ್ಯೇಕವಾಗಿ ರಾಯರ ಕುಂಡಲಿಯನ್ನು ಅಧ್ಯಯನ ಮಾಡಿ ಕ್ರಮವಾಗಿ 100, 300 ಹಾಗೂ 700 ವರ್ಷ ರಾಯರ ಆಯುಷ್ಯದ ಪ್ರಮಾಣ ಎಂಬುದಾಗಿ ತಿಳಿಸುತ್ತಾರೆ. ಇದನ್ನು ಕೇಳಿದ ಶಿಷ್ಯರು ನಗುತ್ತಾರೆ. ಆದರೆ ರಾಯರು ಮೂವರ ಭವಿಷ್ಯವಾಣಿಯೂ ನಿಜವೆನ್ನುತ್ತಾರೆ. ತಮ್ಮ ದೇಹದ ಆಯುಷ್ಯ ಪ್ರಮಾಣ 100 ವರ್ಷ, ಗ್ರಂಥಗಳ ಆಯುಷ್ಯ ಪ್ರಮಾಣ 300 ವರ್ಷ, ತಾವು ಬೃಂದಾವನದಲ್ಲಿ ನೆಲಸುವುದು 700 ವರ್ಷ ಎಂದು ಸ್ಪಷ್ಟೀಕರಣ ನೀಡುತ್ತಾರೆ. ಅದೇ ರೀತಿ ಶ್ರೀ ರಾಘವೇಂದ್ರ ಸ್ವಾಮಿಗಳು ಬೃಂದಾವನ ಪ್ರವೇಶಿಸುವ ಮುನ್ನ ತಾವು 700 ವರ್ಷಗಳ ಕಾಲ ಬೃಂದಾವನದಲ್ಲಿ ನೆಲೆಸುವುದಾಗಿ ಭಕ್ತಾದಿಗಳಿಗೆ ಭರವಸೆ ನೀಡುತ್ತಾರೆ.

ರಾಯರು ಹಲವು ಶತಮಾನ ಗಳಿಂದ ಗಾಳಿ ಬೆಳಕು ನೀರು ಆಹಾರ ಸೇವಿಸದೆ ಬೃಂದಾವನದಲ್ಲಿ ನೆಲಸಿ, ಕಾಲಕಾಲಕ್ಕೆ ಸಕಲರ ಸಮಸ್ಯೆಗಳನ್ನು ಅರಿತು, ಎಲ್ಲರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಾ ಬಂದಿದ್ದಾರೆ ಎಂದು ಭಕ್ತರು ನಂಬುತ್ತಾರೆ. ಗುರುರಾಘವೇಂದ್ರರು ಬೃಂದಾವನಸ್ಥರಾಗಿ 135 ವರ್ಷಗಳ ನಂತರ (1671-1806) ಬ್ರಿಟಿಷ್ ದೊರೆ ಸರ್ ಥಾಮಸ್ ಮುನ್ರೋರವರಿಗೆ ಬೃಂದಾವನದಿಂದ ಸ್ವತಃ ಹೊರಬಂದು ದರ್ಶನ ನೀಡಿ ಆಂಗ್ಲ ಭಾಷೆಯಲ್ಲಿ ಅವರೊಡನೆ ನಡೆಸಿದ ಸಂಭಾಷಣೆ ಇಲ್ಲಿ ಸ್ಮರಿಸಬಹುದು. ಈ ವಿಚಾರ ಮದ್ರಾಸ್ ಗಜೆಟಿನಲ್ಲಿ 'Saint thereupon emerged from his tomb and met him: ಎಂಬುದಾಗಿ ಪ್ರಕಟವಾಗಿದೆ.

ಇಂದು ರಾಯರ 350ನೇ ಆರಾಧನೆ. ಅವರು ಬೃಂದಾವನಸ್ಥರಾಗಿ ಈಗ 350 ವರ್ಷ. ಇನ್ನೂ 350 ವರ್ಷ ಅವರು ಬೃಂದಾವನದಲ್ಲಿ ನೆಲೆಸಿ ಭಕ್ತರನ್ನು ಕಾಪಾಡುತ್ತಾರೆ ಎಂಬುದು ನಂಬಿಕೆ.

ತಿರುಮಲ: ಲಾಡುಗಳಿಗೆ ಪರಿಸರ ಸ್ನೇಹಿ ಬ್ಯಾಗ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತಿರುಮಲ ವೆಂಕಟೇಶ್ವರ ದೇವಸ್ಥಾನದ ಭಕ್ತಾದಿಗಳು ಇನ್ನು ಮುಂದೆ ಲಾಡುಗಳನ್ನು ಪರಿಸರ ಸ್ನೇಹಿ ಬ್ಯಾಗ್‌ಗಳಲ್ಲಿ ಕೊಂಡೊಯ್ಯಬಹುದು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಈ ಬ್ಯಾಗ್‌ಗಳನ್ನು ತಯಾರಿಸಿದೆ. ಈ ಬ್ಯಾಗ್‌ಗಳು ಸುರಕ್ಷಿತವಾಗಿದ್ದು, ಮೆಕ್ಕೆಜೋಳದ ಸ್ಟಾರ್ಚ್‌ನಿಂದ ತಯಾರಿಸಲಾಗಿದೆ. ಹೀಗಾಗಿ, ಈ ಬ್ಯಾಗ್‌ಗಳನ್ನು ಜಾನುವಾರುಗಳು ಸಹ ಸೇವಿಸಬಹುದಾಗಿದೆ.

ಡಿಆರ್‌ಡಿಒ ತಯಾರಿಸಿದ ಈ ಬ್ಯಾಗ್‌ಗಳ ಮಾರಾಟ ಕೌಂಟರ್ ಅನ್ನು ತಿರುಮಲ ದೇವಸ್ಥಾನ ಸಮೀಪದ ಲಾಡು ಕಾಂಪ್ಲೆಕ್ಸ್‌ನಲ್ಲಿ ಭಾನುವಾರದಿಂದ ಆರಂಭಿಸಲಾಗಿದೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ನೇತೃತ್ವದ ನಿಯೋಗದಿಂದ ಪ್ರಧಾನಿ ಭೇಟಿ

ರಾಷ್ಟ್ರವ್ಯಾಪಿ ಜಾತಿಗಣತಿಗೆ ಆಗ್ರಹ

ನವದೆಹಲಿ (ಪಿಟಿಐ): ದೇಶದೆಲ್ಲೆಡೆ ಜಾತಿಗಣತಿ ನಡೆಸಬೇಕು ಎಂದು ಆಗ್ರಹಿಸಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ 10 ಪಕ್ಷಗಳ ನಿಯೋಗವು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಇಲ್ಲಿ ಭೇಟಿ ಮಾಡಿತು.

ನಿಯೋಗದಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್, ಬಿಜೆಪಿ ಸೇರಿದಂತೆ ಇತರೆ ಪಕ್ಷಗಳ ಪ್ರತಿನಿಧಿಗಳು ಇದ್ದರು.

ಈ ವಿಷಯದ ಕುರಿತು ಪ್ರಧಾನಿಯವರ ನಿಲುವಿನ ಬಗ್ಗೆ ವರದಿಗಾರರು ಕೇಳಿದಾಗ, 'ಪ್ರಧಾನಿ ಅವರು ಜಾತಿ ಆಧಾರಿತ ಜನಗಣತಿಯನ್ನು ನಿರಾಕರಿಸಿಲ್ಲ. ಎಲ್ಲಾ ಪಕ್ಷದ ಪ್ರತಿನಿಧಿಗಳ ಮಾತನ್ನು ಅವರು ತಾಳ್ಮೆಯಿಂದ ಆಲಿಸಿದರು' ಎಂದು ಮುಖ್ಯಮಂತ್ರಿ ನಿತೀಶ್ ಕುಮಾರ್ ಹೇಳಿದರು.



ನಿತೀಶ್ ಕುಮಾರ್

'ಜಾತಿ ಆಧಾರಿತ ಜನಗಣತಿಯು ಅಭಿವೃದ್ಧಿ ಯೋಜನೆಯನ್ನು ರೂಪಿಸುವಲ್ಲಿ ನೆರವಾಗಲಿದೆ' ಎಂದು ನಿತೀಶ್ ಅಭಿಪ್ರಾಯಪಟ್ಟರು.

ಜಾತಿ ಜನಗಣತಿಗೆ ಬೆಂಬಲ ಸೂಚಿಸಿದ ತೇಜಸ್ವಿ ಯಾದವ್, 'ಈ ಐತಿಹಾಸಿಕ ಕ್ರಮವು ಜನರಿಗೆ ಸಹಾಯ ಒದಗಿಸಲಿದೆ. ಮರಗಳು, ಪ್ರಾಣಿಗಳನ್ನು ಲೆಕ್ಕ ಮಾಡಬಹುದಾದರೇ, ಜನರನ್ನೂ ಗಣತಿ ಮಾಡಬಹುದು' ಎಂದು ಅವರು ಹೇಳಿದರು.

'ಬಿಹಾರದ ವಿರೋಧ ಪಕ್ಷವಾದ ಆರ್‌ಜೆಡಿಯು ಸರ್ಕಾರದ ಜನರ ಪರ ನೀತಿಗಳನ್ನು ಸದಾ ಬೆಂಬಲಿಸಿದೆ' ಎಂದು ತಿಳಿಸಿದರು.

'ಮೋದಿ ನಿರ್ಧಾರಕ್ಕೆ ಬದ್ಧ'

ಪ್ರಧಾನಿ ನರೇಂದ್ರ ಮೋದಿ ಅವರು 'ಕುಟುಂಬದ ಪೋಷಕ'ರಾಗಿದ್ದು, ಜಾತಿ ಆಧರಿತ ಗಣತಿ ಬೇಡಿಕೆಗೆ ಸಂಬಂಧಿಸಿದಂತೆ ಅವರು ಕೈಗೊಳ್ಳುವ ನಿರ್ಧಾರವನ್ನು ಎಲ್ಲರೂ 'ಒಪ್ಪುತ್ತಾರೆ' ಎಂದು ಬಿಜೆಪಿ ನಾಯಕ ಜನಕ್ ರಾಮ್ ಹೇಳಿದರು.

ಜಾತಿ ಆಧರಿತ ಗಣತಿಗೆ ಒತ್ತಾಯಿಸಲು ಪ್ರಧಾನಿ ಭೇಟಿಗೆ ತೆರಳಿದ್ದ 10 ಪಕ್ಷಗಳ ನಿಯೋಗದ ಭಾಗವಾಗಿದ್ದ ಅವರು, ಪ್ರಧಾನಿ ಭೇಟಿ ಬಳಿಕ ಸುದ್ದಿಗಾರರ ಜೊತೆಗೆ ಮಾತನಾಡಿದರು.

ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಹೆಸರು ಉಲ್ಲೇಖಿಸದೇ ಅವರು, ಕೆಲ ಮುಖಂಡರು ಜಾತಿ, ಸಮುದಾಯದ ಹೆಸರಿನಲ್ಲಿ ರಾಜಕೀಯದಲ್ಲಿ ಮುಂದೆ ಬಂದಿದ್ದಾರೆ. ಬಳಿಕ ಕೇವಲ ತಮ್ಮ ಕುಟುಂಬದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಟೀಕಿಸಿದರು.

ಬಿಹಾರದಲ್ಲಿ ನಿತೀಶ್ ಕುಮಾರ್ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಅವರು ಜಾತಿ ಆಧರಿತ ಗಣತಿ ಕುರಿತ ಪ್ರಶ್ನೆಗೆ ನೇರ ಉತ್ತರ ನೀಡಲಿಲ್ಲ. ಪ್ರಧಾನಿಗೆ ಸಮುದಾಯದ ಸಮಗ್ರ ಅಭಿವೃದ್ಧಿ ಕುರಿತ ಅರಿವಿದ್ದು, ಸೂಕ್ತ ನಿರ್ಧಾರ ಕೈಗೊಳ್ಳುವರು ಎಂದು ಹೇಳಿದರು.

ಮೇಕೆದಾಟು: ಎನ್‌ಜಿಟಿ ಆದೇಶದ ವಿರುದ್ಧ 'ಸುಪ್ರೀಂ'ಗೆ ತಮಿಳುನಾಡು

ಚೆನ್ನೈ (ಪಿಟಿಐ): ಮೇಕೆದಾಟು ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಆದೇಶವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವುದಾಗಿ ತಮಿಳುನಾಡು ಸರ್ಕಾರ ಸೋಮವಾರ ತಿಳಿಸಿದೆ.

ಯೋಜನಾ ಸ್ಥಳದಲ್ಲಿ ನಿರ್ಮಾಣ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆಯೇ ಎನ್ನುವುದನ್ನು ಪರಿಶೀಲಿಸಲು ಸಮಿತಿ ರಚಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಯ ದಕ್ಷಿಣ (ಚೆನ್ನೈ)ದ ಪೀಠ ನೀಡಿದ್ದ ಆದೇಶವನ್ನು ನವದೆಹಲಿಯಲ್ಲಿನ ಪ್ರಧಾನ ಪೀಠದ ರದ್ದುಪಡಿಸಿತ್ತು. ಈ ತೀರ್ಪನ್ನು ಪ್ರಶ್ನಿಸಿ ತಮಿಳುನಾಡು ಈ ಅರ್ಜಿ ಸಲ್ಲಿಸಲಿದೆ.

ತಮಿಳುನಾಡಿಗೆ ಪ್ರತಿಕ್ರಿಯೆ ಸಲ್ಲಿಸಲು ಅವಕಾಶ ನೀಡದೆಯೇ ಎನ್‌ಜಿಟಿ ಜೂನ್ 17ರಂದು ಆದೇಶ ಹೊರಡಿಸಿದೆ. ಹೀಗಾಗಿ, ಈ ಅರ್ಜಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಮೇಕೆದಾಟು ಯೋಜನೆಯನ್ನು ಕರ್ನಾಟಕ ಅನುಷ್ಠಾನಗೊಳಿಸದಂತೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ರೂಪಿಸಿರುವ ನೀತಿಯನ್ನು ತಮಿಳುನಾಡು ವಿಧಾನಸಭೆಯಲ್ಲಿ ಜಲಸಂಪನ್ಮೂಲ ಸಚಿವ ದುರೈಮುರುಗನ್ ಮಂಡಿಸಿದ್ದಾರೆ.

'ಯೋಜನಾ ಸ್ಥಳದಲ್ಲಿ ಕರ್ನಾಟಕ ಪ್ರಾಥಮಿಕ ಕಾರ್ಯಗಳನ್ನು ಕೈಗೊಂಡಿದೆ ಎನ್ನುವ ಮಾಧ್ಯಮಗಳ ವರದಿಗಳನ್ನು ಗಮನಿಸಲಾಗಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಕಾರ್ಯಗಳನ್ನು ಕೈಗೊಳ್ಳದಂತೆ ಕರ್ನಾಟಕಕ್ಕೆ ಸಲಹೆ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕೋರಲಾಗಿದೆ' ಎಂದು ದುರೈಮುರುಗನ್ ವಿವರಿಸಿದ್ದಾರೆ.

ವಕೀಲರ ಹಿರಿತನ: 'ಸುಪ್ರೀಂ'ನಿಂದ ಪರಿಶೀಲನೆ

ನವದೆಹಲಿ (ಪಿಟಿಐ): ಕೆಲವು ಹೈಕೋರ್ಟ್‌ಗಳಲ್ಲಿ ಗೋಪ್ಯ ಮತದಾನದ ಮೂಲಕ ವಕೀಲರಿಗೆ ಹಿರಿತನವನ್ನು ಒದಗಿಸುವ 'ಏಕಪಕ್ಷೀಯ ಮತ್ತು ತಾರತಮ್ಯದಿಂದ' ಕೂಡಿದ ಕ್ರಮಗಳ ವಿರುದ್ಧ ಸಲ್ಲಿಸಲಾಗಿರುವ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂ ಕೋರ್ಟ್ ಹೇಳಿದ್ದು, ಒಂದೆರಡು ವಾರಗಳಲ್ಲಿ ಕೆಲವು ಬೆಳವಣಿಗೆಗಳು ನಡೆಯುವುದು ನಿಶ್ಚಿತ ಎಂದು ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವೊಂದು ಹಿರಿಯ ವಕೀಲರಾದ ಇಂದಿರಾ ಜೈಸಿಂಗ್ ಅವರು ಸಲ್ಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಗಂಭೀರವಾಗಿ ಪರಿಗಣಿಸುವುದಾಗಿ ತಿಳಿಸಿತು. ವಕೀಲರಿಗೆ ಹಿರಿತನ ನೀಡುವ ವಿಚಾರದಲ್ಲಿ 2017ರಲ್ಲಿ ರೂಪಿಸಲಾದ ಮಾರ್ಗಸೂಚಿಯನ್ನು ಈ ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ನಿಯೋಜಿತ ಸಮಿತಿಯೊಂದು ನೀಡುವ ಅಂಕಗಳ ಆಧಾರದಲ್ಲೇ ವಕೀಲರ ಹಿರಿತನವನ್ನು ನಿರ್ಧರಿಸಬೇಕು, 'ಅನಿವಾರ್ಯ' ಸಂದರ್ಭಗಳಲ್ಲಿ ಮಾತ್ರ ಮತದಾನದ ಮೂಲಕ ಅದನ್ನು ನಿರ್ಧರಿಸಬೇಕು. ಆದರೆ ಕೆಲವು ಹೈಕೋರ್ಟ್‌ಗಳು ಮತದಾನ ವಿಧಾನವನ್ನು ನಿಯಮ ಎಂಬಂತೆ ರೂಪಿಸಿಕೊಂಡಿವೆ ಎಂದು ಜೈಸಿಂಗ್ ಅವರು ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿದ್ದರು.

ವಕೀಲರಿಗೆ ಹಿರಿತನವನ್ನು ಪರಿಗಣಿಸುವ ಸಂಬಂಧ ಆರಂಭಿಕ ನಿರ್ಧಾರ ಕೈಗೊಳ್ಳುವ ಸುಪ್ರೀಂ ಕೋರ್ಟ್‌ನ ಸಮಿತಿಯಲ್ಲಿ ಸೋಲಿ ಸೊರಾಬ್ಜಿ ಅವರು ಸದಸ್ಯರಾಗಿದ್ದರು. ಅವರು ನಿಧನರಾಗಿರುವ ಹಿನ್ನೆಲೆಯಲ್ಲಿ ಇನ್ನೊಬ್ಬರನ್ನು ಸಮಿತಿಗೆ ನೇಮಿಸಬೇಕಾಗಿದೆ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಅನಿರುದ್ಧ ಬೋಸ್ ಅವರಿರುವ ಪೀಠ ಹೇಳಿತು.

ಶ್ರೀನಗರ: ಮುಖ್ಯ ಕಮಾಂಡರ್ ಸೇರಿ ಇಬ್ಬರು ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಅಲೂಚಿ ಬಾಗ್ ಪ್ರದೇಶದಲ್ಲಿ ಸೋಮವಾರ ಸಂಜೆ ದಿ ರೆಸಿಸ್ಟನ್ಸ್ ಫ್ರಂಟ್ (ಟಿಆರ್‌ಎಫ್)ನ ಮುಖ್ಯ ಕಮಾಂಡರ್ ಸೇರಿದಂತೆ ಇಬ್ಬರು ಉಗ್ರರನ್ನು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಹತ್ಯೆಗೈದಿದ್ದಾರೆ.

ಈ ಕುರಿತು ಕಾಶ್ಮೀರ ವಲಯ ಪೊಲೀಸ್ ಟ್ವೀಟ್ ಮಾಡಿದ್ದು, ಈ ಪ್ರದೇಶದಲ್ಲಿ ಭದ್ರತಾ ಪಡೆಗೆ ಸಿಕ್ಕಿರುವ ದೊಡ್ಡ ಯಶಸ್ಸು ಇದಾಗಿದೆ ಎಂದು ಹೇಳಿಕೊಂಡಿದೆ.

ಹತ್ಯೆಗೀಡಾದವರನ್ನು ಲಷ್ಕರ್-ಎ-ತಯಬಾದ (ಎಲ್‌ಇಟಿ) ದಿ ರೆಸಿಸ್ಟನ್ಸ್ ಫ್ರಂಟ್ ಉಗ್ರ ಕಮಾಂಡರ್ ಅಬ್ಬಾಸ್ ಶೇಖ್ ಮತ್ತು ಆತನ ಎರಡನೇ ಕಮಾಂಡ್ ಸಕೀಬ್ ಮಂಜೂರ್ ಎಂದು ಗುರುತಿಸಲಾಗಿದೆ.

ಕಣಿವೆಯಲ್ಲಿರುವ 10 ಪ್ರಮುಖ ಉಗ್ರರಲ್ಲಿ ಶೇಖ್ ಮತ್ತು ಮಂಜೂರ್ ಕೂಡ ಇದ್ದರು. ಸ್ಥಳೀಯ ಬಾಲಕರೊಂದಿಗೆ ಈ ಇಬ್ಬರು ಕ್ರಿಕೆಟ್ ಆಡುತ್ತಿದ್ದ ಸಂದರ್ಭದಲ್ಲಿ ಅವರಿದ್ದ ಸ್ಥಳವನ್ನು ಪೊಲೀಸರು ಪತ್ತೆ ಮಾಡಿದ್ದರು.

ದೋಷಾರೋಪ ಪಟ್ಟಿ ಸಲ್ಲಿಸಿದ ಎನ್‌ಐಎ

ಯುದ್ಧ ಬಯಸಿದ್ದ ಎಲ್ಗಾರ್ ಪರಿಷತ್ ಆರೋಪಿಗಳು

ಮುಂಬೈ (ಪಿಟಿಐ): 'ದೇಶದ ವಿರುದ್ಧ ಯುದ್ಧ ಘೋಷಿಸಿ, ತನ್ನದೇ ಸರ್ಕಾರ ಸ್ಥಾಪಿಸುವುದು ಆರೋಪಿಗಳ ಗುರಿಯಾಗಿದೆ' ಎಂದು ಎಲ್ಗಾರ್ ಪರಿಷತ್ – ಮಾವೊವಾದಿ ಸಂಪರ್ಕ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳವು(ಎನ್‌ಐಎ) ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಹೇಳಲಾಗಿದೆ.

ಈ ತಿಂಗಳ ಆರಂಭದಲ್ಲಿ ಎಲ್ಗಾರ್ ಪರಿಷತ್ – ಮಾವೊವಾದಿ ಸಂಪರ್ಕ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ದೋಷರೋಪ ಪಟ್ಟಿಯನ್ನು ಸಲ್ಲಿಸಿದೆ. ಇದರ ಪ್ರತಿ ಸೋಮವಾರ ಲಭ್ಯವಾಗಿದೆ. ಈ ದೋಷಾರೋಪ ಪಟ್ಟಿಯಲ್ಲಿ ಮಾನವ ಹಕ್ಕುಗಳ ಹೋರಾಟಗಾರರು ಸೇರಿದಂತೆ 15 ಆರೋಪಿಗಳ ವಿರುದ್ಧ 17 ಆರೋಪಗಳನ್ನು ಮಾಡಲಾಗಿದೆ. ಈ ಆರೋಪಿಗಳ ವಿರುದ್ಧ ಕಠಿಣ ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಮತ್ತು ಭಾರತೀಯ ದಂಡ ಸಂಹಿತೆಯಡಿ (ಐಪಿಸಿ) ಆರೋಪಗಳನ್ನು ದಾಖಲಿಸುವಂತೆ ನ್ಯಾಯಾಲಯಕ್ಕೆ ಕೋರಲಾಗಿದೆ.



'ಆರೋಪಿಗಳು ನಿಷೇಧಿತ ಸಿಪಿಐ (ಮಾವೋವಾದಿ) ಸಂಘಟನೆಯ ಸಕ್ರಿಯ ಸದಸ್ಯರಾಗಿದ್ದಾರೆ. ಈ ಪ್ರಕರಣ ಸಂಬಂಧ ಸಾಮಾಜಿಕ ಕಾರ್ಯಕರ್ತರಾದ ಸುಧಾ ಭಾರದ್ವಾಜ್ , ವರ್ನನ್ ಗೊನ್ಸಾಲ್ವೆಸ್, ವರವರ ರಾವ್, ಹನಿ ಬಾಬು, ಆನಂದ್ ತೇಲ್ತುಂಬ್ಡೆ, ಶೋಮ ಸೇನ್, ಗೌತಮ್ ನವಲಖಾ ಸೇರಿದಂತೆ ಇತರನ್ನು ಬಂಧಿಸಲಾಗಿದೆ. ಕ್ರಾಂತಿ ಮತ್ತು ಸಶಸ್ತ್ರ ಹೋರಾಟದ ಮೂಲಕ ರಾಜ್ಯದಿಂದ ಅಧಿಕಾರ ಕಸಿದು, 'ಜನತಾ ಸರ್ಕಾರ' ಸ್ಥಾಪಿಸುವುದೇ ಇವರ ಗುರಿ' ಎಂದು ಎನ್‌ಐಎ ದೂರಿದೆ.

ಮಹಾರಾಷ್ಟ್ರ ಸರ್ಕಾರ ಮತ್ತು ಭಾರತ ಸರ್ಕಾರದ ವಿರುದ್ಧ ಯುದ್ಧ ನಡೆಸಲು ಆರೋಪಿಗಳು ಸಂಚು ರೂಪಿಸಿದ್ದರು. ಪುಣೆಯಲ್ಲಿ ನಡೆದ ಎಲ್ಗಾರ್ ಪರಿಷತ್ ಸಭೆಯಲ್ಲಿ ಆರೋಪಿಗಳು ಪ್ರಚೋದನಕಾರಿ ಹಾಡುಗಳು ಮತ್ತು ಕಿರು ನಾಟಕಗಳನ್ನು ಪ್ರದರ್ಶಿಸಿದ್ದರು. ಅಲ್ಲದೆ ನಕ್ಸಲ್ ಸಾಹಿತ್ಯಗಳನ್ನು ವಿತರಿಸಿದ್ದರು ಎಂದು ದೋಷಾರೋಪ ಪಟ್ಟಿಯಲ್ಲಿ ಹೇಳಲಾಗಿದೆ.

'ಭಾರತದ ಭೂ ಪ್ರದೇಶಗಳನ್ನು ಪ್ರತ್ಯೇಕಗೊಳಿಸಲು ಆರೋಪಿಗಳು ಜನರನ್ನು ಉತ್ತೇಜಿಸುತ್ತಿದ್ದರು. ಸ್ಫೋಟಕ ವಸ್ತುಗಳ ಮೂಲಕ ಜನರನ್ನು ಬೆದರಿಸುತ್ತಿದ್ದರು. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಶಿಯಲ್ ಸೈನ್ಸ್ ನಂತಹ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಭಯೋತ್ಪಾದನೆ ಕೃತ್ಯಗಳಿಗೆ ಬಳಸಿಕೊಳ್ಳಲು ತನ್ನ ಗುಂಪಿಗೆ ಸೇರ್ಪಡೆಗೊಳಿಸಿದ್ದಾರೆ' ಎಂದು ದೂರಲಾಗಿದೆ.

2017ರ ಡಿಸೆಂಬರ್ 31ರಂದು ಪುಣೆಯಲ್ಲಿ ಎಲ್ಗಾರ್ ಪರಿಷತ್ ಸಭೆ ನಡೆದಿತ್ತು. ಅದರ ಪರಿಣಾಮವಾಗಿ ಮರುದಿನ ಕೋರೆಗಾಂವ್-ಭೀಮಾ ಯುದ್ಧ ಸ್ಮಾರಕದ ಬಳಿ ಹಿಂಸಾಚಾರ ಭುಗಿಲೆದ್ದಿತ್ತು ಎಂದು ಪೊಲೀಸರು ಆರೋಪಿಸಿದ್ದಾರೆ.

ಕಲ್ಯಾಣ್ ಸಿಂಗ್ ಅಂತ್ಯಕ್ರಿಯೆ: ಗಣ್ಯರಿಂದ ಅಂತಿಮ ನಮನ

ಅಲಿಗಡ, ಬುಲಂದ್‌ಶಹರ್ (ಪಿಟಿಐ): ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ, ಬಿಜೆಪಿಯ ಹಿರಿಯ ಮುಖಂಡ ಕಲ್ಯಾಣ್ ಸಿಂಗ್ ಅವರ ಅಂತ್ಯಕ್ರಿಯೆಯು ಸರ್ಕಾರಿ ಗೌರವಗಳೊಂದಿಗೆ ಬುಲಂದ್‌ಶಹರ್‌ನ ನರೋರಾ ಪಟ್ಟಣದ ಬನ್ಸಿ ಘಾಟ್‌ನಲ್ಲಿ ಸೋಮವಾರ ನೆರವೇರಿತು.

ಕಲ್ಯಾಣ್ ಸಿಂಗ್ ಅವರ ಪುತ್ರ ರಾಜವೀರ್ ಸಿಂಗ್ ಅಂತಿಮ ವಿಧಿವಿಧಾನಗಳನ್ನು ನೆರವೇರಿಸಿದರು.

ಕಲ್ಯಾಣ್ ಸಿಂಗ್ ಅವರ ಪಾರ್ಥಿವ ಶರೀರವನ್ನು ಅಲಿಗಡದಿಂದ ಬುಲಂದ್ ಶಹರ್‌ಗೆ ತರಲಾಯಿತು. ನರೋರಾ ಪಟ್ಟಣದ ಬನ್ಸಿ ಘಾಟ್‌ಗೂ ಒಯ್ಯುವ ಮುನ್ನ ಪಾರ್ಥಿವ ಶರೀರವನ್ನು ಕೆಲಕಾಲ ಸಾರ್ವಜನಿಕ ದರ್ಶನಕ್ಕೆ ಇಡಲಾಗಿತ್ತು.

ಕೇಂದ್ರ ಗೃಹಸಚಿವ ಅಮಿತ್ ಶಾ, ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ವತಂತ್ರ ದೇವ್ ಸಿಂಗ್ ಸೇರಿದಂತೆ ಇನ್ನಿತರ ಗಣ್ಯರು ಅಂತಿಮ ನಮನ ಸಲ್ಲಿಸಿದರು.

ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ, ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಉತ್ತರ ಪ್ರದೇಶ ಉಪಮುಖ್ಯಮಂತ್ರಿ ಕೇಶವ ಪ್ರಸಾದ್ ಮೌರ್ಯ, ಬಿಜೆಪಿ ನಾಯಕಿ ಉಮಾ ಭಾರತಿ ಸೇರಿದಂತೆ ಹಲವರು ಅಂತ್ಯಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು. ಪಕ್ಷದ ನಾಯಕರು, ಕಾರ್ಯಕರ್ತರು ಸೇರಿದಂತೆ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.



ಉತ್ತರ ಪ್ರದೇಶದ ಅಲಿಘಡದಲ್ಲಿ ಸೋಮವಾರ ಬಿಜೆಪಿಯ ಹಿರಿಯ ಮುಖಂಡ ಕಲ್ಯಾಣ್ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಂತಿಮ ನಮನ ಸಲ್ಲಿಸಿದರು —ಪಿಟಿಐ ಚಿತ್ರ

ರಸ್ತೆಗೆ ಕಲ್ಯಾಣ್‌ಸಿಂಗ್ ಹೆಸರು; (ಲಖನೌ ವರದಿ): ಉತ್ತರ ಪ್ರದೇಶದ ಲಖನೌ, ಅಯೋಧ್ಯಾ ಸಹಿತ ಆರು ಜಿಲ್ಲೆಗಳಲ್ಲಿ ತಲಾ ಒಂದೊಂದು ರಸ್ತೆಗಳಿಗೆ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರ ಹೆಸರು ಇಡಲಾಗುವುದು ಎಂದು ರಾಜ್ಯ ಸರ್ಕಾರ ಸೋಮವಾರ ಘೋಷಿಸಿದೆ.

'ಜಿಲ್ಲೆಯ ಒಂದು ಲೋಕೋಪಯೋಗಿ ಇಲಾಖೆಯ ರಸ್ತೆಗೆ ಕಲ್ಯಾಣ್ ಸಿಂಗ್ ಹೆಸರು ಇಡಲಾಗುವುದು. ಲಖನೌ, ಅಯೋಧ್ಯೆಯ ಜತೆಗೆ ಅಲಿಗಡ, ಇಟಾ, ಬುಲಂದ್‌ಶೆಹರ್ ಮತ್ತು ಪ್ರಯಾಗ್‌ರಾಜ್ ಜಿಲ್ಲೆಗಳಲ್ಲಿ ಈ ನಾಮಕರಣ ಪ್ರಕ್ರಿಯೆ ನಡೆಯಲಿದೆ. ಇದಕ್ಕಾಗಿ ಇಲಾಖೆ ಪ್ರಸ್ತಾವ ಸಿದ್ಧಪಡಿಸುತ್ತಿದೆ' ಎಂದು ಉಪಮುಖ್ಯಮಂತ್ರಿ ಕೇಶವ್ ಪ್ರಸಾದ್ ಮೌರ್ಯ ತಿಳಿಸಿದ್ದಾರೆ.

ಎರಡನೇ ಟೆಸ್ಟ್‌ನಲ್ಲಿ ಜಾಹೀರಾತು ಫಲಕದ ಮೇಲೆ ಬಿದ್ದ ಬೌಲರ್; ನಾಳೆಯಿಂದ 3ನೇ ಪಂದ್ಯ

ಇಂಗ್ಲೆಂಡ್ ತಂಡಕ್ಕೆ ವುಡ್ ಅಲಭ್ಯ

ಲಂಡನ್ (ಎಎಫ್‌ಪಿ): ಭಾರತ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಸೋಲು ಕಂಡಿರುವ ಇಂಗ್ಲೆಂಡ್ ತಂಡ ಮೂರನೇ ಪಂದ್ಯದಲ್ಲಿ ಮಧ್ಯಮ ವೇಗಿ ಮಾರ್ಕ್ ವುಡ್ ಅವರ ಅನುಪಸ್ಥಿತಿಯಲ್ಲಿ ಕಣಕ್ಕೆ ಇಳಿಯಲಿದೆ. ಭುಜದ ನೋವಿನಿಂದ ಬಳಲುತ್ತಿರುವ ವುಡ್ ಅವರನ್ನು ತಂಡಕ್ಕೆ ಆಯ್ಕೆ ಮಾಡದೇ ಇರಲು ನಿರ್ಧರಿಸಲಾಗಿದೆ.

ಐದು ಪಂದ್ಯಗಳ ಸರಣಿಯ ಮೊದಲ ಪಂದ್ಯ ಮಳೆಯಿಂದಾಗಿ ಡ್ರಾ ಆಗಿತ್ತು. ಎರಡನೇ ಪಂದ್ಯದ ಕೊನೆಯ ದಿನ ನಾಟಕೀಯ ಬೆಳವಣಿಗೆಯ ಅಂತ್ಯದಲ್ಲಿ ಭಾರತ ಭರ್ಜರಿ ಜಯ ಗಳಿಸಿತ್ತು. ಮೂರನೇ ಪಂದ್ಯವನ್ನು ಗೆದ್ದು ಸರಣಿಯಲ್ಲಿ ಸಮಬಲ ಸಾಧಿಸುವ ಆತಿಥೇಯರ ಕನಸಿಗೆ ವುಡ್ ಅನುಪಸ್ಥಿತಿ ಗಾಯದ ಮೇರೆ ಬರೆ ಎಳೆದಂತೆ ಮಾಡಿದೆ.

ಲಾರ್ಡ್ಸ್‌ನಲ್ಲಿ ನಡೆದಿದ್ದ ಎರಡನೇ ಟೆಸ್ಟ್‌ನ ನಾಲ್ಕನೇ ದಿನ ಬೌಂಡರಿ ಗೆರೆ ಬಳಿ ಚೆಂಡನ್ನು ತಡೆಯಲು ಡೈವ್ ಮಾಡಿದಾಗ ವುಡ್ ಅವರು ಜಾಹೀರಾತು ಫಲಕವೊಂದರ ಮೇಲೆ ಬಿದ್ದಿದ್ದರು. ಇದರಿಂದ ಬಲ ಭುಜದಲ್ಲಿ ನೋವು ಕಾಣಿಸಿಕೊಂಡಿತ್ತು. ಹೀಗಿದ್ದೂ ವುಡ್ ಮರುದಿನ ಬೌಲಿಂಗ್ ಮಾಡಿದ್ದರು. 31 ವರ್ಷದ ಅವರ ಕೆಲವು ಎಸೆತಗಳು ತಾಸಿಗೆ 150 ಕಿಲೋಮೀಟರ್ ವೇಗದಲ್ಲಿ ಸಾಗಿದ್ದವು.

ಆದರೆ ನೋವು ಇನ್ನೂ ಇರುವುದರಿಂದಾಗಿ ಮೂರನೇ ಟೆಸ್ಟ್‌ಗೆ ಆಯ್ಕೆ ಮಾಡಿರುವ ಅಂತಿಮ 11ರ ಬಳಗದಿಂದ ಅವರನ್ನು ಕೈಬಿಡಲಾಗಿದೆ ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿಯ ಪ್ರಕಟಣೆ ತಿಳಿಸಿದೆ. ಪಂದ್ಯ ಇದೇ 25ರ ಬುಧವಾರ ಹೆಡಿಂಗ್ಲಿಯಲ್ಲಿ ಆರಂಭವಾಗಲಿದೆ.

'ವುಡ್ ತಂಡದೊಂದಿಗೆ ಇರುವರು. ಲೀಡ್ಸ್‌ನಲ್ಲಿ ಅವರ ಚಿಕಿತ್ಸೆಗೆ ಏರ್ಪಾಟು ಮಾಡಲಾಗಿದೆ. ಮೂರನೇ ಪಂದ್ಯದ ಕೊನೆಯಲ್ಲಿ ಅವರನ್ನು ಪರೀಕ್ಷೆಗೆ ಒಳಪಡಿಸಿ ಮುಂದಿನ ಪಂದ್ಯದಲ್ಲಿ ಕಣಕ್ಕೆ ಇಳಿಸಬೇಕೇ ಬೇಡವೇ ಎಂಬುದರ ಬಗ್ಗೆ ನಿರ್ಧರಿಸಲಾಗುವುದು' ಎಂದು ತಿಳಿಸಲಾಗಿದೆ.ಡರ್ಹಂ ಆಟಗಾರನಾಗಿರುವ ವುಡ್ ಪದೇ ಪದೇ ಗಾಯದ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಇದು ಅವರ ವೃತ್ತಿಜೀವನಕ್ಕೆ ಅಡ್ಡಿಯಾಗುತ್ತಿದೆ.

ವೇಗಿಗಳಾದ ಸ್ಟುವರ್ಟ್ ಬ್ರಾಡ್, ಜೊಫ್ರಾ ಆರ್ಚರ್, ಒಲಿ ಸ್ಟೋನ್ ಮತ್ತು ಕ್ರಿಸ್ ವೋಕ್ಸ್ ಕೂಡ ಗಾಯದಿಂದಾಗಿ ತಂಡಕ್ಕೆ ಲಭ್ಯವಿಲ್ಲ. ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಮಾನಸಿಕ ಆರೋಗ್ಯ ಕಾಯ್ದುಕೊಳ್ಳುವುದಕ್ಕಾಗಿ ತಂಡದಿಂದ ದೂರ ಉಳಿದಿದ್ದಾರೆ.



ಮಾರ್ಕ್ ವುಡ್ –ಎಎಫ್‌ಪಿ ಚಿತ್ರ

ದಿಗ್ಗಜರ ಅಸಮಾಧಾನ

ಮಾರ್ಕ್ ವುಡ್ ಅವರು ಹೆಚ್ಚು ಕಾಳಜಿಯಿಂದ ಆಡಬೇಕಾಗಿತ್ತು ಎಂದು ಇಂಗ್ಲೆಂಡ್‌ನ ಅನೇಕರು ಅಭಿಪ್ರಾಯಪಟ್ಟಿದ್ದಾರೆ. ಅಂಗಣದಲ್ಲಿ ಅತ್ಯುತ್ಸಾಹ ಒಳ್ಳೆಯದಲ್ಲ ಎಂದು ದಿಗ್ಗಜ ಕ್ರಿಕೆಟಿಗರು ಸಲಹೆ ನೀಡಿದ್ದಾರೆ.


'ಹುಚ್ಚುತನ ಬಿಟ್ಟು ಆಡಬೇಕು' ಎಂದು ಮಾಜಿ ಬ್ಯಾಟ್ಸ್‌ಮನ್ ಜೆಫ್ರಿ ಬಾಯ್ಕಾಟ್ ಅವರು ಬ್ರಿಟನ್‌ನ ಡೈಲಿ ಟೆಲಿಗ್ರಾಫ್‌ಗೆ ಬರೆದ ಅಂಕಣದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

'ಹೊಸ ಪೀಳಿಗೆಯ ಕ್ರಿಕೆಟಿಗರು ರನ್ ಉಳಿಸುವುದಕ್ಕಾಗಿ ನಿರಾತಂಕವಾಗಿ ಡೈವ್ ಮಾಡುತ್ತಾರೆ. ಅವರ ಪ್ರಯತ್ನ ಪ್ರಶಂಸನೀಯ. ಆದರೆ ಇದರಿಂದ ಆಗುವ ತೊಂದರೆಗಳ ಬಗ್ಗೆ ಅರಿವಿರಬೇಕು' ಎಂದು ಅವರು ಹೇಳಿದ್ದಾರೆ.

ಓವಲ್ ಗೆಲುವಿಗೆ ಐವತ್ತರ ಸಂಭ್ರಮ



ಭಾರತ ಕ್ರಿಕೆಟ್ ತಂಡ ಇಂಗ್ಲೆಂಡ್‌ನ ಓವಲ್ ಕ್ರೀಡಾಂಗಣದಲ್ಲಿ ಚೊಚ್ಚಲ ಟೆಸ್ಟ್ ಗೆಲುವು ಸಾಧಿಸಿ ಆಗಸ್ಟ್ 24ಕ್ಕೆ 50 ವರ್ಷ ತುಂಬಲಿದೆ. 1971ರಲ್ಲಿ ನಡೆದ ಸರಣಿಯ ಮೂರನೇ ಹಾಗೂ ಅಂತಿಮ ಪಂದ್ಯದಲ್ಲಿ ಅಜಿತ್ ವಾಡೇಕರ್ ಬಳಗ ಭರ್ಜರಿ ಜಯ ಸಾಧಿಸಿತ್ತು.


ಬಿ.ಎಸ್. ಚಂದ್ರಶೇಖರ್

ನಾಯಕರು
ಭಾರತ: **ಅಜಿತ್ ವಾಡೇಕರ್**
ಇಂಗ್ಲೆಂಡ್: ರೇ ಇಲಿಂಗ್ವರ್ಥ್

ಸ್ಕೋರು ವಿವರ
ಮೊದಲ ಇನಿಂಗ್ಸ್ ಇಂಗ್ಲೆಂಡ್: **108.4** ಓವರ್‌ಗಳಲ್ಲಿ **355**; ಭಾರತ **117.3** ಓವರ್‌ಗಳಲ್ಲಿ **284**
ಎರಡನೇ ಇನಿಂಗ್ಸ್ ಇಂಗ್ಲೆಂಡ್: **45.1** ಓವರ್‌ಗಳಲ್ಲಿ **101**; ಭಾರತ: **101** ಓವರ್‌ಗಳಲ್ಲಿ **6**ಕ್ಕೆ **174**
ಫಲಿತಾಂಶ: ಭಾರತಕ್ಕೆ **4** ವಿಕೆಟ್‌ಗಳ ಜಯ; **1-0**ಯಿಂದ ಸರಣಿ ಗೆಲುವು.

ಗರಿಷ್ಠ ರನ್ (ಪಂದ್ಯದಲ್ಲಿ)

ಭಾರತ	
ದಿಲೀಪ್ ಸರ್ದೇಸಾಯಿ	94
ಅಜಿತ್ ವಾಡೇಕರ್	93
ಫಾರೂಕ್ ಎಂಜಿನಿಯರ್	87
ಇಂಗ್ಲೆಂಡ್	
ಜಾನ್ ಜೇಮ್ಸನ್	98
ರಿಚರ್ಡ್ ಹಟನ್	94
ಅಲನ್ ನಾಟ್	91

ಹೆಚ್ಚು ವಿಕೆಟ್
ಭಾರತ
ಬಿ. ಎಸ್.ಚಂದ್ರಶೇಖರ್ 114ಕ್ಕೆ8
ಎಸ್.ವೆಂಕಟರಾಘವನ್ 107ಕ್ಕೆ4
ಇಂಗ್ಲೆಂಡ್
ರೇ ಇಲಿಂಗ್ವರ್ಥ್ 110ಕ್ಕೆ5
ಡೆರೆಕ್ ಅಂಡರ್‌ವುಡ್ 121ಕ್ಕೆ4


ಏಷ್ಯಾಕಪ್‌ಗೆ ಅರ್ಹತೆ ಗಳಿಸಿದ ಭಾರತ ಬ್ಯಾಸ್ಕೆಟ್‌ಬಾಲ್ ತಂಡ

ಭಾರತ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ಏಷ್ಯಾಕಪ್ ಅರ್ಹತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ತಂಡವು ಫಿಬಾ ಏಷ್ಯಾಕಪ್ ಟೂರ್ನಿಗೆ ಸತತ 10ನೇ ಬಾರಿ ಅರ್ಹತೆ ಗಿಟ್ಟಿಸಿತು. ಇದರೊಂದಿಗೆ 2023ರ ವಿಶ್ವಕಪ್ ಟೂರ್ನಿಯ ಕ್ವಾಲಿಫೈಯರ್ಸ್‌ನಲ್ಲಿ ಆಡಲೂ ಅರ್ಹತೆ ಗಳಿಸಿತು.

ಸೌದಿ ಅರೇಬಿಯಾದ ಜೆಡ್ಡಾದಲ್ಲಿ ನಡೆದ ಅರ್ಹತಾ ಟೂರ್ನಿಯಲ್ಲಿ ಭಾರತ ಮೊದಲ ಪಂದ್ಯದಲ್ಲಿ 61–80ರಿಂದ ಆತಿಥೇಯ ತಂಡಕ್ಕೆ ಮಣಿಯಿತು. ಆದರೆ ಎರಡನೇ ಪಂದ್ಯದಲ್ಲಿ ಪುಟಿದೆದ್ದು 79–77ರಿಂದ ಪ್ಯಾಲೆಸ್ಟೀನ್ ತಂಡವನ್ನು ಪರಾಭವಗೊಳಿಸಿತು. ಇದರೊಂದಿಗೆ 'ಎಚ್' ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು.

ಏಷ್ಯಾಕಪ್ ಟೂರ್ನಿಯು 2022ರ ಜುಲೈನಲ್ಲಿ ಇಂಡೊನೇಷ್ಯಾದ ಜಕಾರ್ತದಲ್ಲಿ ನಿಗದಿಯಾಗಿದೆ.

ಇಂಡೊನೇಷ್ಯಾ, ಲೆಬನಾನ್, ಬಹರೇನ್, ಫಿಲಿಪ್ಪೀನ್ಸ್, ಕೊರಿಯಾ, ಚೀನಾ, ಜಪಾನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇರಾನ್, ಸಿರಿಯಾ, ಜೋರ್ಡಾನ್, ಕಜಕಸ್ತಾನ ಮತ್ತು ಸೌದಿ ಅರೇಬಿಯಾ ಏಷ್ಯಾಕಪ್ ಟೂರ್ನಿಗೆ ಅರ್ಹತೆ ಗಳಿಸಿದ ಇನ್ನುಳಿದ ತಂಡಗಳು.

ತಂಡಕ್ಕೆ ₹ 10 ಲಕ್ಷ ಬಹುಮಾನ: ಭಾರತ ತಂಡವನ್ನು ಅಭಿನಂದಿಸಿರುವ ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಕೆ.ಗೋವಿಂದರಾಜು ₹ 10 ಲಕ್ಷ ಬಹುಮಾನ ಪ್ರಕಟಿಸಿದ್ದಾರೆ.

ಯಂಗ್ ಒರಿಯನ್ಸ್, ಎಂಇಜಿಗೆ ಪ್ರಶಸ್ತಿ

ಬೆಂಗಳೂರು: ನಿತಿನ್ ಬಿಜು (18 ಪಾಯಿಂಟ್ಸ್) ಹಾಗೂ ಜಿನು ಥಾಮಸ್ (15) ಅವರ ಅಮೋಘ ಆಟದ ನೆರವಿನಿಂದ ಎಂಇಜಿ ತಂಡವು ರಾಜ್ಯ 'ಬಿ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು.

ಸೋಮವಾರ ನಡೆದ ಫೈನಲ್ ಹಣಾಹಣಿಯಲ್ಲಿ ಆ ತಂಡವು 64–40ರಿಂದ ಎಂ.ಎನ್.ಕೆ.ರಾವ್ ತಂಡವನ್ನು ಸೋಲಿಸಿತು.

'ಎ' ಡಿವಿಷನ್ ಪ್ರಶಸ್ತಿಯು ಯಂಗ್ ಒರಿಯನ್ಸ್ ಪಾಲಾಯಿತು. ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದರಿಂದ ಆ ತಂಡಕ್ಕೆ ಪ್ರಶಸ್ತಿ ಒಲಿಯಿತು.

'ಎ' ಡಿವಿಷನ್ ಅಂತಿಮ ಲೀಗ್ ಪಂದ್ಯದಲ್ಲಿ ಎಎಸ್‌ಸಿ ತಂಡವು 99–97ರಿಂದ ಬ್ಯಾಂಕ್ ಆಫ್ ಬರೋಡಾ ಎದುರು ಗೆದ್ದಿತು.

ಅನಿಶ್ಚಿತ ಸ್ಥಿತಿಯಲ್ಲಿ ಅಫ್ಗನ್ ಕ್ರಿಕೆಟ್

ಕಾಬೂಲ್ (ಎಎಫ್‌ಪಿ/ರಾಯಿಟರ್ಸ್): ತಾಲಿಬಾನ್ ಆಡಳಿತಕ್ಕೆ ಹೆದರಿ ಅಫ್ಗನ್‌ನಿಂದ ಬೇರೆ ದೇಶಕ್ಕೆ ಹಾರಲು ನೂರಾರು ಸಂಖ್ಯೆಯಲ್ಲಿ ಜನರು ಕಾಬೂಲ್ ವಿಮಾನ ನಿಲ್ದಾಣದತ್ತ ನಿತ್ಯವೂ ಸಾಗುತ್ತಿದ್ದಾರೆ. ವಿಮಾನ ನಿಲ್ದಾಣದಿಂದ ಕೆಲವೇ ಕಿಲೋಮೀಟರ್ ದೂರದಲ್ಲಿರುವ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಬಿಕೋ ಎನ್ನುತ್ತಿದೆ. ಇದು, ಅಫ್ಗಾನಿಸ್ತಾನದಲ್ಲಿ ಕ್ರಿಕೆಟ್ ಸೇರಿದಂತೆ ಎಲ್ಲ ಕ್ರೀಡೆಯ ಸದ್ಯದ ಸ್ಥಿತಿಗೆ ಕನ್ನಡಿ ಹಿಡಿಯುತ್ತಿದೆ.

ತಾಲಿಬಾನ್ ಆಡಳಿತ ಆರಂಭವಾದ ನಂತರ ದೇಶದ ಕ್ರಿಕೆಟಿಗರು ಆಟದತ್ತ ಗಮನ ಹರಿಸಲು ಸಾಧ್ಯವಾಗದೆ ಸಂಕಷ್ಟದಲ್ಲಿದ್ದಾರೆ. ಶ್ರೀಲಂಕಾ ಎದುರಿನ ಸರಣಿಗೆ ತಂಡ ಸಜ್ಜಾಗುತ್ತಿದೆ. ಪುರುಷರ ಕ್ರಿಕೆಟ್‌ಗೆ ಯಾವ ಧಕ್ಕೆಯೂ ಇಲ್ಲ ಎಂದು ತಾಲಿಬಾನ್ ಹೇಳಿದೆ. ಆದರೂ ದೇಶದಲ್ಲಿ ನಿರ್ಮಾಣಗೊಂಡಿರುವ ವಿಷಮ ಸ್ಥಿತಿ ಕ್ರೀಡೆಯ ಮೇಲೆ ದುಷ್ಪರಿಣಾಮ ಬೀರಿದೆ.

'ಆಟಗಾರರ ಕಣ್ಣೋಟದಲ್ಲೂ ಮಾತಿನಲ್ಲೂ ಆತಂಕ ಎದ್ದು ಕಾಣುತ್ತಿದೆ. ಅವರು ಕಳುಹಿಸುವ ಸಂದೇಶಗಳಲ್ಲೂ ಮನಸ್ಸಿನ ಭಾವನೆಗಳು ಧ್ವನಿಸುತ್ತಿವೆ. ಕ್ರೀಡಾಪಟುವಿಗೆ ತೊಂದರೆ ಮಾಡುವುದಿಲ್ಲ ಎಂದು ತಾಲಿಬಾನ್ ಹೇಳಿದೆ. ಆದರೆ ಯಾವಾಗ ಏನಾಗುತ್ತದೆ ಎಂದು ಯಾರು ಬಲ್ಲ' ಎಂದು ಮಧ್ಯಮ ವೇಗದ ಬೌಲರ್ ನವೀದ್ ಉಲ್ ಹಕ್ ಅವರು ಬಿಬಿಸಿ ರೇಡಿಯೊಗೆ ನೀಡಿರುವ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ವೆಸ್ಟ್ ಇಂಡೀಸ್‌ನಲ್ಲಿ ಕೆರಿಬಿಯನ್ ಲೀಗ್ ಆಡಲು ತೆರಳಿದ್ದ ಅವರು ಈ ಮಾತು ಆಡಿದ್ದರು. 1996ರಿಂದ 2001ರ ಅವಧಿಯಲ್ಲಿ ಕಠಿಣ ಇಸ್ಲಾಮಿಕ್ ಕಾನೂನುಗಳನ್ನು ಜಾರಿಗೆ ತಂದಿದ್ದ ತಾಲಿಬಾನ್ ಪಡೆಯ ಕ್ರೌರ್ಯವನ್ನು ಕಂಡಿದ್ದರಿಂದ ಅವರಿಂದ ಈ ಮಾತು ಬಂದಿತ್ತು. ಕ್ರೀಡೆ ಸೇರಿದಂತೆ ಅನೇಕ ಬಗೆಯ ಮನರಂಜನೆಗಳಿಗೆ ತಾಲಿಬಾನ್‌ನವರು ಅಂದು ಕಡಿವಾಣ ಹಾಕಿದ್ದರು. ಕ್ರೀಡಾಂಗಣಗಳನ್ನು ದುಷ್ಕೃತ್ಯಗಳಿಗಾಗಿ ಬಳಸಿಕೊಂಡಿದ್ದರು.

ತಾಲಿಬಾನ್ ಆಡಳಿತ ಮುಕ್ತಾಯಗೊಂಡ ಪುಟಿದೆದ್ದ ಕ್ರಿಕೆಟ್ ಪಟುಗಳು ಅಮೋಘ ಆಟದ ಮೂಲಕ ಗಮನ ಸೆಳೆದಿದ್ದರು. 2017ರಲ್ಲಿ ಅಫ್ಗನ್ ತಂಡಕ್ಕೆ ಟೆಸ್ಟ್ ಮಾನ್ಯತೆ ಲಭಿಸಿತ್ತು. ಈಗ ಏಕದಿನ ಮತ್ತು ಟಿ20 ಕ್ರಿಕೆಟ್ ರ‍್ಯಾಂಕಿಂಗ್‌ನಲ್ಲಿ ವಿಶ್ವದ ಪ್ರಮುಖ 10 ತಂಡಗಳಲ್ಲಿ ಅಫ್ಗನ್ ಕೂಡ ಒಂದಾಗಿದೆ.



ಅಫ್ಗಾನಿಸ್ತಾನ ಕ್ರಿಕೆಟಿಗರು ಪಂದ್ಯವೊಂದರಲ್ಲಿ ಸಂಭ್ರಮಿಸಿದ ಗಳಿಗೆ –ಎಎಫ್‌ಪಿ ಚಿತ್ರ

ವಿಶ್ವ ಕುಸ್ತಿ ಚಾಂಪಿಯನ್‌ಷಿಪ್: ಬಜರಂಗ್ ಪೂನಿಯಾ ಅಲಭ್ಯ

ನವದೆಹಲಿ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಿರುವ ಬಜರಂಗ್ ಪೂನಿಯಾ ಅವರು ಈ ಬಾರಿಯ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುತ್ತಿಲ್ಲ. ಮೊಣಕಾಲಿನ ಅಸ್ಥಿರಜ್ಜೆಗೆ ಗಾಯ ಆಗಿರುವ ಕಾರಣ ಆರು ವಾರಗಳ ವಿಶ್ರಾಂತಿ ಪಡೆಯುವಂತೆ ಅವರಿಗೆ ಸೂಚಿಸಲಾಗಿದೆ.

ಅಕ್ಟೋಬರ್ ಎರಡರಿಂದ 10ರ ವರೆಗೆ ನಾರ್ವೆಯ ಓಸ್ಲೊದಲ್ಲಿ ವಿಶ್ವ ಚಾಂಪಿಯನ್‌ಷಿಪ್ ನಡೆಯಲಿದೆ. ವಿಶ್ರಾಂತಿ ಮತ್ತು ಚಿಕಿತ್ಸೆ ನಡೆಯಲಿರುವುದರಿಂದ ಇದಕ್ಕೂ ಮೊದಲು ಅವರಿಗೆ ಅಭ್ಯಾಸ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದಿಲ್ಲ.


ಬಜರಂಗ್

ಒಲಿಂಪಿಕ್ಸ್‌ನಲ್ಲಿ ಅವರು ತೀವ್ರ ಗಾಯಗೊಂಡಿದ್ದರು. ಇದಕ್ಕೂ ಮೊದಲು, ಜೂನ್‌ನಲ್ಲಿ ರಷ್ಯಾದಲ್ಲಿ ಸಣ್ಣ ಪ್ರಮಾಣದ ಗಾಯವಾಗಿದ್ದ ಕಾರಣ ಮುಂಬೈನ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿಕೊಂಡಿದ್ದರು.

ಬಿಎಫ್‌ಸಿಗೆ ಮಜಿಯಾ ಸವಾಲು

ಮಾಲೆ (ಪಿಟಿಐ): ನಾಕೌಟ್ ಸ್ಪರ್ಧೆಯಿಂದ ಈಗಾಗಲೇ ಹೊರಬಿದ್ದಿರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಎಎಫ್‌ಸಿ ಕಪ್ ಟೂರ್ನಿಯಲ್ಲಿ ಸಮಾಧಾನದ ಜಯಕ್ಕಾಗಿ ಹೋರಾಡಲಿದೆ. ಮಂಗಳವಾರದ ಪಂದ್ಯದಲ್ಲಿ ಮಜಿಯಾ ಸ್ಪೋರ್ಟ್ಸ್ ಮತ್ತು ರಿಕ್ರಿಯೇಷನ್ ಕ್ಲಬ್‌ಅನ್ನು ಎದುರಿಸಲಿದೆ.

ಸಂಕ್ಷಿಪ್ತ ಸುದ್ದಿ

ಮೈನಿ ಚೊಚ್ಚಲ ಪಾಯಿಂಟ್ ಗಳಿಕೆ

ನ್ಯೂರ್ಬರ್ಗ್ರಿಂಗ್, ಜರ್ಮನಿ (ಪಿಟಿಐ): ಮರ್ಸಿಡಿಸ್ ಎಎಂಜಿ ಚಾಲಕ, ಬೆಂಗಳೂರಿನ ಅರ್ಜುನ್ ಮೈನಿ ಅವರು ಪ್ರತಿಷ್ಠಿತ ಡಿಟಿಎಂ ಚಾಂಪಿಯನ್‌ಷಿಪ್‌ನಲ್ಲಿ ಪಾಯಿಂಟ್‌ಗಳನ್ನು ಗಳಿಸಿದ ಭಾರತದ ಮೊದಲ ರೇಸ್ ಪಟು ಎಂದೆನಿಸಿಕೊಂಡಿದ್ದಾರೆ. ಸತತ ಎರಡು ಬಾರಿ ಅಗ್ರ 10ರೊಳಗೆ ಕಾಣಿಸಿಕೊಳ್ಳುವ ಮೂಲಕ ಅವರು ಈ ಸಾಧನೆ ಮಾಡಿದ್ದಾರೆ.


ಅರ್ಜುನ್ ಮೈನಿ

ಹೆಸರಾಂತ ನ್ಯೂರ್ಬರ್ಗ್ರಿಂಗ್ ಸರ್ಕೀಟ್‌ನಲ್ಲಿ ನಡೆದ 2 ರೇಸ್‌ಗಳಲ್ಲಿ 10ನೇ ಸ್ಥಾನ ಮತ್ತು ಜೀವನಶ್ರೇಷ್ಠ 7ನೇ ಸ್ಥಾನ ಗಳಿಸುವುದರೊಂದಿಗೆ ಮೈನಿ ಗಮನ ಸೆಳೆದರು. ಕೆಲವು ಅನಿರೀಕ್ಷಿತ ಘಟನೆಗಳು ನಡೆದರೂ ಚೇತರಿಸಿಕೊಂಡು ಮುನ್ನುಗ್ಗಿದರು.

ಹಾಕಿ: ಗುರ್ಜೀತ್, ಹರ್ಮನ್‌ಪ್ರೀತ್ ನಾಮನಿರ್ದೇಶನ

ಲಾಸನ್ (ಪಿಟಿಐ): ಭಾರತ ಪುರುಷರ ಹಾಕಿ ತಂಡದ ಡ್ರ್ಯಾಗ್‌ಫ್ಲಿಕರ್ ಹರ್ಮನ್‌ಪ್ರೀತ್ ಸಿಂಗ್, ಮಹಿಳಾ ತಂಡದ ಗುರ್ಜೀತ್ ಕೌರ್ ಅವರನ್ನು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ (ಎಫ್‌ಐಎಚ್) ವಾರ್ಷಿಕ ಆಟಗಾರ ಮತ್ತು ಆಟಗಾರ್ತಿ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

ಅನುಭವಿ ಪಿ.ಆರ್.ಶ್ರೀಜೇಶ್ ಹಾಗೂ ಸವಿತಾ ಪೂನಿಯಾ ಅವರನ್ನು ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳ ವರ್ಷದ ಗೋಲ್‌ಕೀಪರ್ ಪುರಸ್ಕಾರಕ್ಕೆ ಶಿಫಾರಸು ಮಾಡಲಾಗಿದೆ. ಪುರುಷ ಮತ್ತು ಮಹಿಳಾ ತಂಡಗಳ ಕೋಚ್‌ಗಳಾದ ಗ್ರಹಾಂ ರೀಡ್ ಮತ್ತು ಶೋರ್ಡ್ ಮರೈನ್ ಅವರನ್ನು ತರಬೇತುದಾರರ ವಿಭಾಗಕ್ಕೆ ನಾಮನಿರ್ದೇಶನ ಮಾಡಲಾಗಿದೆ.

29ರಂದು ಓಟದ ಸ್ಪರ್ಧೆ

ಬೆಂಗಳೂರು: ರಾಷ್ಟ್ರೀಯ ಕ್ರೀಡಾ ದಿನಾಚರಣೆಯ ಅಂಗವಾಗಿ ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ (ಕೆಎಎ), ಯುವಜನ ಮತ್ತು ಕ್ರೀಡಾ ಇಲಾಖೆ ಹಾಗೂ ಕ್ರೀಡಾ ಭಾರತಿ ಜಂಟಿಯಾಗಿ ಆಗಸ್ಟ್ 29ರಂದು ಓಟದ ಸ್ಪರ್ಧೆಯನ್ನು ಆಯೋಜಿಸಿವೆ.

ಕಂಠೀರವ ಕ್ರೀಡಾಂಗಣದಲ್ಲಿ ವಿವಿಧ ವಯೋಮಾನದವರಿಗಾಗಿ ಸ್ಪರ್ಧೆಗಳು ನಡೆಯಲಿದ್ದು, ನೋಂದಣಿಗೆ ಗುರುವಾರ (ಆ.27) ಕೊನೆಯ ದಿನವಾಗಿದೆ. ಕೆಎಎ ಕಚೇರಿಯಲ್ಲೇ ಹೆಸರು ನೋಂದಾಯಿಸಬೇಕು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಷೇರುಪೇಟೆಯಲ್ಲಿ ಒಳ್ಳೆಯ ಕಂಪನಿ ಹುಡುಕೋದು ಹೇಗೆ?

ಷೇರು ಮಾತು
ಶರತ್ ಎಂ.ಎಸ್.



ಷೇರುಪೇಟೆಯಲ್ಲಿ ಇರುವ ಸಾವಿರಾರು ಕಂಪನಿಗಳ ನಡುವೆ ಉತ್ತಮ ಕಂಪನಿಗಳನ್ನು ಹುಡುಕಿ ಹೂಡಿಕೆ ಮಾಡುವುದು ಹೇಗೆ ಎನ್ನುವುದು ಪ್ರತಿ ಹೂಡಿಕೆದಾರನ ಪ್ರಶ್ನೆ. ಇದಕ್ಕೆ ಉತ್ತರ ಹುಡುಕುವ ಹಾದಿಯಲ್ಲಿ ಅನೇಕರು ಮನಸ್ಸಿಗೆ ತೋಚಿದ ಕಂಪನಿಗಳಲ್ಲಿ ಹಣ ಹಾಕಿ ನಷ್ಟ ಅನುಭವಿಸಿರುತ್ತಾರೆ.

ಷೇರು ಹೂಡಿಕೆಯ ಬಗ್ಗೆ ಇರುವ ಜ್ಞಾನದ ಕೊರತೆಯೇ ಇದಕ್ಕೆ ಪ್ರಮುಖ ಕಾರಣ. ಯಾವುದೇ ಕಂಪನಿಯ ಷೇರಿನಲ್ಲಿ ದುಡ್ಡು ಹಾಕುವ ಮುನ್ನ ಅದರ ಪೂರ್ವಾಪರ ಅರಿತು ಮುನ್ನಡೆಯಬೇಕು. ಈ ಅರಿವಿಗೆ ನೆರವಾಗುವ ಫಂಡಮೆಂಟಲ್ ಅನಾಲಿಸಿಸ್ (ಮೂಲಭೂತ ವಿಶ್ಲೇಷಣೆ) ಬಗ್ಗೆ ತಿಳಿದುಕೊಳ್ಳೋಣ.

ಕಂಪನಿಯೊಂದನ್ನು ಎಲ್ಲಾ ಮಜಲುಗಳಿಂದ ಅಧ್ಯಯನ ಮಾಡಿ, ಷೇರಿನ ಆಂತರಿಕ ಮೌಲ್ಯ (Intrinsic value) ಅರಿಯುವ ಒಂದು ಸಮಗ್ರ ಪ್ರಕ್ರಿಯೆಯೇ ಫಂಡಮೆಂಟಲ್ ಅನಾಲಿಸಿಸ್. ಕಂಪನಿಯೊಂದರಲ್ಲಿ ನೀವು ದೀರ್ಘಾವಧಿಗೆ (ಸುಮಾರು 5ರಿಂದ 10 ವರ್ಷ) ಹೂಡಿಕೆ ಮಾಡುತ್ತೀರಿ ಎಂದಾದರೆ ಆ ಕಂಪನಿಯ ಷೇರಿನ ಮೌಲ್ಯವನ್ನು ಅಳೆದು–ತೂಗಿ ನೋಡುವುದು ಬಹಳ ಮುಖ್ಯ. ಫಂಡಮೆಂಟಲ್ ಅನಾಲಿಸಿಸ್ ಮಾಡುವುದರಿಂದ ಒಳ್ಳೆಯ ಕಂಪನಿ ಯಾವುದು, ಜೊಳ್ಳು ಕಂಪನಿ ಯಾವುದು ಎನ್ನುವುದನ್ನು ತಿಳಿಯಲು ಸುಲಭವಾಗುತ್ತದೆ.


ಷೇರು ಮಾರುಕಟ್ಟೆಯಲ್ಲಿ ಉತ್ತಮ ಕಂಪನಿಗಳನ್ನು ಹುಡುಕಿ ಹಣ ಹೂಡಿಕೆ ಮಾಡಿದರೆ ಸಂಪತ್ತು ಬೆಳೆಯುತ್ತದೆ, ಅಂದಾಜಿಗೆ ಗುಂಡು ಹಾರಿಸಿ ಸಿಕ್ಕ ಸಿಕ್ಕ ಕಂಪನಿಗಳಲ್ಲಿ ಹೂಡಿಕೆ ಮಾಡಿದರೆ ಸಂಪತ್ತು ಕರಗುವುದು ನಿಶ್ಚಿತ. ಒಳ್ಳೆಯ ಕಂಪನಿ ಆಯ್ಕೆ ಮಾಡಿ ಹೂಡಿಕೆ ಮಾಡಿದರೆ ಸಂಪತ್ತು ಹೇಗೆ ವೃದ್ಧಿಸುತ್ತದೆ ಎನ್ನುವುದಕ್ಕೆ ಇನ್ಫೊಸಿಸ್ ಷೇರು ಒಳ್ಳೆಯ ಉದಾಹರಣೆ. ಷೇರು ಆಯ್ಕೆಯಲ್ಲಿ ಎಡವಿದರೆ ಸಂಪತ್ತು ಹೇಗೆ ಕರಗಿ ಹೋಗುತ್ತದೆ ಎನ್ನುವುದಕ್ಕೆ ಕೂಡ ಹಲವು ಉದಾಹರಣೆಗಳು ನಮ್ಮ ಮುಂದಿವೆ. ಹಾಗಾಗಿ ಹೂಡಿಕೆಗೂ ಮುನ್ನ ಫಂಡಮೆಂಟಲ್ ಅನಾಲಿಸಿಸ್ ಎಂಬ ಪ್ರಬಲ ಅಸ್ತ್ರವನ್ನು ಬಳಸಿಕೊಳ್ಳಬೇಕು.

ಫಂಡಮೆಂಟಲ್ ಅನಾಲಿಸಿಸ್ ಏನನ್ನು ಒಳಗೊಂಡಿರುತ್ತೆ?: ಕಂಪನಿಯ ವಾರ್ಷಿಕ ವರದಿ, ಆದಾಯ ಮತ್ತು ಲಾಭದ ಮಾಹಿತಿ, ವರ್ಷಗಳಿಂದ ಲಾಭ–ನಷ್ಟದ ಲೆಕ್ಕಾಚಾರ, ನಿರ್ದಿಷ್ಟ ವಲಯದಲ್ಲಿರುವ ಇತರ ಕಂಪನಿಗಳ ಸಾಧನೆಯ ವರದಿ, ಕಂಪನಿಯು ಮಾಡಿರುವ ಸಾಲ, ಕಂಪನಿಯಲ್ಲಿ ಆಡಳಿತ ಮಂಡಳಿಯವರ ಷೇರಿನ ಪಾಲು, ಕಂಪನಿಯ ಮೇಲಿರುವ ಕಾನೂನಿನ ವ್ಯಾಜ್ಯಗಳು, ಕಂಪನಿಯ ಮೌಲ್ಯ ಅಂದಾಜು ಮಾಡುವುದು, ಕಂಪನಿಯ ಈವರೆಗಿನ ಷೇರಿನ ಮೇಲಿನ ಗಳಿಕೆ ಮೌಲ್ಯ, ಕಂಪನಿಯ ನಗದು ಹರಿವಿನ ಸ್ಥಿತಿಗತಿ, ಕಂಪನಿಯ ಒಟ್ಟಾರೆ ಮೌಲ್ಯಮಾಪನ ಹೀಗೆ ಹಲವು ಮಾನದಂಡಗಳನ್ನು ಬಳಸಿ ಫಂಡಮೆಂಟಲ್ ಅನಾಲಿಸಿಸ್ ಮಾಡಬಹುದು.

ಹೀಗೆ ಮಾಡುವುದರಿಂದ ಕಂಪನಿಯೊಂದಕ್ಕಿರುವ ಸಾಮರ್ಥ್ಯ, ದೌರ್ಬಲ್ಯ, ಸವಾಲು ಮತ್ತು ಅವಕಾಶಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಫಂಡಮೆಂಟಲ್ ಅನಾಲಿಸಿಸ್‌ನ ಬಳಿಕ ನಿರ್ದಿಷ್ಟ ಕಂಪನಿಯ ಷೇರಿನಲ್ಲಿ ಹೂಡಿಕೆ ಮಾಡಬೇಕೋ ಬೇಡವೋ ಎನ್ನುವುದು ಅರಿವಿಗೆ ಬರುತ್ತದೆ.

ಇದು ಕಬ್ಬಿಣದ ಕಡಲೆಯಲ್ಲ: ಫಂಡಮೆಂಟಲ್ ಅನಾಲಿಸಿಸ್ ಮಾಡಲು ಚಾರ್ಟರ್ಡ್ ಅಕೌಂಟೆಂಟ್ ಅಥವಾ ವಾಣಿಜ್ಯಶಾಸ್ತ್ರದ ಪರಿಣತರಾಗಿರಬೇಕು ಎಂಬ ತಪ್ಪು ಕಲ್ಪನೆ ಕೆಲವರಲ್ಲಿದೆ. ಸಾಮಾನ್ಯ ಜ್ಞಾನದೊಂದಿಗೆ ಕೂಡುವುದು, ಕಳೆಯುವುದು, ಗುಣಿಸುವುದು ಮತ್ತು ಭಾಗಿಸುವುದು ಗೊತ್ತಿದ್ದು, ಉದ್ಯಮದ ಬಗ್ಗೆ ಅಂದಾಜಿದ್ದರೆ ಸಾಕು, ಫಂಡಮೆಂಟಲ್ ಅನಾಲಿಸಿಸ್ ಮಾಡಬಹುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,450
ಇಂದಿನ ಅಂತ್ಯ	16,496
▲	46
ದಿನದ ಗರಿಷ್ಠ	16,592

ವಿನಿಮಯ ದರ

$ ಡಾಲರ್	74.22
£ ಪೌಂಡ್	101.42
€ ಯುರೊ	87
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹410

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1540)
ಸೋಯಾ (ರಿಫೈನ್ಡ್)	₹1390 (1390)
ಸೂರ್ಯಕಾಂತಿ (ರಿಫೈನ್ಡ್)	₹1490(1480)
ಪಾಮೋಲಿನ್	₹1260 (1255)

ಐ.ಟಿ. ಪೋರ್ಟಲ್: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಸೂಚನೆ

ಸೆ. 15ರೊಳಗೆ ಸಮಸ್ಯೆ ಬಗೆಹರಿಸಲು ತಾಕೀತು

ನವದೆಹಲಿ (ಪಿಟಿಐ): ದೇಶದ ಹೊಸ ಐ.ಟಿ. ಪೋರ್ಟಲ್‌ನಲ್ಲಿ ಇರುವ ಸಮಸ್ಯೆಗಳನ್ನು ಸೆಪ್ಟೆಂಬರ್ 15ರೊಳಗೆ ಪರಿಹರಿಸಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಇನ್ಫೊಸಿಸ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಲೀಲ್ ಪಾರೇಖ್ ಅವರಿಗೆ ತಾಕೀತು ಮಾಡಿದ್ದಾರೆ.

ನಿರ್ಮಲಾ ಅವರು ಐ.ಟಿ. ಪೋರ್ಟಲ್ ವಿಚಾರವಾಗಿ ತೆರಿಗೆ ಪಾವತಿದಾರರು ಹಾಗೂ ಸರ್ಕಾರ ಹೊಂದಿರುವ ಅಸಮಾಧಾನವನ್ನು, ಕಳವಳವನ್ನು ಕೂಡ ಪಾರೇಖ್ ಅವರಿಗೆ ತಿಳಿಸಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆಯ ಪ್ರಕಟಣೆ ಹೇಳಿದೆ.


ಸಲೀಲ್ ಪಾರೇಖ್

ಹೊಸ ಐ.ಟಿ. ಪೋರ್ಟಲ್‌ಅನ್ನು ಇನ್ಫೊಸಿಸ್ ಅಭಿವೃದ್ಧಿಪಡಿಸಿದೆ.

ಪಾರೇಖ್, ನಿರ್ಮಲಾ ಅವರನ್ನು ಸೋಮವಾರ ಭೇಟಿ ಮಾಡಿದರು. ಪೋರ್ಟಲ್ ಚಾಲನೆ ಪಡೆದು ಎರಡೂವರೆ ತಿಂಗಳು ಕಳೆದಿದ್ದರೂ, ತಾಂತ್ರಿಕ ತೊಂದರೆಗಳನ್ನು ಬಗೆಹರಿಸದೆ ಇರುವುದಕ್ಕೆ ಕಾರಣ ಏನು ಎಂಬುದನ್ನು ಖುದ್ದಾಗಿ ತಿಳಿಸುವಂತೆ ಪಾರೇಖ್ ಅವರಿಗೆ ಸೂಚಿಸಲಾಗಿದೆ ಎಂದು ಇಲಾಖೆಯು ಭಾನುವಾರ ಹೇಳಿತ್ತು.

'ಸಮಸ್ಯೆಗಳನ್ನು ಸರಿಪಡಿಸಲಾಗುತ್ತಿದೆ. ಈ ಯೋಜನೆಗಾಗಿ 750ಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಕಂಪನಿಯ ಸಿಒಒ ಪ್ರವೀಣ್ ರಾವ್ ಅವರು ಯೋಜನೆಯ ಉಸ್ತುವಾರಿಯನ್ನು ಖುದ್ದಾಗಿ ನೋಡಿಕೊಳ್ಳುತ್ತಿದ್ದಾರೆ. ಪೋರ್ಟಲ್‌ನಲ್ಲಿ ಸಮಸ್ಯೆ ಇಲ್ಲದಂತೆ ಮಾಡಲು ಕಂಪನಿಯು ತ್ವರಿತವಾಗಿ ಕ್ರಮ ಕೈಗೊಳ್ಳುತ್ತಿದೆ' ಎಂದು ಪಾರೇಖ್ ಅವರು, ಸಚಿವರಿಗೆ ವಿವರಿಸಿದರು ಎಂದು ಹೇಳಿಕೆ ತಿಳಿಸಿದೆ. ಪೋರ್ಟಲ್‌ಅನ್ನು ಜೂನ್ 7ರಂದು ಬಳಕೆಗೆ ಮುಕ್ತವಾಗಿಸಲಾಗಿದೆ. ಆ.21 ಹಾಗೂ 22ರಂದು ಪೋರ್ಟಲ್ ಬಳಕೆಗೆ ಲಭ್ಯವಿರಲಿಲ್ಲ. ಆ. 22ರ ರಾತ್ರಿಯ ಹೊತ್ತಿಗೆ ಪೋರ್ಟಲ್ ಸೇವೆಗೆ ಲಭ್ಯ ವಾಯಿತು.ಪೋರ್ಟಲ್‌ನಲ್ಲಿನ ಸಮಸ್ಯೆಗಳ ವಿಚಾರವಾಗಿ ನಿರ್ಮಲಾ ಅವರು ಇನ್ಫೊಸಿಸ್‌ನ ತಂಡವನ್ನು ಭೇಟಿ ಆಗುತ್ತಿರುವುದು ಇದು ಎರಡನೆಯ ಬಾರಿ. ಸಚಿವರು ಜೂನ್ 22ರಂದು ಪಾರೇಖ್ ಮತ್ತು ಇನ್ಫೊಸಿಸ್ ಸಿಒಒ ಪ್ರವೀಣ್ ರಾವ್ ಅವರನ್ನು ಭೇಟಿ ಮಾಡಿದ್ದರು.

ಹೊಸ ಪೋರ್ಟಲ್ ಅಭಿವೃದ್ಧಿಪಡಿಸಲು ಇನ್ಫೊಸಿಸ್‌ಗೆ 2019ರಲ್ಲಿ ಗುತ್ತಿಗೆ ನೀಡಲಾಯಿತು. ಐ.ಟಿ. ವಿವರಪರಿಶೀಲಿಸಲು ತೆಗೆದುಕೊಳ್ಳುವ ಸಮಯವನ್ನು 63 ದಿನಗಳಿಂದ ಒಂದು ದಿನಕ್ಕೆ ಇಳಿಸುವ ಉದ್ದೇಶ ಕೂಡ ಹೊಸ ಪೋರ್ಟಲ್ ಅಭಿವೃದ್ಧಿಪಡಿಸುವುದರ ಹಿಂದೆ ಇತ್ತು. ಆದರೆ ಹೊಸ ಪೋರ್ಟಲ್ ಶುರುವಾದ ದಿನದಿಂದಲೂ ತಾಂತ್ರಿಕ ಸಮಸ್ಯೆಗಳನ್ನು ಎದುರಿಸುತ್ತಿದೆ.

ಕ್ವಾರ್ಟರ್‌ಫೈನಲ್‌ಗೆ ಸಾನಿಯಾ ಮಿರ್ಜಾ

ಕ್ಲೀವ್‌ಲ್ಯಾಂಡ್, (ಪಿಟಿಐ): ಭಾರತದ ಸಾನಿಯಾ ಮಿರ್ಜಾ ಹಾಗೂ ಅಮೆರಿಕದ ಕ್ರಿಸ್ಟಿನಾ ಮೆಕಾಲೆ, ಕ್ಲೀವ್‌ಲ್ಯಾಂಡ್ ಟೆನಿಸ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ. ಮಹಿಳಾ ಡಬಲ್ಸ್ ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಈ ಜೋಡಿ 6-3 6-2ರಿಂದ ಜಾರ್ಜಿಯಾದ ಕಲಾಶ್ನಿಕೊವಾ ಮತ್ತು ರುಮೇನಿಯಾದ ಆ್ಯಂಡ್ರಿಯಾರನ್ನು ಮಣಿಸಿದರು.

ರದ್ದಾದ ಪಾಲಿಸಿ ನವೀಕರಣ ಅಭಿಯಾನ

ಬೆಂಗಳೂರು: ಭಾರತೀಯ ಜೀವ ವಿಮಾ ನಿಗಮವು (ಎಲ್ಐಸಿ) ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ, ರದ್ದಾಗಿರುವ ವಿಮೆ ಯೋಜನೆಯನ್ನು ನವೀಕರಿಸುವ 'ವಿಶೇಷ ನವೀಕರಣ ಅಭಿಯಾನ' ಆರಂಭಿಸಿದೆ.

ರದ್ದಾಗಿರುವ ವೈಯಕ್ತಿಕ ಯೋಜನೆಗಳಿಗೆ ಇದು ಅನ್ವಯಿಸಲಿದೆ. ಸೋಮವಾರದಿಂದ ಅಕ್ಟೋಬರ್ 22ರವರೆಗೆ ಈ ಅಭಿಯಾನ ನಡೆಯಲಿದೆ. ನಿರ್ದಿಷ್ಟ ಅರ್ಹ ಯೋಜನೆಗಳ ಪಾಲಿಸಿಯನ್ನು ಕೆಲವು ಷರತ್ತುಗಳಿಗೆ ಒಳಪಟ್ಟು, ಮೊದಲ ಬಾರಿಗೆ ಪಾವತಿಸದೇ ಇರುವ ಪ್ರೀಮಿಯಂ ದಿನಾಂಕದಿಂದ ಐದು ವರ್ಷಗಳ ಒಳಗೆ ನವೀಕರಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಟರ್ಮ್ ಅಶ್ಯೂರೆನ್ಸ್ ಮತ್ತು ಹೈ ರಿಸ್ಕ್ ಪ್ಲಾನ್‌ಗಳನ್ನು ಹೊರತುಪಡಿಸಿ, ಪಾವತಿಸದೇ ಇರುವ ಒಟ್ಟು ಪ್ರೀಮಿಯಂ ಪರಿಗಣಿಸಿ ವಿಳಂಬ ಶುಲ್ಕದಲ್ಲಿ ರಿಯಾಯಿತಿ ನೀಡಲಾಗುತ್ತದೆ. ಅರ್ಹ ಆರೋಗ್ಯ ಮತ್ತು ಕಿರು ವಿಮಾ ಯೋಜನೆಗಳು ವಿಳಂಬ ಶುಲ್ಕದಲ್ಲಿ ರಿಯಾಯಿತಿ ಪಡೆಯಬಹುದು.

42.8 ಲಕ್ಷ ಗ್ರಾಹಕರ ಕಳೆದುಕೊಂಡ ವಿಐಎಲ್

ನವದೆಹಲಿ (ಪಿಟಿಐ): ನಷ್ಟದಲ್ಲಿರುವ ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ಕಂಪನಿಯು ಜೂನ್‌ನಲ್ಲಿಯೂ ಮೊಬೈಲ್ ಬಳಕೆದಾರರನ್ನು ಕಳೆದುಕೊಂಡಿದೆ. ಇದೇ ವೇಳೆ ಜಿಯೊ ಮತ್ತು ಭಾರ್ತಿ ಏರ್‌ಟೆಲ್ ಕಂಪನಿಗಳ ಬಳಕೆದಾರರ ಸಂಖ್ಯೆ ಹೆಚ್ಚಾಗಿದೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಮಾಹಿತಿ ನೀಡಿದೆ.

ವೊಡಾಫೋನ್ ಐಡಿಯಾ ಕಂಪನಿಯು ಜೂನ್‌ನಲ್ಲಿ 42.8 ಲಕ್ಷ ಮೊಬೈಲ್ ಬಳಕೆದಾರರನ್ನು ಕಳೆದುಕೊಂಡಿದೆ. ಇದರಿಂದ ಕಂಪನಿಯ ಒಟ್ಟಾರೆ ಗ್ರಾಹಕರ ಸಂಖ್ಯೆಯು 27.3 ಕೋಟಿಗೆ ಇಳಿಕೆ ಆಗಿದೆ.

ರಿಲಯನ್ಸ್ ಜಿಯೊಗೆ ಜೂನ್‌ನಲ್ಲಿ ಹೊಸದಾಗಿ 54.6 ಲಕ್ಷ ಬಳಕೆದಾರರು ಸೇರ್ಪಡೆಯಾಗಿದ್ದು, ಒಟ್ಟು ಬಳಕೆದಾರರ ಸಂಖ್ಯೆ 43.6 ಕೋಟಿಗೆ ಏರಿಕೆಯಾಗಿದೆ. ಭಾರ್ತಿ ಏರ್‌ಟೆಲ್ ಕಂಪನಿಯ ಬಳಕೆದಾರ ಸಂಖ್ಯೆಯು 38.1 ಲಕ್ಷದಷ್ಟು ಹೆಚ್ಚಾಗಿದೆ.

ಎಚ್‌ಯುಐಡಿ ಕೈಬಿಡುವಂತೆ ಚಿನ್ನಾಭರಣ ವರ್ತಕರ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯ ಮಾಡಿರುವುದಕ್ಕೆ ನಮ್ಮ ವಿರೋಧ ಇಲ್ಲ. ಆದರೆ, ಎಚ್‌ಯುಐಡಿಯಿಂದಾಗಿ (ಹಾಲ್‌ಮಾರ್ಕಿಂಗ್ ಯೂನಿಕ್ ಐಡಿ) ತೊಂದರೆ ಆಗುತ್ತಿದೆ. ಹಾಗಾಗಿ ಅದನ್ನು ಕೈಬಿಡುವಂತೆ ಪ್ರತಿಭಟನೆ ನಡೆಸಲಾಗಿದೆ' ಎಂದು ಬೆಂಗಳೂರು ಚಿನ್ನಾಭರಣ ವರ್ತಕರ ಸಂಘದ ಅಧ್ಯಕ್ಷ ವಿದ್ಯಾಸಾಗರ್ ಹೇಳಿದರು.

'ಪ್ರತಿ ಆಭರಣಕ್ಕೆ ಆರು ಸಂಖ್ಯೆಗಳ ಒಂದು ಎಚ್‌ಯುಐಡಿ ನೀಡಲಾಗುತ್ತದೆ. ಆದರೆ, ಒಂದಕ್ಕಿಂತ ಹೆಚ್ಚು ಆಭರಣಗಳಿಗೆ ಒಂದೇ ಎಚ್‌ಯುಐಡಿ ಬರುತ್ತಿದೆ. ಇದು ಬಹುದೊಡ್ಡ ಸಮಸ್ಯೆ ಆಗಿದೆ. ವಿನ್ಯಾಸದಲ್ಲಿ ಬದಲಾವಣೆ ಮಾಡಬೇಕು ಎಂದಾದರೆ ಆಗ ಇನ್ನೊಂದು ಎಚ್‌ಯುಐಡಿ ಹಾಕಲು ಆಗುವುದಿಲ್ಲ. ವ್ಯಾಪಾರದಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಲು ಎಚ್‌ಯುಐಡಿ ನೆರವಾಗುತ್ತದೆ. ಆದರೆ, ಈ ವ್ಯವಸ್ಥೆಯಿಂದ ವ್ಯಾಪಾರಿಗಳಿಗೆ ಹೆಚ್ಚು ಸಮಸ್ಯೆ ಆಗುತ್ತಿದೆ' ಎಂದರು.

ಉತ್ತಮ ಸ್ಪಂದನೆ: (ಪಿಟಿಐ ವರದಿ): ಕೇಂದ್ರ ಸರ್ಕಾರವು ಆಭರಣಗಳ ಮೇಲೆ ಎಚ್‌ಯುಐಡಿ ಕಡ್ಡಾಯಗೊಳಿಸಿರುವುದನ್ನು ವಿರೋಧಿಸಿ ಸೋಮವಾರ ನಡೆಸಿದ ಸಾಂಕೇತಿಕ ಪ್ರತಿಭಟನೆಗೆ ದೇಶದಾದ್ಯಂತ ಉತ್ತಮ ಸ್ಪಂದನೆ ದೊರೆಯಿತು ಎಂದು ಹರಳು ಮತ್ತು ಚಿನ್ನಾಭರಣ ಮಂಡಳಿಯು ಹೇಳಿದೆ.

ಹಬ್ಬಕ್ಕೆ ಟಾಟಾ ಮೋಟರ್ಸ್ ಮಿನಿ ಎಸ್‌ಯುವಿ 'ಪಂಚ್'

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ಈ ಬಾರಿಯ ಹಬ್ಬದ ಋತುವಿನಲ್ಲಿ ತನ್ನ ಹೊಸ ಮಿನಿ ಎಸ್‌ಯುವಿ 'ಪಂಚ್' ಬಿಡುಗಡೆ ಮಾಡುವುದಾಗಿ ಸೋಮವಾರ ತಿಳಿಸಿದೆ.

ಕಂಪನಿಯು 2020ರ ವಾಹನ ಮೇಳದಲ್ಲಿ ಪ್ರದರ್ಶಿಸಿದ್ದ ಎಚ್2ಎಕ್ಸ್ ಕಾನ್ಸೆಪ್ಟ್ ಕಾರಿನ ಆಧಾರದ ಮೇಲೆ 'ಪಂಚ್' ಎಸ್‌ಯುವಿ ರೂಪಿಸಲಾಗಿದೆ. ದೀಪಾವಳಿ ವೇಳೆಗೆ ಇದು ಮಾರುಕಟ್ಟೆಗೆ ಬರುವ ನಿರೀಕ್ಷೆ ಇದೆ.ಹೆಸರೇ ಸೂಚಿಸುವಂತೆ 'ಟಾಟಾ ಪಂಚ್' ಶಕ್ತಿಯುತ ವಾಹನವಾಗಿರಲಿದೆ ಎಂದು ಕಂಪನಿಯ ಪ್ರಯಾಣಿಕ ವಾಹನ ವಿಭಾಗದ ಅಧ್ಯಕ್ಷ ಶೈಲೇಶ್‌ಚಂದ್ರ ಹೇಳಿದ್ದಾರೆ.



ಎ ಎಲ್ ಎ ಫ್ ಎ – ಎ ಆ ರ್ ಸಿ (ಅಜೈಲ್ ಲೈಟ್ ಫ್ಲೆಕ್ಸಿಬಲ್ ಅಡ್ವಾನ್ಸ್ಡ್ ಆರ್ಕಿಟೆಕ್ಚರ್)ನಿಂದ ಸಿದ್ಧಪಡಿಸಿರುವ ಕಂಪನಿಯ ಮೊದಲ ಎಸ್‌ಯುವಿ ಇದಾಗಿದೆ. ಎಸ್‌ಯುವಿ ಲಕ್ಷಣಗಳನ್ನು ಒಳಗೊಂಡಿರುವ ಕಾಂಪ್ಯಾಕ್ಟ್ ಸಿಟಿ ಕಾರ್ ಬಯಸುವ ಗ್ರಾಹಕರಿಗೆ ಹೇಳಿ ಮಾಡಿಸಿದ್ದಾಗಿದೆ. ಕಂಪನಿಯ ಎಸ್‌ಯುವಿ ಕುಟುಂಬಕ್ಕೆ 4ನೇ ಸೇರ್ಪಡೆ ಎಂದು ಕಂಪನಿಯು ಪ್ರಕಟಣೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ
23-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1550)
ಒಂದು ವಾರದ ಡೆಲಿವರಿ	1535 (1545)
ಸೋಯಾ ಕಚ್ಚಾ	1360 (1365)
ಪಾಮ್ ವಾರದ ಡೆಲಿವರಿ	1258 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1440 (1430)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,200 (47,050)
ಬೆಳ್ಳಿ ಕೆ.ಜಿ 62,700 (62,000)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-46000
ಹಳತು	42500-51000
ಕುಮಟ	
ಚಿಪ್ಪು	32699-34589
ಕೋಕ	22569-33019
ಫ್ಯಾಕ್ಟರಿ	15599-21269
ಹಳೆಚಾಲಿ	41600-43599
ಹೊಸಚಾಲಿ	36000-46000
ಪುತ್ತೂರು	
ಕೋಕ	10500-26000
ಹೊಸತು	26889-35399
ಸಿದ್ದಾಪುರ	
ಬಿಳಿಗೋಟು	28799-35199
ಚಾಲಿ	37780-41099
ಕೋಕ	24899-34699
ಕೆಂಪುಗೋಟು	28012-33111
ರಾಶಿ	40189-43449
ತಟ್ಟಿಬೆಟ್ಟೆ	35109-39669
ಶಿರಸಿ	
ಬೆಟ್ಟೆ	35319-40301
ಬಿಳಿಗೋಟು	28099-37089
ಚಾಲಿ	38999-41299
ರಾಶಿ	40109-44039
ಯಲ್ಲಾಪುರ	
ಬಿಳಿಗೋಟು	30899-34836
ಚಾಲಿ	37169-41500
ಕೋಕ	23772-32646
ಕೆಂಪುಗೋಟು	30899-34836
ರಾಶಿ	41110-46575
ತಟ್ಟಿಬೆಟ್ಟೆ	35919-40940
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	46259-47739
ರಾಶಿ	42036-46599
ಗೊರಬಲು	17510-37009
ಸಾಗರ	
ಬಿಳಿಗೋಟು	26889-35399
ಕೋಕ	23699-37819
ಚಾಲಿ	37855-40189
ಕೆಂಪುಗೋಟು	33099-38299
ರಾಶಿ	39170-46599
ಸಿಪ್ಪೆಗೋಟು	10500-23292
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	258-445
ದ್ವಿತಳಿ (ಬಿ.ವಿ)	293-546

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	13550
ಎಸಿ	6150
ಆರ್‌ಪಿ	6050
ಆರ್‌ಸಿ	3460